# ಕರ್ನಾಟಕ ವಿಕಾಸ

KARNATAKA VIKAS


K¦æ April
ªÉÄ May
dÆ£ï June
2014 2014





¸£Á¡£å UÁ«ÄÃuÁ©üªÀ¢ ªÀÄvÀÄ ¥ÀAZÁAiÀÄvï gÁeï
¸ÀaªÀjAz EwÃZÉU ¨¼ÀUÁ«AiÀÄ°è £qÉzÀ g¸É
PÁªÄUÁjU¼ ZÁ®£Á ¸ªÀiÁgA¨sz° ¥zÁ£ªÄAw
UÁªÄ ¸qPï AiÆÃd£ - II gÀ Pê¦ r ©qÄUq

# f¯Á ¥AZÁAiÄvï, PÆ¥½. ZÊv£å gx AiiÁv



ªÄºÁvÀUÁA¢ gÁ¶ÃAiÄ UÁ«ÄÃt GzÆåÃU SÁvj AiÆÃd£ ºÁUÆ ¤ªÄð® ¨Ágv C©AiiÁ£ AiÆÃd£
PÄjvÄ CjªÅ ªÄÆr¸®Ä ZÊv£å gxAiiÁv PÁAiÄðPªÄU½U EwÃZU ªiÁ£å ¸t ¤ÃgÁªj ¸aªgÄ ªÄvÄ
f¯Á G¸ÄªÁj ¸aªgÁz ²Ã ²ªgÁeï vAUqV EªjAz ZÁ®£. ±Á¸PgÁz ²Ã gÁWªÃAz »mÁß¼,
²Ã d£Ázð£, CzåPgÄ, f¯Á ¥AZÁAiÄvï PÆ¥¼ ªÄvÄ Evg »jAiÄ C¢PÁjU¼ G¥¹w.



¸½ÃAiÄ UÁªÄ ¥AZÁAiÄvïU¼ ªÄÆ®PªÇ ZÊv£å gxAiiÁv ªÄvÄ P¯ÁeÁx vAqU½Az CjªÅ
ªÄÆr¸Äª PÁAiÄðPªÄU½U ZÁ®£

# ಕರ್ನಾಟಕ ವಿಕಾಸ

ಏಪ್ರಿಲ್, ಮೇ, ಜೂನ್, 2014
April, May, June, 2014

ಸಂಪುಟ: 55
Volume: 55
ಸಂಚಿಕೆ : 5–7
Issue : 5-7


## ಈ ಸಂಚಿಕೆಯೊಳಗೆ


5. ಸಚಿವಾಲಯದಿಂದ ಸಂದೇಶ

7. ಮಾಹಿತಿ – ವೈ. ಮಹಾಂಕಾಳಪ್ಪ

10. ಮುಖಪುಟ ವರದಿ


15 ಲೇಖನಗಳು – ರವಿ ಎಸ್. ಸೂರನ್
– ಎನ್. ಆರ್. ಪಾಟೀಲ

24. ಚಿಂತನೆ – ಅಪ್ಪೆಗೆರೆ ತಿಮ್ಮರಾಜು

28. ಪಂಚತಂತ್ರ ವರದಿ

29. ಸಕಾಲ ವರದಿ

30. ಸುತ್ತೋಲೆಗಳು


ಪ್ರಕಾಶಕರು
**ಕೆ. ಯಾಲಕ್ಕಿ ಗೌಡ**
ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು
**ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿಗಳು

ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು
**ವೈ. ಮಹಾಂಕಾಳಪ್ಪ**

ಸಹಾಯಕ ಸಂಪಾದಕರು
**ಡಾ॥ ಎಂ.ಎಸ್.ಮಂಜುನಾಥ**
**ನಾಗರಾಜ್ ಬಿ ವಾಗಾ**

**ವಾರ್ಷಿಕ ಚಂದಾ**
ವ್ಯಕ್ತಿಗಳಿಗೆ ರೂ. 100/–
ಸಂಸ್ಥೆಗಳಿಗೆ ರೂ 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ
ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ
ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು

**ಕಛೇರಿ ವಿಳಾಸ**
ಸಂಪಾದಕರು, ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ1
ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ
ಬೆಂಗಳೂರು – 560 001.
ದೂರವಾಣಿ : 080–22353857
www.rdpr.kar.nic.in
email : kvrdpr@gmail.com


**ವಿಶೇಷ ಸೂಚನೆ**
ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ
ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು
ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ
ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

## ಪತ್ರಿಕೆಯ ಕುರಿತು
# ನಿಮ್ಮ ನುಡಿ



ಮಾನ್ಯರೆ,

ಸಂಪಾದಕರಿಗೆ ನಮಸ್ಕಾರಗಳು. ಇತ್ತೀಚೆಗೆ ಪತ್ರಿಕೆ ಬಹಳ ಚೆನ್ನಾಗಿ ಬರುತ್ತಿದೆ. ಗ್ರಾಮೀಣ ಜನರ ಆಶೋತ್ತರಗಳಿಗೆ ಪರಿವರ್ತನೆಗೆ ಸೂಕ್ತವಾಗಿ ಬರುತ್ತಿದೆ.

**ಅಪ್ಪಗೆರೆ ತಿಮ್ಮರಾಜು,**
ಅಂತರರಾಷ್ಟ್ರ ಜನಪದ ಗಾಯಕರು,
ನಂ.28, 10ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ,
ಹಂಪಿನಗರ, ವಿಜಯನಗರ, ಬೆಂಗಳೂರು-560040.

ಸಂಪಾದಕರಿಗೆ ವಂದನೆಗಳು, ತಮ್ಮ ಪತ್ರಿಕೆಯನ್ನು ಓದಿ ತುಂಬಾ ಸಂತೋಷವಾಗುತ್ತೆ. ಹಾಗೆ ಇನ್ನು ಹೆಚ್ಚು ಹೆಚ್ಚು ವಿಷಯಗಳನ್ನು ಹಳ್ಳಿಯ ಕಡೆಗೆ ಗಮನ ಸೆಳೆಯುವ ಹಾಗೆ ಮಾಡಿದರೆ ತುಂಬಾ ಒಳ್ಳೆಯದು. ಹಳ್ಳಿಯ ಜೀವನವೇ ಒಳ್ಳೆಯದು ಅಂತ ಹಿಂದಿನ ಹಿರಿಯರು, ಗುರು ಹಿರಿಯರು ಭಾವಿಸುತ್ತಾರೆ. ಸುಮಾರು ಕಡೆ ಕುಡಿಯಲು ನೀರು ದೂರ ಜಾನುವಾರುಗಳಿಗೆ ನೀರು ಸಿಗುತ್ತಿಲ್ಲಾ. ದಯಮಾಡಿ ಆ ಸ್ಥಳಗಳನ್ನು ತಿಳಿದು ಅಧಿಕಾರಿಗಳ ಗಮನಕ್ಕೆ ತಂದರೆ ತುಂಬಾ ಒಳ್ಳೆಯದು.

**ಮಳೆಯಪ್ಪ ಅಪ್ಪಣ್ಣ ಬೀಳಗಿ,**
ಅಂಚೆ ಸಹಾಯಕ, ರಾಘವೇಂದ್ರ ಬಡಾವಣೆ
ಮಧುಗಿರಿ, ತುಮಕೂರು-572132.

ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಗ್ರಾಮೀಣ ಅಭಿವೃದ್ಧಿಗಾಗಿ ಸರ್ಕಾರವು ಕೈಗೊಂಡ ಹತ್ತು ಹಲವಾರು ಯೋಜನೆಗಳನ್ನು ಜನತೆಗೆ ಮುಟ್ಟಿಸುವ ಪವಿತ್ರ ಕಾರ್ಯವನ್ನು ಮಾಡುತ್ತಿದೆ. ಗ್ರಾಮೀಣ ಜನತೆಯ ಸಮಸ್ಯೆಗಳಿಗೆ ಪರಿಹಾರವೆಂಬ ಶೀರ್ಷಿಕೆಯನ್ನು ಪ್ರಾರಂಭಿಸಿದರೆ ಉತ್ತಮ. ಅವರ ಪತ್ರಕ್ಕೆ ಉತ್ತರಿಸಿದಲ್ಲಿ ಹೆಚ್ಚಿನ ಪ್ರಯೋಜನವಾಗುವಲ್ಲಿ ಸಂಶಯವಿಲ್ಲ. ಕರ್ನಾಟಕ ವಿಕಾಸದಿಂದ ಗ್ರಾಮೀಣ ಜನರ ವಿಕಾಸವಾಗಲೆಂದು ಆಶಿಸುವೆ.

**ಕೊತ್ತಲ ಮಹಾದೇವಪ್ಪ,**
ಸಾಹಿತಿ, ಲಕ್ಷ್ಮೇಶ್ವರ, ಗದಗ – 582116.

ಸಂಪಾದಕರಿಗೆ ನನ್ನ ನಮಸ್ಕಾರಗಳು. ನಾನು ತಮಗೆ ಈ ಪತ್ರ ಬರೆಯಲು ಕಾರಣವೇನೆಂದರೆ ಇದರಲ್ಲಿ ಮೂಡಿಬರುವ ಗ್ರಾಮೀಣ ಪಂಚಾಯತಿಯ ಸೂಕ್ತವಾದ ಮಾಹಿತಿ ಕಣಜವಾಗಿದೆ. ಅಷ್ಟೆ ಅಲ್ಲದೇ ದೈನಂದಿನ ಜೀವನದಲ್ಲಿ ನಡೆಯುವ ಸರ್ಕಾರದ ಹಲವಾರು ಯೋಜನೆಗಳನ್ನು ವಿವರವಾಗಿ ತಿಳಿಯಪಡಿಸುವ ಜನರ ಸಂಪರ್ಕದ ಅಭಿವೃದ್ಧಿ ಪತ್ರಿಕೆ ಆಗಿದೆ.

ಮುಖ್ಯವಾಗಿ ನಾನು ನಿಮಗೆ ಈ ಪತ್ರ ಬರೆಯಲು ಕಾರಣ ನಾನು ಗ್ರಾಮೀಣ ಭಾಗದ ಎಂ.ಕಾಂ ವಿದ್ಯಾವಂತ ಯುವಕ. ನನಗೆ ಗ್ರಾಮೀಣಾಭಿವೃದ್ಧಿಯಲ್ಲಿ ಕೆಲಸ ಮಾಡುವ ಆಸೆ ಇದೆ. ಅದಕ್ಕೋಸ್ಕರ ಇದರಲ್ಲಿ ಬರುವ ವಿಷಯವನ್ನು ಕಲೆ ಹಾಕುತ್ತೇನೆ. ಇದರಿಂದ ಪಿ.ಡಿ.ಓ, ಎಸ್.ಡಿ.ಎ, ಹುದ್ದೆಗಳನ್ನು ಪಡೆದುಕೊಳ್ಳಲು ಉಪಕಾರಿ ಆಗಿದೆ.

**ಕಾಶೀನಾಥ ತಂದೆ ದೇವೆಂದ್ರಪ್ಪ ಬೊಗೋಣೆರ್**
ಅಲ್ಲೂರ ಪೋಸ್ಟ್, ಚಿತ್ತಾಪುರ ತಾಲ್ಲೂಕು, ಗುಲ್ಬರ್ಗ 585222.

## ಸಚಿವಾಲಯದಿಂದ ಸಂದೇಶ



**ಟಿ.ಎಂ. ವಿಜಯಭಾಸ್ಕರ್,** ಭಾ.ಆ.ಸೇ
**ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ**

**ಕರ್ನಾಟಕ ಸರ್ಕಾರ ಸಚಿವಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**
**ಬಹುಮಹಡಿ ಕಟ್ಟಡ, ಬೆಂಗಳೂರು.**

ಪ್ರಿಯ ಬಂಧುಗಳೇ,

### ಕುಡಿಯುವ ನೀರು ಸರಬರಾಜಿಗೆ ಸರಕಾರದ ಪ್ರಥಮ ಆದ್ಯತೆ ...

ಬಿಸಿಲಿನ ಬೇಗೆಯ ಹಿನ್ನೆಲೆಯಲ್ಲಿ ಕಳೆದ ಮೂರ್‍ನಾಲ್ಕು ತಿಂಗಳಿನಿಂದ ರಾಜ್ಯ ತೀವ್ರ ಬರಗಾಲದ ಪರಿಸ್ಥಿತಿಯನ್ನು ಎದುರಿಸುವಂತಾಗಿದ್ದು ರಾಜ್ಯ ಸರ್ಕಾರವು ಈಗಾಗಲೇ ರಾಜ್ಯದ 125 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಿದೆ. ಬಹುತೇಕ ಈ ಪ್ರದೇಶಗಳಲ್ಲಿನ ಕೆರೆ ಕಟ್ಟೆಗಳು ಹಾಗೂ ಜಲ ಮೂಲಗಳು ಬರಿದಾಗಿದ್ದು ಕುಡಿಯುವ ನೀರಿಗಾಗಿ ಗ್ರಾಮೀಣ ಪ್ರದೇಶದ ಜನರು ಪರಿಪಾಡಲುಪಡುವಂತಾಗಿದೆ.

ಮಾನ್ಯ ಮುಖ್ಯಮಂತ್ರಿಯವರ 15 ಅಂಶಗಳ ಕಾರ್ಯಕ್ರಮಗಳನ್ನು ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರಮುಖವಾಗಿ **'ನಮ್ಮ ಹಳ್ಳಿ ನಮ್ಮ ನೀರು'** ಕಾರ್ಯಕ್ರಮಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಳ್ಳಲಾಗಿದೆ. ಗ್ರಾಮೀಣ ಪ್ರದೇಶಗಳ ನೀರಿನ ಸಂರಕ್ಷಣೆ ಕೆಲಸಗಳು ಅಂದರೆ ಬದು ನಿರ್ಮಾಣ, ಒಡ್ಡು, ಚೆಕ್ ಡ್ಯಾಂ, ಕಾಂಡೂರು, ಬಂಡಿಂಗ್, ಟ್ರೆಂಚಿಂಗ್ ಮತ್ತು ಬೋರ್‌ವೇಲ್‌ಗಳ ವೈಜ್ಞಾನಿಕ ಮರು ಪೂರಣ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ. **'ನಮ್ಮೂರ ಕೆರೆ'** ಕಾರ್ಯಕ್ರಮದಡಿ ಜಲ ಸಂರಕ್ಷಣೆಯಂತಹ ಪ್ರಮುಖ ಕೆಲಸಗಳನ್ನು ಪಂಚಾಯತಿ ವ್ಯಾಪ್ತಿಗೆ ಒಳಪಡುವ ಗ್ರಾಮೀಣ ಪ್ರದೇಶಗಳ ಕೆರೆಗಳಿಗೆ ಪುನ:ಶ್ಚೇತನ ಕಾರ್ಯಕ್ರಮಗಳನ್ನು ಯೋಜನೆಯಡಿ ಅನುಷ್ಠಾನಗೊಳಿಸಲಾಗುತ್ತಿದೆ. ಇದುವರೆಗೆ ರಾಜ್ಯದ ಒಟ್ಟಾರೆ 30 ಜಿಲ್ಲೆಗಳಿಂದ 11264 ಕೆರೆಗಳನ್ನು ಗುರುತಿಸಲಾಗಿದ್ದು, 1876 ಕೆರೆಗಳ ಪುನ:ಶ್ಚೇತನ ಕಾರ್ಯ ಈಗಾಗಲೇ ಮುಕ್ತಾಯಗೊಂಡಿದೆ ಹಾಗೂ 2351 ಕೆಲಸಗಳು ಪ್ರಗತಿಯಲ್ಲಿದೆ.

**'ಶುದ್ಧ ಕುಡಿಯುವ ನೀರಿನ ಘಟಕಗಳು'** ಕಾರ್ಯಕ್ರಮವನ್ನು ಗ್ರಾಮೀಣ ನೀರು ಸರಬರಾಜು ಯೋಜನೆಯಡಿ ಕೈಗೊಳ್ಳಲಾಗಿದೆ. ಸ್ವಯಂಚಾಲಿತ ಶುದ್ಧ

ನೀರು ವಿತರಿಸುವ ಯಂತ್ರದಿಂದ ಗ್ರಾಮೀಣ ಜನರು ಶುದ್ಧ ಕುಡಿಯುವ ನೀರನ್ನು ಪಡೆದುಕೊಳ್ಳುವಂತೆ ಮಾಡಿ ತನ್ಮೂಲಕ ಗ್ರಾಮೀಣ ಜನರ ಆರೋಗ್ಯ ಸ್ಥಿತಿಯನ್ನು ಉತ್ತಮಪಡಿಸುವುದು ಪ್ರಮುಖ ಉದ್ದೇಶ. ರಾಜ್ಯದ ಒಟ್ಟಾರೆ 30 ಜಿಲ್ಲೆಗಳಲ್ಲಿ 3687 ಶುದ್ಧ ಕುಡಿಯುವ ನೀರು ಘಟಕಗಳ ಗುರಿಯನ್ನು ಹೊಂದಲಾಗಿದ್ದು, ಈಗಾಗಲೇ 879 ಶುದ್ಧ ಕುಡಿಯುವ ನೀರು ಘಟಕಗಳು ಕಾರ್ಯನಿರ್ವಹಿಸುತ್ತಿವೆ. 199 ಘಟಕಗಳ ನಿರ್ಮಾಣ ಕಾರ್ಯ ಚಾಲನೆಯಲ್ಲಿದೆ. 2014-15ರ ಸಾಲಿನಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಸಹಭಾಗಿತ್ವದಲ್ಲಿ ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಿ ನಿರ್ವಹಣೆ ಮಾಡಿಸಲು ಅವಕಾಶ ಕಲ್ಪಿಸಿದೆ.

## ಕುಡಿಯುವ ನೀರು ಸರಬರಾಜಿಗೆ ಉಚಿತ ಸಹಾಯವಾಣಿ-1800 425 8666 . . .

ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆಗಾಗಿ ಉಚಿತ ಸಹಾಯವಾಣಿ ಸಂಖ್ಯೆ **1800 425 8666** ಸ್ಥಾಪಿಸಲಾಗಿದೆ. ತಾಲ್ಲೂಕು ಮಟ್ಟದ ನಿಯಂತ್ರಣ ಕೊಠಡಿಗಳು ಪ್ರತಿನಿತ್ಯ 12 ಗಂಟೆಗಳ ಕಾಲ ಕಾರ್ಯನಿರ್ವಹಿಸುವ ವ್ಯವಸ್ಥೆಯನ್ನು ಮಾಡಲಾಗಿದ್ದು ದೂರುಗಳು ಸ್ವೀಕೃತಿಯಾದ 24 ಗಂಟೆಯೊಳಗೆ ನಮ್ಮೆಲ್ಲಾ ಅಧಿಕಾರಿ/ಸಿಬ್ಬಂದಿಗಳು ಅತ್ಯಂತ ಜವಾಬ್ದಾರಿಯುತವಾಗಿ ಸ್ಪಂದಿಸಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ತೊಡಗಿಸಿಕೊಳ್ಳಬೇಕೆಂದು ಈ ಮೂಲಕ ಸೂಚಿಸುತ್ತಿದ್ದೇನೆ. ತುರ್ತು ಸಂದರ್ಭಗಳಲ್ಲಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಕೆ ವ್ಯವಸ್ಥೆಯನ್ನು ಕೈಗೊಳ್ಳಲಾಗುತ್ತಿದ್ದು ಗ್ರಾಮೀಣ ಜನರು ಈ ವ್ಯವಸ್ಥೆಯ ಸದುಪಯೋಗ ಮಾಡಿಕೊಳ್ಳಬಹುದಾಗಿದೆ.

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಮತ್ತು ನೈರ್ಮಲ್ಯ ಕಾಪಾಡಲು ತೆಗೆದುಕೊಳ್ಳಬೇಕಾದ ಕ್ರಮಗಳಿಗೆ ಸಂಬಂಧಿಸಿದಂತೆ ಈಗಾಗಲೇ ಸುತ್ತೋಲೆ/ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಮೂರೂ ಹಂತದ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿ ಸಿಬ್ಬಂದಿಗಳು ಪರಸ್ಪರ ಸಮನ್ವಯ ಮತ್ತು ಸೇವಾ ಮನೋಭಾವದೊಂದಿಗೆ ಜನ ಸಾಮಾನ್ಯರ ಆಶೋತ್ತರಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವಂತಾಗಲಿ ಎಂದು ಆಶಿಸುತ್ತೇನೆ.

(ಟಿ.ಎಂ. ವಿಜಯ ಭಾಸ್ಕರ್)

## ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಓದುಗರೇ . . . . ನಿಮ್ಮ ಮಾಹಿತಿಗಾಗಿ

* ವೈ.ಮಹಾಂಕಾಳಪ್ಪ

**"ಕರ್ನಾಟಕ ವಿಕಾಸ"** ಕನ್ನಡ ಮಾಸ ಪತ್ರಿಕೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮುಖವಾಣಿ ಪತ್ರಿಕೆಯಾಗಿ ಸುಮಾರು 64 ವರ್ಷಗಳಿಂದಲೂ ನಿರಂತರವಾಗಿ ಪ್ರಕಟಗೊಳ್ಳುತ್ತಾ ಬರುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯವೇ ಸರಿ. ಪತ್ರಿಕೆಯಲ್ಲಿ ಪ್ರಮುಖವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಷಯಗಳಿಗೆ ಪೂರಕವಾದ ಲೇಖನಗಳನ್ನು ಪ್ರಕಟಿಸಲಾಗುತ್ತಿದೆ. ವಿಕೇಂದ್ರಿಕರಣ ತತ್ವಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳು, ಆಹಾರ, ಕೃಷಿ, ಸ್ವಚ್ಛತೆ/ನೈರ್ಮಲ್ಯ, ಶಿಕ್ಷಣ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿ, ಸ್ವಯಂ ಉದ್ಯೋಗದ ಬಗ್ಗೆ ತಿಳುವಳಿಕೆ, ಜೀತ ಮುಕ್ತ ಪುನರ್ವಸತಿ ಕಾರ್ಯಕ್ರಮ, ಅತ್ಯುತ್ತಮ ಗ್ರಾಮ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಹಾಗೂ ಜಿಲ್ಲಾ ಪಂಚಾಯಿತಿಗಳ ಕಾರ್ಯ ವಿಧಾನದ ಬಗ್ಗೆ ಪರಿಚಯ, ಇಲಾಖೆಯ ಪ್ರಮುಖ ಸುತ್ತೋಲೆ/ ಮಾರ್ಗಸೂಚಿ/ಆದೇಶಗಳನ್ನು ಒಳಗೊಂಡಂತೆ ಇತ್ಯಾದಿ ವಿಷಯಗಳಿಗೆ ಸಂಬಂಧಪಟ್ಟ ಲೇಖನ/ಮಾಹಿತಿ ಹಾಗೂ ಯಶೋಗಾಥೆಗಳನ್ನು ವರ್ಣ ಛಾಯಾಚಿತ್ರಗಳೊಂದಿಗೆ ಹೊರತರುತ್ತಿರುವುದು ತಮಗೆಲ್ಲಾ ತಿಳಿದ ವಿಷಯವೇ ಆಗಿದೆ.

ಕರ್ನಾಟಕ ವಿಕಾಸ ಪತ್ರಿಕೆ ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ವಿತರಣೆಯಾಗುತ್ತಿದ್ದು, ಗ್ರಾಮ ಪಂಚಾಯಿತಿ ಅಸ್ತಿತ್ವಕ್ಕೆ ಬಂದ ನಂತರ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ/ ಕಾರ್ಯದರ್ಶಿಗಳಿಗೆ ಎಲ್ಲಾ ತಾಲ್ಲೂಕು ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಕಾರ್ಯನಿರ್ವಹಣಾಧಿಕಾರಿಗಳು, ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ರಾಜ್ಯ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಪಂಚಾಯತ್ ಇಲಾಖೆಯ ಅಧೀನ ಸಂಸ್ಥೆಗಳ ಅಧಿಕಾರಿಗಳಿಗೆ ಹಾಗೂ ಸರ್ಕಾರದ ಪ್ರಮುಖ ಇಲಾಖೆಯ ಮುಖ್ಯಸ್ಥರಿಗೆ ಮತ್ತು ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ತಲಾ ಒಂದು ಪ್ರತಿಯಂತೆ ಪತ್ರಿಕೆಯನ್ನು ಉಚಿತವಾಗಿ ರವಾನಿಸಲಾಗುತ್ತಿದೆ. ರಾಜ್ಯದ ಲೋಕಸಭಾ ಸದಸ್ಯರು, ರಾಜ್ಯ ಸಭಾ ಸದಸ್ಯರು, ವಿಧಾನ ಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು, ಗೌರವ ಪ್ರತಿಗಳೂ ಹಾಗೂ ಚಂದಾದಾರರಿಗೆ ವಿತರಿಸಲು ಒಟ್ಟು 26000 ಪ್ರತಿಗಳನ್ನು ಪ್ರತಿ ಮಾಹೆ ಮುದ್ರಿಸಿ ರವಾನಿಸಲಾಗುತ್ತಿದೆ.

### ಪತ್ರಿಕೆಯ ಗುಣಮಟ್ಟ ಹೆಚ್ಚಿಸುವ ಬಗ್ಗೆ ಆದ್ಯತೆ . . . .

ಪತ್ರಿಕೆಯ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸಿ ಆಕರ್ಷಣೀಯ ಮತ್ತು

**ಮಾಹಿತಿ**

ಮೌಲಿಕ ಲೇಖನಗಳೊಂದಿಗೆ ಇನ್ನಷ್ಟು ಗುಣಮಟ್ಟದ ಪತ್ರಿಕೆಯಾಗಿ ರೂಪುಗೊಳ್ಳುವತ್ತ "ಕರ್ನಾಟಕ ವಿಕಾಸ".

ಪತ್ರಿಕೆಯ ದರ ಮತ್ತು ಚಂದಾ ಹಣ ಹೆಚ್ಚಳವಾಗಿದೆ. ದಯಮಾಡಿ ಗಮನಿಸಿ.

* ಸಂಪಾದಕರು,
ಕರ್ನಾಟಕ ವಿಕಾಸ, ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.

ಆಸಕ್ತಿದಾಯಕವನ್ನಾಗಿ ಮಾಡಲು ಶ್ರೀ ಕೆ.ಯಾಲಕ್ಕಿಗೌಡ, ನಿರ್ದೇಶಕರು (ಪಂ.ರಾಜ್–1) ಹಾಗೂ ಪ್ರಕಾಶಕರು, ಕರ್ನಾಟಕ ವಿಕಾಸ, ಗ್ರಾ. ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದ್ದು 'ಕರ್ನಾಟಕ ವಿಕಾಸ' ಮಾಸ ಪತ್ರಿಕೆಯನ್ನು ಗುಣಮಟ್ಟದೊಂದಿಗೆ ಮುದ್ರಿಸಿ ಸರಬರಾಜು ಮಾಡಲು ದಿನಾಂಕ : 23–04–2014 ರಂದು ಸಭೆ ನಡೆಸಲಾಗಿದ್ದು ಸಭೆಯಲ್ಲಿ ತೀರ್ಮಾನಿಸಿದಂತೆ ಇನ್ನು ಮುಂದೆ ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಒಳಪುಟಗಳಿಗೆ 70 ಜಿಎಸ್‌ಎಂ ಎಸ್‌ಎಸ್ ಮ್ಯಾಪ್‌ಲಿತೋ ಹಾಗೂ ಹೊರ ಕವಚಕ್ಕೆ 135 ಜಿಎಸ್‌ಎಂ ಆರ್ಟ್ ಕಾಗದ ಉಪಯೋಗಿಸಿ ವರ್ಣ ಛಾಯಾಚಿತ್ರ ಮತ್ತು ಮುದ್ರಣದ ಗುಣಮಟ್ಟ ಕಾಪಾಡಿಕೊಳ್ಳಲು ಹೆಚ್ಚಿನ ಆದ್ಯತೆ ನೀಡಲಾಗಿದೆ. ಸಭೆಯಲ್ಲಿ ನಿರ್ಧರಿಸಿದಂತೆ ಪ್ರಸಕ್ತ ಸಾಲಿನಲ್ಲಿ ಸರ್ಕಾರಿ ಮುದ್ರಣಾಲಯದಲ್ಲಿ 'ಕರ್ನಾಟಕ ವಿಕಾಸ' ಮಾಸ ಪತ್ರಿಕೆಯನ್ನು ಮುದ್ರಿಸಿ ಅಂಚೆಯ ಮೂಲಕ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಪ್ರತಿ ವರ್ಷವೂ ಪತ್ರಿಕೆಯ ಮುದ್ರಣಕ್ಕಾಗಿ ನಿಯಮಾವಳಿಗಳ ಪ್ರಕಾರ ಟೆಂಡರ್ ಕರೆದು ಪತ್ರಿಕೆಯ ಮುದ್ರಣ ಕಾರ್ಯ ಕೈಗೊಳ್ಳಬೇಕಾಗಿರುತ್ತದೆ. ಪ್ರಸಕ್ತ ಸಾಲಿನ ಆರ್ಥಿಕ ವರ್ಷ ಅಂತಿಮದ ವೇಳೆ ಚುನಾವಣಾ ನೀತಿ ಸಂಹಿತೆ ಜಾರಿಯಾದ್ದರಿಂದ ಪತ್ರಿಕೆಯ ಮುದ್ರಣಕ್ಕಾಗಿ ಟೆಂಡರ್ ಪ್ರಕ್ರಿಯೆ ಸಕಾಲದಲ್ಲಿ ಜಾರಿಯಾಗದ ಹಿನ್ನೆಲೆಯಲ್ಲಿ ಏಪ್ರಿಲ್ ಮತ್ತು ಮೇ 2014ರ ಕರ್ನಾಟಕ ವಿಕಾಸ ಸಂಚಿಕೆಯು ಪ್ರಕಟಗೊಂಡಿರುವುದಿಲ್ಲ. ಅದಕ್ಕಾಗಿ ಏಪ್ರಿಲ್, ಮೇ ಸಂಚಿಕೆಗಳನ್ನು ಒಗ್ಗೂಡಿಸಿ ಜೂನ್ 2014ರ ಸಂಚಿಕೆಯೊಂದಿಗೆ ಕರ್ನಾಟಕ ವಿಕಾಸ ಮಾಸ ಪತ್ರಿಕೆಯನ್ನು ಇನ್ನು ಮುಂದೆ ನಿಯಮಿತವಾಗಿ ಹೊರತರಲಾಗುವ ವಿಷಯವನ್ನು ನಮ್ಮೆಲ್ಲಾ ಓದುಗ ಸಹೃದಯರಿಗೆ ಈ ಮೂಲಕ ತಿಳಿಸುತ್ತಾ ಅನಿವಾರ್ಯ ಕಾರಣಗಳಿಗಾಗಿ ಎರಡು ತಿಂಗಳ ಸಂಚಿಕೆಗಳನ್ನು ಹೊರತರಲಾಗದಿದ್ದಕ್ಕೆ ವಿಷಾದ ವ್ಯಕ್ತಪಡಿಸುತ್ತಿದ್ದೇನೆ.

**ಸಭೆಯಲ್ಲಿ ಪತ್ರಿಕೆಯ ಮಾರಾಟ ಬೆಲೆಯ ಬಗ್ಗೆ ಚರ್ಚಿಸಲಾಗಿದ್ದು ಸುಮಾರು 15 ವರ್ಷಗಳಿಂದಲೂ ಪತ್ರಿಕೆಯ ಮಾರಾಟ ಬೆಲೆ ₹5.00 ಆಗಿದ್ದು ಪತ್ರಿಕೆಯ ಬೆಲೆಯನ್ನು ಇನ್ನು ಮುಂದೆ ₹10.00ಗಳಿಗೆ ಹೆಚ್ಚಿಸಲು ತೀರ್ಮಾನಿಸಲಾಗಿರುತ್ತದೆ.**

**ಹಾಗೆಯೇ ಪತ್ರಿಕೆಗೆ ಇದುವರೆಗೆ ನಿಗದಿಪಡಿಸಲಾಗಿದ್ದ ವಾರ್ಷಿಕ ಚಂದಾಹಣ (ವ್ಯಕ್ತಿಯೊಬ್ಬರಿಗೆ ವರ್ಷಕ್ಕೆ ₹50.00 ಮತ್ತು ಸಂಘ/ಸಂಸ್ಥೆಗಳಿಗೆ ವರ್ಷಕ್ಕೆ ₹60.00) ವನ್ನು ಹೆಚ್ಚಿಸಲು ತೀರ್ಮಾನ ಕೈಗೊಳ್ಳಲಾಗಿದ್ದು ಇನ್ನು ಮುಂದೆ ವ್ಯಕ್ತಿಯೊಬ್ಬರಿಗೆ ವರ್ಷಕ್ಕೆ ₹100.00 ಮತ್ತು ಸಂಘ/ಸಂಸ್ಥೆಗಳಿಗೆ ವರ್ಷಕ್ಕೆ ₹120.00 ಗಳಿಗೆ ಹೆಚ್ಚಿಸಲು ತೀರ್ಮಾನಿಸಲಾಗಿರುತ್ತದೆ.**

ಮಾಹಿತಿಯನ್ನು ಕನ್ನಡ ಭಾಷೆಯಲ್ಲಿ ಸರಳವಾಗಿ ನಿರೂಪಿಸಿ ರಾಜ್ಯಾದಂತ ಗ್ರಾಮೀಣ ಪ್ರದೇಶಗಳ ಜನಸಾಮಾನ್ಯರು, ಸ್ಥಳೀಯ ಜನಪ್ರತಿನಿಧಿಗಳು ಮತ್ತು ಸ್ಥಳೀಯ ಅಧಿಕಾರಿ/ಸಿಬ್ಬಂದಿಗಳ ಅರಿವಿಗೆ ಮೆರುಗನ್ನು ನೀಡುವುದು ಪತ್ರಿಕೆಯ ಮೂಲ ಉದ್ದೇಶ ಎಂದರೆ ತಪ್ಪಾಗಲಾರದು. ಇದಕ್ಕಾಗಿಯೇ ಸರ್ಕಾರಿ ಇಲಾಖೆಯ ಹಿರಿಯ ಅಧಿಕಾರಿಗಳು, ತಜ್ಞರು/ವಿಜ್ಞಾನಿಗಳು ಮತ್ತು ಇತರ ಆಸಕ್ತ ಲೇಖಕರಿಂದ ಮೇಲ್ಕಂಡ ವಿಷಯಗಳ ಬಗ್ಗೆ ಲೇಖನ/ಮಾಹಿತಿಯುನ್ನು ಪಡೆದು ಪತ್ರಿಕೆಯ ಮೌಲ್ಯವನ್ನು ಹೆಚ್ಚಿಸುವ ಕೆಲಸ ನಿರಂತರವಾಗಿದೆ.

'ಕರ್ನಾಟಕ ವಿಕಾಸ' ಸಕಾಲಿಕ ನಿರಂತರ ಪ್ರಕಟಣೆಯಿಂದಾಗಿ ಸರ್ಕಾರದ ನೀತಿ–ನಿರ್ಧಾರಗಳು, ಸುತ್ತೋಲೆಗಳು, ವಿವಿಧ ಇಲಾಖೆಗಳ ಅಭಿವೃದ್ಧಿಗೆ ಸಂಬಂಧಿಸಿದ ವಿಚಾರಗಳು ಗ್ರಾಮೀಣ ಜನತೆಗೆ ತಲುಪಿ ಒಟ್ಟಾರೆ ಇಲಾಖೆಯ ಆಶಯದಂತೆ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿಯ ಪ್ರಗತಿಯನ್ನು ಸಾಧಿಸಲು ಪತ್ರಿಕೆಯು ನೆರವಾಗಲು ಕಾರಣವಾಗುತ್ತದೆ ಎಂಬುವುದರಲ್ಲಿ ಯಾವುದೇ ಸಂಶಯವಿರುವುದಿಲ್ಲ. ಇದಕ್ಕಾಗಿ ನಮ್ಮೆಲಾ ಓದುಗ ಸಹೃದಯಿಗಳ ಸಹಕಾರ ನಿರಂತರವಾಗಿರಲಿ ಎಂದು ಆಶಿಸುತ್ತೇನೆ.

# ಚಂದಾದಾರರಲ್ಲಿ ಮನವಿ

ಮಾಹಿತಿ

ಪ್ರಿಯ
ಓದುಗರೆ,
ಗಮನಿಸಿ....

**‘ಕರ್ನಾಟಕ ವಿಕಾಸ’ ಮಾಸ ಪತ್ರಿಕೆಯ ಚಂದಾಹಣ ಪರಿಷ್ಕೃತಗೊಂಡಿದೆ.**

| | |
|---|---|
| ಪತ್ರಿಕೆಯ ಬಿಡಿ ಪ್ರತಿ | ₹ 10 |
| ವಾರ್ಷಿಕ ಚಂದಾಹಣ ವ್ಯಕ್ತಿಗಳಿಗೆ | ₹ 100 |
| ಸಂಘ / ಸಂಸ್ಥೆಗಳಿಗೆ | ₹ 120 |

ವಾರ್ಷಿಕ ಚಂದಾಹಣವನ್ನು ಒಂದು ವರ್ಷದ ಕಾಲಾವಧಿಗಾಗಿ ಮಾತ್ರ ಪಾವತಿಸಲು ಕೋರಿದೆ. ಚಂದಾಹಣವನ್ನು ಡಿ.ಡಿ/ಚೆಕ್ ರೂಪದಲ್ಲಿ ಸ್ವೀಕರಿಸಲಾಗುವುದಿಲ್ಲ. ಚಂದಾದಾರರು ಪೋಸ್ಟಲ್ ಮನಿ ಆರ್ಡರ್ ಮೂಲಕ ಮಾತ್ರ ಚಂದಾಹಣವನ್ನು ಪಾವತಿಸಲು ಕೋರಿದೆ.

ಚಂದಾದಾರರು ಚಂದಾಹಣವನ್ನು ಅಂಚೆ ಕಚೇರಿಯಲ್ಲಿ ಪೋಸ್ಟಲ್ ಮನಿ ಆರ್ಡರ್ ಮೂಲಕ ಪಾವತಿಸುವಾಗ ಮನಿ ಆರ್ಡರ್ ಫಾರಂನಲ್ಲಿ ಚಂದಾದಾರರ ಹೆಸರು ಮತ್ತು ಸಂಪೂರ್ಣ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ ಸ್ಪಷ್ಟವಾಗಿ ನಮೂದಿಸಿದೆಯೇ? ಎಂದು ಖಚಿತಪಡಿಕೊಳ್ಳಲು ಕೋರಿದೆ. ಸ್ಪಷ್ಟ ಅಂಚೆ ವಿಳಾಸಗಳಿಲ್ಲದ ವಾರ್ಷಿಕ ಚಂದಾಹಣವನ್ನು ಸ್ವೀಕರಿಸಲಾಗುವುದಿಲ್ಲ. ಚಂದಾಹಣವನ್ನು ಪಾವತಿಸಬೇಕಾದ ’ಕರ್ನಾಟಕ ವಿಕಾಸ’ದ ಕಚೇರಿ ವಿಳಾಸ ಈ ಕೆಳಕಂಡಂತಿದೆ.

**ಸಂಪಾದಕರು**
**ಕರ್ನಾಟಕ ವಿಕಾಸ,**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,**
ನಂ.309, 3ನೇ ಮಹಡಿ, ಗೇಟ್ ನಂ.1, ಬಹುಮಹಡಿ ಕಟ್ಟಡ, ಡಾ॥ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ ಸಂಖ್ಯೆ : 080 – 22353857.
ಇ–ಮೇಲ್: kvrdpr@gmail.com, ವೆಬ್‌ಸೈಟ್: www.rdpr.kar.nic.in

ಮುಖಪುಟ ವರದಿ

ಇತ್ತೀಚೆಗೆ ಬೆಳಗಾವಿಯಲ್ಲಿ ಯೋಜನೆಯಡಿ 315 ರಸ್ತೆ ಅಭಿವೃದ್ಧಿ ಕಾಮಗಾರಿಗಳ ಚಾಲನಾ ಸಮಾರಂಭದ ಬಗ್ಗೆ ಕಿರು ಚಿತ್ರಣ

# ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ – II ರಸ್ತೆ ಅಭಿವೃದ್ಧಿ ಕಾಮಗಾರಿಗಳ ಚಾಲನಾ ಸಮಾರಂಭ

## ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ :

ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಒಂದು ಅಂಗ ಸಂಸ್ಥೆ. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಹಾಗೂ ಅಭ್ಯುದಯಕ್ಕಾಗಿ ಗುಣಮಟ್ಟದ ಸರ್ವಋತು ಸಂಪರ್ಕ ರಸ್ತೆಗಳನ್ನು ಮಾಪಕ ಸಂಸ್ಥೆಗಳ ಮಾನದಂಡಕ್ಕನುಗುಣವಾಗಿ ನಿರ್ಮಿಸಿ, ನಿರ್ಮಿಸಿದ ರಸ್ತೆಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡುವುದು ಸಂಸ್ಥೆಯ ಪ್ರಮುಖ ಉದ್ದೇಶ.

## ಸಂಸ್ಥೆಯ ಪ್ರಮುಖ ಚಟುವಟಿಕೆಗಳು :

- ಸ್ಥಳೀಯವಾಗಿ ಲಭ್ಯವಾಗುವ ಸಾಮಗ್ರಿಗಳನ್ನು ರಸ್ತೆ ಕಾಮಗಾರಿಯಲ್ಲಿ ಉಪಯೋಗಿಸುವ ಸಂಬಂಧ ವಿವಿಧ ವಿದ್ಯಾಸಂಸ್ಥೆಗಳಿಂದ ತಾಂತ್ರಿಕ ಕೌಶಲ್ಯತೆಯನ್ನು ಪಡೆದು ಕಡಿಮೆ ವೆಚ್ಚದಲ್ಲಿ ಉತ್ತಮ ತಾಂತ್ರಿಕತೆಯೊಂದಿಗೆ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು ಮತ್ತು ನಿರ್ಮಾಣದ ನಂತರದ ಐದು ವರ್ಷಗಳ ಅವಧಿಗೆ ಉತ್ತಮವಾಗಿ ನಿರ್ವಹಣೆ ಮಾಡುವುದು.
- ಗ್ರಾಮೀಣ ರಸ್ತೆ ಅಭಿವೃದ್ಧಿಗಾಗಿ ನಿಗಧಿಪಡಿಸಿದ ಹಣವನ್ನು ಸೂಕ್ತವಾಗಿ ಉಪಯೋಗಿಸಿಕೊಂಡು ನಿಗಧಿತ ಸಮಯದೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.



ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಟಿ.ಎಂ.ವಿಜಯಭಾಸ್ಕರ್‌ರವರು ಕಾಮಗಾರಿಗಳನ್ನು ಚಾಲನೆಗೊಳಿಸಿದರು.

- ಇಲಾಖೆಯ ಇಂಜಿನಿಯರ್‌ಗಳಿಗೆ ಹಾಗೂ ಕಾಮಗಾರಿ ನಿರ್ವಹಿಸುವ ಗುತ್ತಿಗೆದಾರ ಇಂಜಿನಿಯರ್‌ಗಳಿಗೆ ಸೂಕ್ತ ತಾಂತ್ರಿಕ ತರಬೇತಿ ನೀಡಿ ಇತ್ತೀಚಿನ ತಾಂತ್ರಿಕ ಅಭಿವೃದ್ಧಿಯ ಹಾಗೂ ಹೊಸ ಅವಿಷ್ಕಾರಗಳ ಬಗ್ಗೆ ಮಾಹಿತಿ ನೀಡುವುದು.
- ಅಭಿವೃದ್ಧಿಪಡಿಸಿದ ರಸ್ತೆಗಳನ್ನು ಉತ್ತಮವಾಗಿ ನಿರ್ವಹಣೆ ಮಾಡುವುದು.
- ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಹಾಗೂ ಸಾರ್ವಜನಿಕ ದೂರಿಗೆ ಸೂಕ್ತವಾಗಿ ಸ್ಪಂದಿಸುವ ವ್ಯವಸ್ಥೆ ಬಲಪಡಿಸುವುದು.
- ಆಡಳಿತದಲ್ಲಿ ಕಾಮಗಾರಿಯ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವುದು.

ಕೇಂದ್ರ ಸರ್ಕಾರವು 2000ನೇ ಸಾಲಿನಲ್ಲಿ ಗ್ರಾಮೀಣ ರಸ್ತೆಗಳನ್ನು ಉತ್ತಮಪಡಿಸುವ ಸಲುವಾಗಿ ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನಾ (PMGSY) ಚಾಲನೆಗೊಳಿಸಿದ್ದು ರಾಜ್ಯ ಸರ್ಕಾರವು ಸಹ ಇದಕ್ಕನುಗುಣವಾಗಿ 2000-2001 ರಿಂದ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೊಳಿಸಿದೆ. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ದಿನಾಂಕ:05.12.2013ರಂದು ಜರುಗಿದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಕೆಳಕಂಡಂತೆ ಅನುಮೋದನೆ ನೀಡಿದೆ.

### 1. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ – I

ಸಾಮಾನ್ಯ ಪ್ರದೇಶಗಳಡಿ ಬಿಟ್ಟು ಹೋದ 12 ಜನವಸತಿಗಳಿಗೆ ಹೊಸ ಸಂಪರ್ಕ ಕಲ್ಪಿಸುವ ಸಲುವಾಗಿ ಹಾಗೂ 43.86 ಕಿ.ಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು ಅಂದಾಜು ವೆಚ್ಚ ರೂ.18.58 ಕೋಟಿಗಳು. ಮರುಭೂಮಿ ಪ್ರದೇಶವನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮದಡಿ ಬಿಟ್ಟುಹೋದ 16 ಜನವಸತಿಗಳಿಗೆ ಹೊಸ ಸಂಪರ್ಕ ಕಲ್ಪಿಸಲು 48.38 ಕಿ.ಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು ಅಂದಾಜು ಮೊತ್ತ ರೂ.21.71 ಕೋಟಿಗಳು. ಬಿಟ್ಟುಹೋದ 38 ಸಂಖ್ಯೆಯ ಅಡ್ಡ ಮೋರಿಗಳ ಅಂದಾಜು ಮೊತ್ತ ರೂ.34.49 ಕೋಟಿಗಳು.

### 2. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ – II

ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನೆ – II ರಡಿ ಕೇಂದ್ರ ಸರ್ಕಾರದ ಅನುಮೋದನೆ ಮೇರೆಗೆ 2013-14ನೇ ಸಾಲಿಗೆ 315 ರಸ್ತೆ ಕಾಮಗಾರಿಗಳು ಮತ್ತು 12 Long Span Bridge ಗಳು ಒಳಗೊಂಡಂತೆ 2246.23 ಕಿ.ಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು ರೂ.1044.59 ಕೋಟಿಗೆ ಅನುಮೋದನೆ ನೀಡಲಾಯಿತು.

ಯೋಜನೆಯಡಿ ಸದರಿ 315 ರಸ್ತೆ ಅಭಿವೃದ್ಧಿ ಕಾಮಗಾರಿಗಳ ಚಾಲನಾ ಸಮಾರಂಭವು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ದಿನಾಂಕ: 05.03.2014 ರಂದು ಚಾಲನೆಗೊಳಿಸಲಾಗಿದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಎಚ್.ಕೆ.ಪಾಟೀಲ ರವರು ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನೆ – II ರ ಕೈಪಿಡಿಯನ್ನು ಇದೇ ಸಂದರ್ಭದಲ್ಲಿ ಲೋಕಾರ್ಪಣೆ ಮಾಡಿದರು. ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಟಿ.ಎಂ.ವಿಜಯಭಾಸ್ಕರ್ ರವರು ಚಾಲನೆಗೊಳಿಸಿದರು. ಇದೇ ಸಂದರ್ಭದಲ್ಲಿ ಬೆಳಗಾವಿ ಕ್ಷೇತ್ರದ ಮಾನ್ಯ ಲೋಕಸಭಾ ಸದಸ್ಯರಾದ ಶ್ರೀ ಸುರೇಶ್ ಅಂಗಡಿಯವರು ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು. ಸಮಾರಂಭದಲ್ಲಿ ಮಾನ್ಯ ಶಾಸಕರಾದ ಶ್ರೀ ಸಂಜಯ್ ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಮಾಹಾಂತೇಶ ಕವಟಗಿಮಠ ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಇವರೊಂದಿಗೆ ಸ್ಥಳೀಯ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಯ ಹಲವಾರು ಚುನಾಯಿತ ಪ್ರತಿನಿಧಿಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ – ರಸ್ತೆ ಕಾರ್ಯಕ್ರಮಗಳು.

ರಾಜ್ಯದಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಹಾಗೂ ಉಸ್ತುವಾರಿ ಕಾರ್ಯವು 1999ರ ಅಂತ್ಯದವರೆಗೆ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿತ್ತು. ದಿನಾಂಕ: 01.01.2000ರಿಂದ ಈ ರಸ್ತೆಗಳ ಅಭಿವೃದ್ಧಿ ತಾಂತ್ರಿಕ ಮೇಲ್ವಿಚಾರಣೆ ಹಾಗೂ ಉಸ್ತುವಾರಿ ಕಾರ್ಯದ ಜವಾಬ್ದಾರಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವರ್ಗಾಯಿಸಲಾಗಿದೆ.

ಗ್ರಾಮೀಣ ರಸ್ತೆ ಸಂಪರ್ಕವು ಗ್ರಾಮೀಣ ಕ್ಷೇತ್ರದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಹೆಚ್ಚಿಸುವಲ್ಲಿ ಪ್ರಮುಖ ಅಂಶವೆಂಬುದು ಬಹಳ ಹಿಂದಿನಿಂದಲೂ ಗುರುತಿಸಲ್ಪಟ್ಟಿದ್ದರೂ ಸಹ ಅನೇಕ ವರ್ಷಗಳಿಂದ ಸಮರ್ಪಕವಾಗಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಸಾಕಷ್ಟು ಪ್ರಾಶಸ್ತ್ಯ ದೊರಕಿಸಲು ಸಾಧ್ಯವಾಗಿರುವುದಿಲ್ಲ. ಗ್ರಾಮೀಣ ರಸ್ತೆಗಳ ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ ತುರ್ತಾಗಿ ಗಣನೀಯ ಪ್ರಮಾಣದ ಬಂಡವಾಳ ಹೂಡಬೇಕಾದ ಅಗತ್ಯತೆ ಇರುತ್ತದೆ. ಪ್ರಸ್ತುತ ಪ್ರಮುಖವಾಗಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ನಬಾರ್ಡ್ ಯೋಜನೆ, ಗ್ರಾಮೀಣ ಸಂಪರ್ಕ ಸಾಮಾನ್ಯ ಮತ್ತು ವಿಶೇಷ ಅಭಿವೃದ್ಧಿ ಯೋಜನೆ, 13ನೇ ಹಣಕಾಸು ಆಯೋಗದ ಶಿಫಾರಸ್ಸಿನ ಅನುದಾನದಡಿ ಹಾಗೂ ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿ / ನಿರ್ವಹಣೆ ಮಾಡಲಾಗುತ್ತಿದೆ.

---

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಅಭಿವೃದ್ಧಿ ಯೋಜನೆಯಡಿ ರಸ್ತೆ ನಿರ್ಮಾಣ ಕಾರ್ಯಕ್ರಮಗಳ ಒಂದು ಕಿರುನೋಟ**

---

### ಕರ್ನಾಟಕದಲ್ಲಿರುವ ಗ್ರಾಮೀಣ ರಸ್ತೆಗಳ ವಿವರಗಳು.

| ರಸ್ತೆ ಮಾದರಿ | ರಸ್ತೆ ಉದ್ದ (ಕಿ.ಮೀ.ಗಳಲ್ಲಿ) (31.03.2013) |
|---|---|
| ಡಾಂಬರು ರಸ್ತೆಗಳು | 58184.00 |
| ಜಲ್ಲಿ ರಸ್ತೆಗಳು | 21495.00 |
| ಮಣ್ಣಿನ ರಸ್ತೆಗಳು | 75867.00 |
| ಒಟ್ಟು | 155546.00 |


### ಗ್ರಾಮೀಣ ಗ್ರಾಮೀಣ ರಸ್ತೆಗಳ ನಿರ್ವಹಣೆಗಾಗಿ ಟಾಸ್ಕ್‌ಫೋರ್ಸ್ ಸಮಿತಿ ರಚನೆ ಮತ್ತು ಅನುಷ್ಠಾನ

ರಾಜ್ಯದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ 2013–14ನೇ ಸಾಲಿನಲ್ಲಿ ರಾಜ್ಯದ ಗ್ರಾಮೀಣ ರಸ್ತೆ ನಿರ್ವಹಣೆ/ದುರಸ್ತಿ ಹಾಗೂ ಅಭಿವೃದ್ಧಿಯ ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಸಚಿವರು, ಶಾಸಕರು ಹಾಗೂ ಜನಪ್ರತಿನಿಧಿಗಳು ಇಲಾಖೆಗೆ ಕೋರಿಕೆಯನ್ನು ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ತುರ್ತು ಹಾಗೂ ಅಗತ್ಯ ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಹೆಚ್ಚಿನ ರೀತಿಯಲ್ಲಿ ಕೈಗೊಳ್ಳುವುದು ಅವಶ್ಯವಾಗಿ ಕಂಡುಬಂದಿತು.

2013–14ನೇ ಸಾಲಿನ ಆರ್ಥಿಕ ವರ್ಷದ ಆಯವ್ಯಯದಲ್ಲಿ ಜಿಲ್ಲಾ ವಲಯ ಕಾರ್ಯಕ್ರಮ ಯೋಜನೇತರ ಲೆಕ್ಕಶೀರ್ಷಿಕೆ–3054 (ನಿರ್ವಹಣಾ ಅನುದಾನ) ಅಡಿ ಅನುದಾನ ವಿನಿಯೋಗಿಸಲು ಆಯಾ ತಾಲ್ಲೂಕಿನಲ್ಲಿನ ಶಾಸಕರ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಸಮಿತಿಯನ್ನು ಪ್ರಪ್ರಥಮ ಬಾರಿಗೆ ರಚನೆ ಮಾಡಲಾಗಿರುತ್ತದೆ. ಸದರಿ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಗ್ರಾಮೀಣ ಡಾಂಬರೀಕರಣಗೊಂಡ ರಸ್ತೆ, ಜಲ್ಲಿ ಮತ್ತು ಮಣ್ಣಿನ ರಸ್ತೆಗಳ ಗುಂಡಿ ಮುಚ್ಚಿಸಲು ನಿರ್ವಹಣೆ/ದುರಸ್ತಿಗಾಗಿ ರಸ್ತೆ ಉದ್ದಳತೆ ಆಧಾರದ ಮೇಲೆ ತಾಲ್ಲೂಕುವಾರು ರೂ.109.01 ಕೋಟಿಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗಿರುತ್ತದೆ.

## ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ – 2

ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–2ರಡಿ ರಾಜ್ಯದ 189 ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ತಲಾ 30 ಕಿ.ಮೀ.ನಂತೆ 2196 ಕಾಮಗಾರಿಗಳಲ್ಲಿ 5728.72 ಕಿ.ಮೀ ಉದ್ದದ ರಸ್ತೆಗಳನ್ನು ರೂ.2413.86 ಕೋಟಿ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸುವ ಯೋಜನೆಯನ್ನು 2013–14ನೇ ಸಾಲಿನಲ್ಲಿ ಕೈಗೊಳ್ಳಲಾಗಿರುತ್ತದೆ.







ಈವರೆಗೆ ಸದರಿ ಕಾರ್ಯಕ್ರಮದಡಿ 2269.84 ಕಿ.ಮೀ ರಸ್ತೆಗಳನ್ನು ರೂ.956.03ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿರುತ್ತದೆ. ಪ್ರಗತಿಯ ಪಕ್ಷಿನೋಟ ಕೆಳಕಂಡಂತಿದೆ.

| ವರ್ಷ | ಪೂರ್ಣಗೊಂಡ ರಸ್ತೆ ಕಾಮಗಾರಿಗಳ ಸಂಖ್ಯೆ | ಅಭಿವೃದ್ಧಿಪಡಿಸಲಾದ ರಸ್ತೆ ಉದ್ದ ಕಿ.ಮೀ.ಗಳಲ್ಲಿ | ವೆಚ್ಚ ರೂ.ಕೋಟಿಗಳಲ್ಲಿ |
|---|---|---|---|
| 2013–14 | 686 | 2269.84 | 956.03 |

## ನಬಾರ್ಡ್ ನೆರವಿನ ಯೋಜನೆ:

**ನಬಾರ್ಡ್–15ರ ಯೋಜನೆ:** ನಬಾರ್ಡ್ ಸಂಸ್ಥೆಯ ಹಣಕಾಸು ನೆರವಿನಿಂದ ಆರ್‌ಐಡಿಎಫ್–15 ಯೋಜನೆಯಡಿಯಲ್ಲಿ 2013–14ನೇ ಸಾಲಿನ ಮಾರ್ಚ್–2014ರ ಮಾಹೆಯ ಅಂತ್ಯದವರೆಗೆ ಅನುಮೋದಿತ 277 ಕಾಮಗಾರಿಗಳ ಪೈಕಿ ಒಟ್ಟು 273 ರಸ್ತೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಉಳಿದ 4 ಕಾಮಗಾರಿಗಳನ್ನು ಕೈಬಿಡಲಾಗಿರುತ್ತದೆ.

**ನಬಾರ್ಡ್–16ರ ಯೋಜನೆ:** ನಬಾರ್ಡ್ ಸಂಸ್ಥೆಯ ಹಣಕಾಸು ನೆರವಿನಿಂದ ಆರ್‌ಐಡಿಎಫ್–16 ಯೋಜನೆಯಡಿಯಲ್ಲಿ 2013–14ನೇ ಸಾಲಿನ ಮಾರ್ಚ್–2014ರ ಮಾಹೆಯ ಅಂತ್ಯದವರೆಗೆ ಅನುಮೋದಿತ 404 ಕಾಮಗಾರಿಗಳ ಪೈಕಿ ಒಟ್ಟು 355 ರಸ್ತೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಉಳಿದ 39 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

**ನಬಾರ್ಡ್–17ರ ಯೋಜನೆ:** ನಬಾರ್ಡ್ ಸಂಸ್ಥೆಯ ಹಣಕಾಸು ನೆರವಿನಿಂದ ಆರ್‌ಐಡಿಎಫ್–17 ಯೋಜನೆಯಡಿಯಲ್ಲಿ 2013–14ನೇ ಸಾಲಿನ ಮಾರ್ಚ್–2014ರ ಮಾಹೆಯ ಅಂತ್ಯದವರೆಗೆ ಅನುಮೋದಿತ 599 ಕಾಮಗಾರಿಗಳ ಪೈಕಿ ಒಟ್ಟು 229 ರಸ್ತೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಉಳಿದ 313 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

**ನಬಾರ್ಡ್–18ರ ಯೋಜನೆ:** ನಬಾರ್ಡ್ ಸಂಸ್ಥೆಯ ಹಣಕಾಸು ನೆರವಿನಿಂದ ಆರ್‌ಐಡಿಎಫ್–18 ಯೋಜನೆಯಡಿಯಲ್ಲಿ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಆರ್‌ಐಡಿಎಫ್–18ರಡಿ ನಬಾರ್ಡ್ ಸಂಸ್ಥೆಯಿಂದ ರೂ.7330.00 ಲಕ್ಷಗಳ ಅಂದಾಜು ಮೊತ್ತದಲ್ಲಿ 199 ರಸ್ತೆ ಕಾಮಗಾರಿಗಳು ಅನುಮೊದನೆಗೊಂಡಿದ್ದು, 325.27 ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಇದರಲ್ಲಿ ರೂ.65.00 ಲಕ್ಷಗಳ ಅಂದಾಜು ಮೊತ್ತದಲ್ಲಿ 2 ಸೇತುವೆ ಕಾಮಗಾರಿಗಳು ಅನುಮೋದನೆಯಾಗಿರುತ್ತದೆ. ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

**ನಬಾರ್ಡ್–19ರ ಯೋಜನೆ:** ಈ ಯೋಜನೆಯಡಿಯಲ್ಲಿ ರೂ.114.75 ಕೋಟಿಗಳ ಮೊತ್ತದ 355 ಅಂದಾಜುಪಟ್ಟಿಗಳಿಗೆ ನಬಾರ್ಡ್ ಸಂಸ್ಥೆಯಿಂದ ತೀರುವಳಿಯಾಗಿದ್ದು (Roll over Projects under Nabard-18) ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಇದಲ್ಲದೆ, ನಬಾರ್ಡ್–19 ಯೋಜನೆಯಡಿಯಲ್ಲಿ 61 ಕಾಮಗಾರಿಗಳಿಗೆ ರೂ.44.00 ಕೋಟಿ ಮೊತ್ತಕ್ಕೆ ಆರ್ಥಿಕ ಇಲಾಖೆಯಿಂದ ಒಪ್ಪಿಗೆ ದೊರೆತಿದ್ದು, ಇವುಗಳಲ್ಲಿ 36 ಕಾಮಗಾರಿಗಳಿಗೆ ರೂ.26.20 ಕೋಟಿಗಳ ಮೊತ್ತಕ್ಕೆ ಸರ್ಕಾರದಿಂದ ಅನುಮೋದನೆ ನೀಡಲಾಗಿದೆ.

### ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ:

2013–14ನೇ ಸಾಲಿನಲ್ಲಿ ಒಟ್ಟು ರೂ.149.70 ಕೋಟಿಗಳನ್ನು ಗ್ರಾಮೀಣ ರಸ್ತೆಗಳ ಉದ್ದದ ಆಧಾರದ ಮೇಲೆ ಒದಗಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ 2014ರ ಮಾರ್ಚ್ ಮಾಹೆಯ ಅಂತ್ಯಕ್ಕೆ ರೂ.14637.24 ಅನುದಾನ ಬಿಡುಗಡೆ ಮಾಡಲಾಗಿದ್ದು ರೂ.14637.24 ಲಕ್ಷಗಳ ವೆಚ್ಚದಲ್ಲಿ 7318.00 ಕಿ.ಮೀ. ಉದ್ದದ ರಸ್ತೆಗಳನ್ನು ನಿರ್ವಹಣೆ ಮಾಡಲಾಗಿದೆ.

### 13ನೇ ಹಣಕಾಸು ಆಯೋಗ ಕಾರ್ಯಕ್ರಮ:–

13ನೇ ಹಣಕಾಸು ಆಯೋಗದ ಯೋಜನೆಯಡಿ ರಸ್ತೆಗಳ ನಿರ್ವಹಣೆಗಾಗಿ ರಾಜ್ಯಕ್ಕೆ 4 ವರ್ಷಗಳ ಅವಧಿಗೆ ರೂ.1625.00ಕೋಟಿ ನಿಗಧಿಪಡಿಸಲಾಗಿದೆ. ಈ ಅನುದಾನವನ್ನು 2011–12ನೇ ಸಾಲಿನಿಂದ ನೀಡಲಾಗುತ್ತಿದೆ.

ಇದರಲ್ಲಿ ಲೋಕೋಪಯೋಗಿ ಇಲಾಖೆ, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಗೆ 45:30:25ರ ಅನುಪಾತದಲ್ಲಿ ಅನುಕ್ರಮವಾಗಿ ರೂ.735.25 ಕೋಟಿ, ರೂ.487.50ಕೋಟಿ ಮತ್ತು ರೂ.406.25 ಕೋಟಿ ಇಲಾಖಾವಾರು ಹಂಚಿಕೆ ಮಾಡಲಾಗಿದೆ. ಗ್ರಾ.ಅ ಮತ್ತು ಪಂ.ರಾಜ್ ಇಲಾಖೆಗೆ ರೂ.487.50 ಕೋಟಿಗಳನ್ನು ಕೆಳಕಂಡಂತೆ ವರ್ಷವಾರು ನಿಗಧಿಯಾಗಿರುತ್ತದೆ.

(ರೂ.ಕೋಟಿಗಳಲ್ಲಿ)

| ವರ್ಷ | ನಿಗಧಿಗೊಳಿಸಿದ ಅನುದಾನ | ಬಿಡುಗಡೆ ಮೊತ್ತ | ರಸ್ತೆಗಳ ನಿರ್ವಹಣೆಯ ಕ್ರಿಯಾ ಯೋಜನೆಯಂತೆ ಭೌತಿಕ ಗುರಿ/ಸಾಧನೆ ಕಿ.ಮೀ.ಗಳಲ್ಲಿ) |
|---|---|---|---|
| 2011–12 | 110.10 | 110.10 | 5575.04 |
| 2012–13 | 117.30 | 117.30 | 5725.49 |
| 2013–14 | 125.40 | 125.40 | 5400.65 |
| 2014–15 | 134.70 | – | – |
| ಒಟ್ಟು | 487.50 | 352.80 | |

ಈ ಯೋಜನೆಯ ಪ್ರಸಕ್ತ ಸಾಲಿನ ಆಯವ್ಯಯ ಅನುದಾನ ರೂ.134.70 ಕೋಟಿಗಳನ್ನು ಜಿಲ್ಲಾ ಪಂಚಾಯತಿಗಳಿಗೆ ರಸ್ತೆ ಉದ್ದಳತೆ ಆಧಾರದ ಮೇಲೆ ತಾಲ್ಲೂಕುವಾರು ಹಂಚಿಕೆ ಮಾಡಿ ಮಾರ್ಗಸೂಚಿ ಆದೇಶ ಹೊರಡಿಸಿದೆ. ಈ ಯೋಜನೆಯಡಿ ತಾಲ್ಲೂಕುವಾರು ಹಂಚಿಕೆಯ ಅನುದಾನಕ್ಕೆ ಸೀಮಿತವಾಗಿ ಜಿಲ್ಲಾ ಪಂಚಾಯತಿಗಳು ಕ್ರಿಯಾ ಯೋಜನೆಯನ್ನು ದಿನಾಂಕ:31.05.2014ರೊಳಗಾಗಿ ತಯಾರಿಸಿ, ಜಿಲ್ಲಾ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ದಿನಾಂಕ:15.06.2014ರೊಳಗಾಗಿ ಅನುಮೋದನೆ ಪಡೆದುಕೊಂಡು ಸದರಿ ಕ್ರಿಯಾ ಯೋಜನೆಯ ಎರಡು ಪ್ರತಿಗಳನ್ನು ದಿನಾಂಕ:20.06.2014ರ ಒಳಗಾಗಿ ತಪ್ಪದೆ ಸಲ್ಲಿಸುವಂತೆ ಸೂಚಿಸಲಾಗಿದೆ.

# ಪರಿಸರ ಮಾಲಿನ್ಯ: ಎಚ್ಚರಿಕೆ ಅಗತ್ಯ

* ರವಿ ಎಸ್.ಸೂರನ್

ಪ್ರತಿ ವರ್ಷ ಜೂನ್-5 ರಂದು ವಿಶ್ವ ಪರಿಸರ ದಿನವನ್ನಾಗಿ ಆಚರಿಸಲಾಗುತ್ತಿದೆ. ತನ್ನಿಮಿತ್ತ ಈ ಲೇಖನ

"ಜೂನ್ 5" ಪರಿಸರ ಪ್ರೇಮಿಗಳಿಗೆ ಅವಿಸ್ಮರಣೀಯ ದಿನ. ಕ್ರಿ.ಶ. 1972 ರಂದು ಅಮೇರಿಕಾ ಸಂಯುಕ್ತ ಸಂಸ್ಥಾನ ತನ್ನ ದೇಶದ 27ನೇಯ ಸಂಸತ್ ಅಧಿವೇಶನದಲ್ಲಿ "ಪರಿಸರ ವಿನಾಶ" ದ ಬಗ್ಗೆ ನೀಡಿದ ಮುಂಜಾಗರುಕತೆಯ ಎಚ್ಚರಿಕೆ ಜಗತ್ತಿನ ಉಳಿದೆಲ್ಲ ರಾಷ್ಟ್ರಗಳ ಕಣ್ಣು ತೆರೆಯುವಲ್ಲಿ ಸಫಲವಾಯಿತು. ಆದ್ದರಿಂದ ಜೂನ್ 5 ರಂದು "ವಿಶ್ವ ಪರಿಸರ ದಿನ" ವನ್ನಾಗಿ ಆಚರಿಸಲು ಜಗತ್ತಿನ ಎಲ್ಲಾ ರಾಷ್ಟ್ರಗಳು ಒಪ್ಪಿಕೊಂಡವು.

ಇಂದಿನ ಆಧುನಿಕ ಯುಗದಲ್ಲಿ ಜಗತ್ತು, ವಿಜ್ಞಾನ ಮತ್ತು ತಂತ್ರಜ್ಞಾನಗಳ ನೆರವಿನಿಂದ ಆಧುನಿಕ ನಾಗರೀಕತೆಯು ಬೆಳೆದು ಪರಕಾಷ್ಠೆಯನ್ನು ತಲುಪುವ ಹಂತದಲ್ಲಿದೆಯೆನೋ ಎಂದೆನಿಸದೇ ಇರಲಾರದು. ಅತೀ ನಾಗರಿಕತೆಯನ್ನು ಅರಸುತ್ತ ಹೊರಟಿರುವ ಆಧುನಿಕ ಮಾನವನು ತನ್ನ ಸುತ್ತಲೂ ಹಲವು ಜಟಿಲ ಸಮಸ್ಯೆಗಳ ಜಾಲಗಳನ್ನು ನಿರ್ಮಿಸಿಕೊಂಡಿದ್ದಾನೆ.

ಪ್ರಗತಿಯ ಉನ್ನತ ಶಿಖರವನ್ನು ತಲುಪಲು ಹವಣಿಸುತ್ತಲಿರುವ ಮನುಷ್ಯ ತನ್ನ ಸುತ್ತಮುತ್ತ ವಿಷದಂತೆ ಹರಡುತ್ತಿರುವ "ಪರಿಸರ ಮಾಲಿನ್ಯ" (Environmental Pollution) ಹಾಗೂ ಜನಸಂಖ್ಯಾ ಬೆಳವಣಿಗೆ (Population growth) ಗಳ ದುಷ್ಪ



* ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್, ಉಪವಿಭಾಗ, ಮಾಗಡಿ, ರಾಮನಗರ ಜಿಲ್ಲೆ.

ಜಾಲಗಳಲ್ಲಿ ಸಿಲುಕಿ ತೊಳಲಾಡುತ್ತಿದ್ದಾನೆ. ತಾನೇ ನಿರ್ಮಿಸಿಕೊಂಡಿರುವ ಇಂತಹ ಜಾಲಗಳಿಂದ ಬಿಡಿಸಿಕೊಳ್ಳುವುದು ಕೂಡ ಆಧುನಿಕ ಮಾನವನಿಗೆ ದುಸಾಧ್ಯವಾಗುತ್ತಲಿದೆ.

ಪರಿಸರ ಮಾಲಿನ್ಯದಂತಹ ಭೀಕರ ಸಮಸ್ಯೆಗೆ ಶೀಘ್ರವಾಗಿ ಪರಿಹಾರ ದೊರಕಿಸಿಕೊಳ್ಳದಿದ್ದರೆ ಆಧುನಿಕ "ಮಾನವ ಜನಾಂಗ" ತಮ್ಮ ದುರಂತವನ್ನು ತಾವೇ ಕಂಡು ಕೊಳ್ಳಬೇಕಾಗುತ್ತದೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಕೆಲವೇ ನೂರು ವರ್ಷಗಳ ಹಿಂದೆ ಕಾಣಿಸಿಕೊಂಡ "ಔದ್ಯೋಗಿಕ ಕ್ರಾಂತಿ"ಯ ನಂತರ ನಿರ್ಮಾಣಗೊಂಡಿರುವ ಬೃಹತ್ ಕಾರ್ಖಾನೆಗಳು, ಹೊಸ ಹೊಸ ಆವಿಷ್ಕಾರಗೊಳ್ಳುತ್ತಲಿರುವ ಆಧುನಿಕ ವಾಹನಗಳು ಹಾಗೂ ಗಗನ ಚುಂಬಿ ಕಟ್ಟಡಗಳು ಆಧುನಿಕ ನಾಗರೀಕತೆಯ ಚಿನ್ಹೆಗಳೆನಿಸಿರುವುದೇನೋ ನಿಜ. ಔದ್ಯೋಗಿಕ ಕ್ರಾಂತಿಯ ಮಹತ್ವವನ್ನು ಅರೆತುಕೊಂಡಿದ್ದ ಭಾರತದ ಪ್ರಧಾನಿಗಳಾಗಿದ್ದಂತಹ ದಿ. ಪಂಡಿತ್ ಜವಾಹರಲಾಲ ನೆಹರುರವರು "Industries are Modern Temples" ಎಂದು ಕರೆದಿರುವುದರಲ್ಲಿ ಅತಿಶಯೋಕ್ತಿಯೇನಲ್ಲ. ಕಾರ್ಖಾನೆಗಳಿಂದ ಜೀವನಾವಶ್ಯಕ ಸೌಕರ್ಯಗಳು ಹೆಚ್ಚಿ ಆಧುನಿಕ ಮಾನವನ ಜೀವನ ರೀತಿ ನೀತಿ ಸುವ್ಯವಸ್ಥೆಗೊಳ್ಳುವುದೆಂಬ ಮಾತು ಸರಿಯಾಗಿಯೇ ಇದೆ.

ಆದರೆ ವಿಪರೀತ ಮಿತಿಮೀರಿ ಬೆಳೆದ ಕಾರ್ಖಾನೆಗಳ ಪ್ರಭಾವದಿಂದ ಪ್ರಕೃತಿದತ್ತ ವಾತಾವರಣದ ಶುದ್ಧಹವೆ, ನಿರ್ಮಲ ಜಲ, ನೆಲ ಹಾಗೂ ನಿಸರ್ಗದತ್ತವಾದ ಶಕ್ತಿಗಳು ಕಲುಷಿತ ಗೊಳ್ಳುತ್ತಲಿವೆ. ಅಲ್ಪವೇಳೆ ಹಾಗೂ ಅಲ್ಪಶ್ರಮಗಳಲ್ಲಿ ಬಹುದೊಡ್ಡ ಲಾಭಗಳಿಸಲು ನಿಯೋಜಿಸಿದ ಕಾರ್ಖಾನೆಗಳು ನೈಸರ್ಗಿಕ ಸಂಪನ್ಮೂಲಗಳನ್ನು ನಾಶಗೊಳಿಸುತ್ತಲೇ ಇರುವುದನ್ನು ನೋಡಬಹುದು. ನೈಸರ್ಗಿಕ ಸಿರಿ ಸಂಪತ್ತುಗಳಾದ ವಾಯು, ಜಲ, ನೆಲಗಳ ಕಲುಷಿತದಿಂದ ಸ್ವಾಭಾವಿಕವಾಗಿಯೇ ಇಂದಿನ ಮನುಕುಲದ ಜೀವಕ್ಕೆ ಗಂಡಾಂತರ ಉಂಟಾಗುತ್ತಿದೆ.

ಆಧುನಿಕ ದೇವಾಲಯಗಳೆಂದು ಕರೆಸಿ ಕೊಂಡಿರುವ ಇಂದಿನ ಬೃಹತ್ ಕಾರ್ಖಾನೆಗಳು ನಾವು ಉಸಿರಾಡುವ ಪರಿಶುದ್ಧ ಹವೆಯಲ್ಲಿ ಕಲ್ಮಶಗಳು ಹಾಗೂ ಕಪ್ಪು ಹೊಗೆಯನ್ನು ಕಾರಿ ನಮ್ಮ ಸುತ್ತಲಿನ ವಾತಾವರಣವನ್ನು ವಿಷಕಾರಿಯಾಗಿ ಮಾಡುತ್ತಿರುವುದು ಸತ್ಯ ಸಂಗತಿಯಾಗಿದೆ. ಕಾರ್ಖಾನೆಗಳಲ್ಲಿ ನಿರ್ಮಾಣ ಗೊಂಡು ರಸ್ತೆಗಿಳಿಯುವ ಹೊಸ ಹೊಸ ವಾಹನಗಳು, ವಿದ್ಯುತ್ ಯಂತ್ರಗಳು ಮುಂತಾದವುಗಳೆಲ್ಲ ಕೂಡ ವಾತಾವರಣ ಮಲೀನತೆಗೆ ಕಾರಣಗಳಾಗಿವೆ.

ಈ ಶತಮಾನದಲ್ಲಿ ವಿಜ್ಞಾನದ ಅದ್ಭುತ ಕೊಡುಗೆಗಳೆಂದರೆ ಪರಮಾಣು ಮತ್ತು ನ್ಯೂಕ್ಲಿಯರ್ ಶಕ್ತಿಗಳು, ಪ್ರಪಂಚದ ಬಹುತೇಕ ರಾಷ್ಟ್ರಗಳೆಲ್ಲ ಇಂತಹ ಶಕ್ತಿಗಳನ್ನು ಉತ್ಪಾದಿಸುವಲ್ಲಿ ಪೈಪೋಟಿ ನಡೆಸಿರುವುದು ನಾವುಗಳು ನೋಡಬಹುದಾಗಿದೆ. ಪರಮಾಣು ಮತ್ತು ನ್ಯೂಕ್ಲಿಯರ್ ಶಕ್ತಿಗಳ ಸಾಮರ್ಥ್ಯಗಳನ್ನು ಪರೀಕ್ಷಿಸಲು ಆಗಾಗ ಅಲ್ಲಲ್ಲಿ ಪ್ರಯೋಗಗಳನ್ನು ನಡೆಸಲಾಗುತ್ತದೆ. ಇಂತಹ ಪ್ರಯೋಗಗಳಿಂದ ಹಲವು ನೂರಾರು ಚದುರ ಕಿ.ಮೀ.ಗಳ ಪ್ರದೇಶಗಳು ಮಲೀನಗೊಳ್ಳುವುದುಂಟು. ಅಣುಶಕ್ತಿ ಪ್ರಯೋಗಗಳಿಂದ ಹೊರದಾಡಲ್ಪಟ್ಟ ಹಲವು ಬಗೆಯ ವಿಕೀರಣಗಳು, ವಿಷಾನಿಲಗಳು ಜಗತ್ತಿನ ಎಲ್ಲ ಜೀವರಾಶಿಗಳಿಗೆ ಮಾರಕವಾಗಿರುವವು. ಇಂತಹ ಅಸಹ್ಯ ವಸ್ತುಗಳು ನಮ್ಮ ಪರಿಸರದ ವಾಯು, ಜಲ, ನೆಲಗಳಲ್ಲಿ ಬೆರೆಯುವದರಿಂದ ಸಕಲ ಜೀವಿಗಳಿಗೆ ಅಪಾಯಕಾರಿಯೆಂಬುದನ್ನು ಮರೆಯುವಂತಿಲ್ಲ. ಅಣುಶಕ್ತಿ ಪ್ರಯೋಗಗಳಿಂದುಂಟಾಗುವ ಪರಿಸರ ಮಾಲಿನ್ಯ ತಡೆಗಟ್ಟಲು ಪ್ರಪಂಚದ ಎಲ್ಲ ರಾಷ್ಟ್ರಗಳು ಒಂದೆಡೆ ಸೇರಿ ಸರಿಯಾದ ಯೋಜನೆಗಳನ್ನು ನಿಯೋಜಿಸಬೇಕಾದ ಪ್ರಸಂಗವುಂಟು.

ದಿನದಿನಕ್ಕೂ ಭರದಿಂದ ಬೆಳೆಯುತ್ತಿರುವ ಜನಸಂಖ್ಯಾ ಬೆಳವಣಿಗೆಯು ಚಿಕ್ಕ ಮಕ್ಕಳಿಂದ ಹಿಡಿದು ಎಲ್ಲರಿಗೂ ತಿಳಿದಿರುವ ವಿಷಯವೇ. ಪ್ರತಿ ಕ್ಷಣಕ್ಕೂ ಜನಸಂಖ್ಯೆ ಪ್ರತಿಗುಣಿತವಾಗುತ್ತಲಿದೆ. ಪ್ರತಿದಿನ ಸುಮಾರು 20,000 ಜನರು ಹೆಚ್ಚುತ್ತಲಿದ್ದಾರೆಂದು ಅಂಕಿ ಸಂಖ್ಯೆಗಳು ಸೂಚಿಸುತ್ತವೆ. ಭರದಿಂದ ಬೆಳೆಯುತ್ತಿರುವ ಜನಸಂಖ್ಯೆಗೆ ಅಷ್ಟೇ ಪ್ರಮಾಣದಲ್ಲಿ ಆಹಾರ ಮತ್ತು ಇತರೇ ಮೂಲಭೂತ ಸೌಕರ್ಯಗಳನ್ನೊದಗಿಸುವುದು ಅವಶ್ಯಕವಾಗಿರುತ್ತದೆ.

ಇದಕ್ಕಾಗಿ ನಿಯೋಜಿಸಿದ ಕಾರ್ಖಾನೆಗಳು, ಗಗನಚುಂಬಿ ಕಟ್ಟಡಗಳು, ವಾಹನಗಳು ಮುಂತಾದವುಗಳಿಂದ ಪರಿಸರ ಮಾಲಿನ್ಯ ಉಲ್ಬಣಗೊಳ್ಳುತ್ತಲೇ ಇದೆ. ಜನಸಂಖ್ಯೆ ಹೆಚ್ಚಿದಂತೆ ಜೀವನಾವಶ್ಯಕ ಸಾಮಾಗ್ರಿಗಳ ಬೇಡಿಕೆಯು ಕೂಡ ಹೆಚ್ಚುವುದು. ಭೂಮಿಯ ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ವಸತಿ ಹಾಗೂ ಆಹಾರ



ಸಮಸ್ಯೆ ತಲೆದೋರಿರುವುದು ನಾವೆಲ್ಲ ನೋಡಬಹುದಾಗಿದೆ.

ಜನರು ತಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ಉಪಯೋಗಿಸಿ ಹೊರಗೆ ಎಸೆಯುವ ನಿರುಪಯುಕ್ತ ವಸ್ತುಗಳ ಪ್ರಮಾಣವು ಹೆಚ್ಚುತ್ತಲಿದೆ. ಒಂದು ಅಧ್ಯಯನದ ಪ್ರಕಾರ ಮುಂದುವರೆದ ರಾಷ್ಟ್ರಗಳಲ್ಲಿ ನಗರವಾಸಿಯು ಒಂದು ವರ್ಷಕ್ಕೆ ಸುಮಾರು ಅರ್ಧ ಟನ್‌ಗಿಂತಲೂ ಹೆಚ್ಚು ಕಲುಷಿತ ವಿಷಕಾರಿ ವಸ್ತುಗಳನ್ನು ವಾತಾವರಣದಲ್ಲಿ ಬೀಸಾಡುತ್ತಿದ್ದಾನೆ. ಹೀಗೆ ನಿರುಪಯುಕ್ತ ಕಲುಷಿತ ವಸ್ತುಗಳು ವಾತಾವರಣದಲ್ಲಿ ಬೆರೆತು ಪರಿಸರ ಮಾಲಿನ್ಯವುಂಟಾಗುವ ಬಗೆಯನ್ನು ಕಲ್ಪಿಸಬಹುದಾಗಿದೆ.

ಹೀಗೆ ಒಂದಿಲ್ಲೊಂದು ಕಾರಣದಿಂದ ಅಥವಾ ನಾಗರೀಕತೆಯ ತುತ್ತ ತುದಿಗೆ ತಲುಪಿರುವ ಆಧುನಿಕ ಮಾನವನ ಉದಾಸೀನತೆಯಿಂದ ನೈಸರ್ಗಿಕ ಸಿರಿಗಳಾದ ನೆಲ, ಜಲ, ವಾಯುಗಳು ಮಲೀನಗೊಳ್ಳುತ್ತಲೇ ಇವೆ. ಹೀಗೆ ಮಲೀನಗೊಂಡ ಇವುಗಳನ್ನು ಪುನಃ ಪರಿಶುದ್ಧಗೊಳಿಸುವ ಚೈತನ್ಯ ನಿಸರ್ಗಕ್ಕಿದೆ. ಆದಾಗ್ಯೂ ನಿಸರ್ಗದ ನಿಯಮಕ್ಕೊಂದು ಮಿತಿಯಿರುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಬೆಳೆಯುತ್ತಿರುವ ಜನಸಂಖ್ಯೆ, ಕಾರ್ಖಾನೆಗಳು, ವಾಹನಗಳು, ಯಂತ್ರಗಳು ಮುಂತಾದವುಗಳನ್ನು ಗಣನೆಗೆ ತೆಗೆದುಕೊಂಡರೆ ನಿಸರ್ಗದ ಸುವ್ಯವಸ್ಥಿತ ಕಾರ್ಯಕ್ಕೆ ಚ್ಯುತಿ ವುಂಟಾಗುತ್ತಲಿದೆ. ನಿಸರ್ಗದ ಚುಟುವಟಿಕೆ ಗಳಲ್ಲಿಯ ಅವ್ಯವಸ್ಥೆಯಿಂದ ನೈಸರ್ಗಿಕ ಸಿರಿಗಳಲ್ಲಿ ವ್ಯತಯವುಂಟಾಗುತ್ತಲಿದೆ. ಪರಿಸರ ಮಾಲಿನ್ಯ ಸಮಸ್ಯೆಯು ಎಷ್ಟೊಂದು ಆಘಾತವೆಂದರೆ ತಕ್ಷಣ ಇದನ್ನು ತಡೆಗಟ್ಟದೆ ಹೋದಲ್ಲಿ ಇನ್ನೂ ಕೆಲವೇ ವರ್ಷಗಳಲ್ಲಿ ಇಡೀ ಮನುಕುಲವೇ ನಶಿಸಿ ಹೋಗಬಹುದೇನೋ ಎಂಬ ಶಂಕೆ ನಿಸರ್ಗ ತಜ್ಞರಲ್ಲಿ ಮೂಡಿ ಬರುತ್ತಲಿದೆ.

ಯಾವುದೇ ಒಂದು ರಾಷ್ಟ್ರದ ಸಂಪತ್ತುಗಳಲ್ಲಿ ಜನಸಂಪತ್ತು ಕೂಡ ಮುಖ್ಯ. ಕೇವಲ ಜನಸಂಖ್ಯೆಯ ಪ್ರಮಾಣ ಮಾತ್ರ ಹೆಚ್ಚಬೇಕೆಂಬ ಅಪಾರ್ಥ ಕಲ್ಪಿಸಿಕೊಳ್ಳಲಿಕ್ಕಾಗದು. ಆದರೆ ಅದು ದೇಶದ ಜನರ ಸಂಪತ್ತು ಎಂದು ತಿಳಿದುಕೊಳ್ಳಬೇಕು. ಜನರ ಆರೋಗ್ಯಕ್ಕೆ ಅಗತ್ಯವಾದ ದ್ರವ್ಯಗಳು ಕಲುಷಿತಗೊಳ್ಳದಂತೆ ಎಚ್ಚರಿಕೆ ವಹಿಸುವುದು ಎಲ್ಲ ಜನಸಾಮಾನ್ಯರ ಕರ್ತವ್ಯ ಕೂಡ ಆಗಿದೆ ಎಂಬುದನ್ನು "ವಿಶ್ವ ಪರಿಸರ" ದಿನದಿಂದಲಾದರೂ ಮರೆಯದಿರೋಣ.

# ಕೆರೆಗಳು–ಗ್ರಾಮೀಣ ಅಭಿವೃದ್ಧಿಯ ಕಾಮಧೇನು!

*ಎನ್.ಆರ್. ಪಾಟೀಲ

"ಕೆರೆಗಳು" ಗ್ರಾಮೀಣ ಅಭಿವೃದ್ಧಿಯ ಮೂಲಧಾರ. ಇದನ್ನು ಮನಗಂಡಿರುವ ಕರ್ನಾಟಕ ಸರಕಾರ ನಾಡಿನಾದ್ಯಂತ ನಿರ್ಜೀವಗೊಂಡಿರುವ ಕೆರೆಗಳಿಗೆ ಪುನರುಜ್ಜೀವ ಕಲ್ಪಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ. ನಿರ್ಜೀವ ಕೆರೆಗಳನ್ನು ಅಭಿವೃದ್ಧಿ ಪಡಿಸಲು ಸ್ಥಳೀಯ ಜನಸಮುದಾಯವನ್ನೇ ಮೂಲ ರೂವಾರಿಗಳನ್ನಾಗಿಸಿ, ಆ ಮೂಲಕ ಬರದ ನಾಡಿನಲ್ಲಿ ಜಲಕ್ರಾಂತಿಯನ್ನುಂಟು ಮಾಡಲು ಸರಕಾರ ಮುಂದಾಗಿರುವುದು ನಿಜಕ್ಕೂ ಶ್ಲಾಘನೀಯ. ಈ ನಿಟ್ಟಿನಲ್ಲಿ ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಮುಂದೆ ಬಂದಿದ್ದು, ಸರಕಾರದ ಸಹಭಾಗಿತ್ವದಲ್ಲಿ ಎಲ್ಲವೂ ಸುಸೂತ್ರವಾಗಿ ಮುಗಿದರೆ ಕನ್ನಡದ ನೆಲದಲ್ಲಿ ಜಲಕ್ರಾಂತಿ ಆಗುವುದರಲ್ಲಿ ಸಂದೇಹವಿಲ್ಲ.

ಜಲ ಮೂಲಗಳನ್ನು ಸಂರಕ್ಷಿಸುವ ಹಿನ್ನೆಲೆಯಲ್ಲಿ ಸರ್ಕಾರ ಕೆರೆಗಳ ಪುನಃಶ್ಚೇತನ ಕಾಮಗಾರಿಗಳನ್ನು ಕೈಗೊಂಡಿದೆ.

ಕೆರೆಗಳು ನಮ್ಮೂರಿನ ಅಮೂಲ್ಯ ಆಸ್ತಿಗಳು. ನಮ್ಮ ದಿನನಿತ್ಯದ ಬೇಡಿಕೆಗಳನ್ನು ಪೂರೈಯಿಸುತ್ತ ಬರುತ್ತಿರುವ ಕಲ್ಪವೃಕ್ಷಗಳು. ನಮ್ಮ ಊರಿನ ಕೆರೆಗಳು ನಮ್ಮ ಗ್ರಾಮೀಣ ಸಂಸ್ಕೃತಿಯ ವಾಹಕಗಳು. ಸಹಸ್ರಾರು ಜನಾಂಗಗಳನ್ನು ಬೆಸೆಯುವ ಮಾಧ್ಯಮಗಳು. ಗ್ರಾಮಗಳ ಅಭಿವೃದ್ಧಿಯಲ್ಲಿ ಕೆರೆಗಳ ಪಾತ್ರ ಅತ್ಯಂತ ಅನನ್ಯ. ನಿಜ ಸಂಗತಿಯೆಂದರೆ ಈಗಲೂ ದೇಶದ ಶೇಕಡಾ 60ರಷ್ಟು ಗ್ರಾಮೀಣ ವಲಯಕ್ಕೆ ಕೆರೆಗಳೇ ಜೀವನಾಧಾರ. ಗ್ರಾಮೀಣ ಜನರ ಕಾಮಧೇನುವಾಗಿ, ಪ್ರಾಣಿ, ಪಕ್ಷಿಗಳ ತಾಯಿಯಾಗಿ, ಬಂದಿರುವ



*'ಅಮೃತವರ್ಷಿಣಿ', ಪ್ಲಾಟ್ ನಂ. 21/ಬಿ, ನಂ.3430, ನ್ಯೂ ಸಮರ್ಥ ಕಾಲೋನಿ, ಹಿಂಡಲಗಾ, ಬೆಳಗಾವಿ ಜಿಲ್ಲೆ–591108

ಕೆರೆಗಳು ಅಂದು-ಇಂದಿಗೂ ನಮ್ಮ ಪೂಜಾರ್ಹ ತಾಣಗಳು. ಆದರಿಂದು ಬಹುತೇಕ-ಕೆರೆಗಳು ತಮ್ಮ ಮೊದಲಿನ ವೈಭವವನ್ನು ಜೀವಂತಿಕೆಯನ್ನು ಕಳೆದುಕೊಂಡಿರುವುದರಲ್ಲಿ ಸಂದೇಹವಿಲ್ಲ.

## ಕಾಮಧೇನು ಕೆರೆಗಳು

ಕೆರೆಗಳು ಬೇಡಿದವರಿಗೆ ಬೇಡಿದ್ದನ್ನು ಕೊಡುವ ಕಾಮಧೇನು. ಅದಕ್ಕೆಂದೇ ನಮ್ಮ ಹಿರಿಯರು ಶಾಸನಗಳಲ್ಲಿ "ಕೆರೆಯಂ ಕಟ್ಟಿಸು ಬಾವಿಯಂ ತೋಡಿಸು" ಎಂದು ರಾಜ ಮಹಾರಾಜರುಗಳಿಗೆ ಸಲಹೆ ನೀಡುತ್ತಿದ್ದರು. ಜನಜೀವನಕ್ಕೆ ನೀರು ಎಷ್ಟೊಂದು ಅಮೂಲ್ಯ ಎಂಬುದು ಅಂದಿನವರಿಗೆ ಗೊತ್ತಿತ್ತು. ಈ ಕಾರಣದಿಂದಲೇ ನಮ್ಮ ಪೂರ್ವಜರು ಪ್ರತಿಯೊಂದು ಊರಿಗೂ ಕನಿಷ್ಠ ಒಂದಾದರೂ ಕೆರೆಯನ್ನು ಕಟ್ಟಿಸಿದ್ದಾರೆ. ಕೆರೆಗಳ ಅವಶ್ಯಕತೆಯನ್ನು ಮಹತ್ವವನ್ನು ಅರಿತಿದ್ದ ನಮ್ಮ ಪೂರ್ವಜರು ಊರಿಗೊಂದು, ಕೇರೆಗೊಂದು ಕೆರೆ ಕಟ್ಟಿಸಿದ ಉದಹರಣೆಗಳಿವೆ. ಕೆರೆಗಳ ತವರು ಎಂದೇ ಹೆಸರಾಗಿರುವ ಚಿಕ್ಕಮಗಳೂರು ಜಿಲ್ಲೆಯ ತರೀಕೇರೆ ಮತ್ತು ಕಡೂರು ತಾಲ್ಲೂಕುಗಳಲ್ಲಿ ಕೇರಿಗೊಂದೊಂದು ಕೆರೆಗಳಿರುವುದು ಇಲ್ಲಿ ಉಲ್ಲೇಖನೀಯ. ನೀರು ಜನಾಂಗಗಳ ಅಸ್ತಿತ್ವಕ್ಕೆ, ಸಾಂಸ್ಕೃತಿಕ ಮುನ್ನಡೆಗೆ ಮೂಲಾಧಾರ. ಇಂದಿನ ಬೃಹತ್ ಜಲಾಶಯಗಳು ಅಸ್ತಿತ್ವಕ್ಕೆ ಬರುವ ಮೊದಲೇ ಶತಮಾನಗಳ ಹಿಂದೆಯೇ ಕೆರೆಗಳು ತುಂಬ ಪ್ರಸಿದ್ಧಿ ಪಡೆದಿದ್ದವು. ಹಳ್ಳಕೊಳ್ಳಗಳಲ್ಲಿ ಹರಿದು ಬರುವ ನೀರಿಗೆ ಕಲ್ಲುಮಣ್ಣಿನ ತಡೆಗಳನ್ನು ಕಟ್ಟಿ ಗ್ರಾಮ ಸಮುದಾಯಗಳು ತಮ್ಮ ಜೀವನಾಧಾರ ಕೆರೆಗಳನ್ನು ನಿರ್ಮಿಸಿದ್ದು ನಿಜಕ್ಕೂ ಅನುಕರಣೀಯ.

ಕೆರೆಗಳು ಅನಾದಿಕಾಲದಿಂದಲೂ ಜನರ ಬದುಕಿಗೆ ಚೈತನ್ಯ ನೀಡಿದ ಜಲಮೂಲಗಳು. ಅಂದು ಕೆರೆಗಳಿಗೆ ಎಷ್ಟೊಂದು ಮಹತ್ವವಿತ್ತೆಂದರೆ ಕೆರೆಯ ಹೆಸರುಗಳನ್ನೇ ಹಲವಾರು ಊರುಗಳಿಗೆ ಇಡಲಾಗಿದೆ. ಉದಹರಣೆಗೆ ತರೀಕೆರೆ, ಅಯ್ಯನ ಕೆರೆ, ಕವಡಿಕೆರೆ, ಆನೆಕೆರೆ, ಗುರುವಾಯನಕೆರೆ, ಮದಗದಕೆರೆ ಮುಂತಾದವುಗಳನ್ನು ಹೆಸರಿಸಬಹುದು. ಜೊತೆಗೆ ನಮ್ಮ ಕೆರೆಗಳಿಗೆ ಪೌರಾಣಿಕ, ಐತಿಹಾಸಿಕ ಹಿನ್ನೆಲೆಗಳೂ ಇವೆ. ಭೀಮ, ಅರ್ಜುನ, ರಾಮ, ಲಕ್ಷ್ಮಣ ಮುಂತಾದ ಪೌರಾಣಿಕ ಪುರುಷರು ನಿರ್ಮಿಸಿದ ಕೆರೆಗಳೂ ನಮ್ಮಲ್ಲಿವೆ. ಚಾವುಂಡರಾಯ ನಂಥಹ ಇತಿಹಾಸ ಪುರುಷರು, ರಾಜ ಮಹಾರಾಜರುಗಳು ಕೆರೆಗಳ ನಿರ್ಮಾಣಕ್ಕೆ ತುಂಬ ಮಹತ್ವಕೊಟ್ಟು ಅವುಗಳನ್ನು ನಿರ್ಮಿಸಿದ್ದಾರೆ. ಊರಿಗೆ ನೀರು ನೀಡಲು ಕೆರೆಗೆ ತನ್ನನ್ನೇ ಆಹಾರವಾಗಿಸಿಕೊಂಡು, ಕೆರೆ ತುಂಬಲು ಕಾರಣರಾಗಿ ಜನಮನದಲ್ಲಿ ಇಂದಿಗೂ ಚಿರಸ್ಥಾಯಿಯಾಗಿ ಉಳಿದಿರುವ ಎಷ್ಟೋ ಮಹಾಸತಿಯರು ಇಂದಿಗೂ ಸ್ಮರಣಾರ್ಹರು. ನಮ್ಮಲ್ಲಿ 1500 ವರ್ಷಗಳಿಗಿಂತಲೂ ಹಿಂದಿನ ಕೆರೆಗಳಿವೆ. ವಿಜಯ ನಗರ ಸಾಮ್ರಾಜ್ಯ ಮತ್ತು ಮೈಸೂರು ಅರಸರ ಆಡಳಿತಾವಧಿಯಲ್ಲಿ ಕೆರೆಗಳ ನಿರ್ಮಾಣ ಮತ್ತು ನೀರು ನಿರ್ವಹಣೆಗೆ ಕೊಟ್ಟಂಥಹ ಮಹತ್ವ ಇನ್ನೂ ಅನೇಕ ಜಿಲ್ಲೆಗಳಲ್ಲಿ ಜಾರಿಯಲ್ಲಿವೆ. ಸಾಂಪ್ರದಾಯಕ ನೀರು ನಿರ್ವಹಣೆಯಲ್ಲಿ ಕೆರೆಗಳಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಕರ್ನಾಟಕದ ಬಯಲು ಪ್ರದೇಶದ ಅನೇಕ ಜಿಲ್ಲೆಗಳಲ್ಲಿ ಇಂದಿಗೂ ಕೆರೆಗಳೇ ನೀರಿನ ಸರ್ವ ಬೇಡಿಕೆಗಳ ಪ್ರಮುಖ ಆಶ್ರಯಗಳಾಗಿವೆ ಹೀಗಾಗಿ ಕೆರೆಗಳು ನಮ್ಮ ಜೀವನಾಧಾರ ನೀರನ್ನು ಪೂರೈಸುತ್ತಾ ಬರುತ್ತಿರುವ ಕಾಮಧೇನುಗಳೇ ಆಗಿವೆ.

ನಮ್ಮ ಕೆರೆಗಳು, ಸಾಂಸ್ಕೃತಿಕ ಕೇಂದ್ರಗಳು ಎಂಬುದೂ ನಿತ್ಯ. ಅಂದು ಕೆಲವೊಂದು ಕೆರೆಗಳ ಮಧ್ಯ ದೇವಾಲಯಗಳನ್ನು, ವಿಭಿನ್ನ ರೀತಿಯ ಮಂಟಪಗಳನ್ನು ನಿರ್ಮಿಸುತ್ತಿದ್ದರು. ವರ್ಷಕ್ಕೊಮ್ಮೆ ಮಳೆಗಾಲದಲ್ಲಿ ಕೆರೆ ತುಂಬಿ ಆ ಮಂಟಪ ಮುಳುಗಿದರೆ ಅದು ಊರಿಗೆ ಸಮೃದ್ಧಿಯ ಸಂಕೇತ ಎಂದು ತಿಳಿದು ಉತ್ಸವ ಆಚರಿಸುತ್ತಿದ್ದರು. ಈಗಲೂ ಕೆಲವು ಕೆರೆಗಳ ಮಧ್ಯ ಮಂಟಪಗಳಿರುವುದನ್ನು ಕಾಣಬಹುದು. ಅಂದು ಕೆರೆ ಕಟ್ಟಿದವನ ಮೂರ್ತಿಗಳನ್ನು ಊರಿನ ಆರಾಧ್ಯ

ದೇವತೆಯ ಮೂರ್ತಿಗಳನ್ನು ನಿರ್ಮಿಸಿ ವರ್ಷಕ್ಕೊಮ್ಮೆ ಜಾತ್ರೆ, ಉತ್ಸವಗಳನ್ನು ಮಾಡುತ್ತಿದ್ದರು. ಮಳೆ ಆಗದೇ ಇದ್ದಾಗ ಈ ದೇವರುಗಳಲ್ಲಿ ಭಕ್ತಿಯಿಂದ ಪ್ರಾರ್ಥಿಸುತ್ತಿದ್ದರು. ಈಗಲೂ ಕೆರೆಯ ಮೇಲೆ ನಡೆಯುತ್ತಿರುವ ತೆಪ್ಪೋತ್ಸವ ದೀಪೋತ್ಸವಗಳು ಕೆರೆಗಳನ್ನು ನಮ್ಮ ಸಾಂಸ್ಕೃತಿಕ ಕೇಂದ್ರಗಳನ್ನಾಗಿಸಿವೆ.

ಗ್ರಾಮೀಣ ಸಮುದಾಯಕ್ಕೆ ಕೆರೆಗಳು ಪೂಜನೀಯ ತಾಣಗಳು. ಗ್ರಾಮೀಣ ಕೃಷಿಗೆ ಕೆರೆಗಳ ನೀರೆ ಆಧಾರ. ಊರಿನ ಕೆರೆ ತುಂಬಿದರೆ ಊರಿನ ಬಾವಿಗಳಿಗೆ ಕೊಳವೆ ಬಾವಿಗಳಿಗೆ ನೀರು ಸಮೃದ್ಧವಾಗಿ ದೊರೆಯುತ್ತಿದೆ. ಪಶುಸಂಗೋಪನೆ ನಮ್ಮ ರೈತರ ಮುಖ್ಯ ಉದ್ಯೋಗ. ಪಶುಗಳು ಕುಡಿಯುವ ನೀರಿಗೆ ಕೆರೆಗಳು ಆಧಾರ. ಗ್ರಾಮೀಣ ಕಸುಬುಗಳಾದ ಕುಂಬಾರಿಕೆ ಇಟ್ಟಿಗೆ ತಯಾರಿಕೆ ಬುಟ್ಟಿ ಹೆಣೆಯುವಿಕೆ ಮುಂತಾದ ಉಪಕಸಬುಗಳಿಗೂ ಕೆರೆಯ ನೀರೇ ಆಧಾರ. ಇಂದಿಗೂ ನಮ್ಮ ಕರ್ನಾಟಕದಲ್ಲಿ 6.85 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಕೆರೆಗಳು ನೀರು ಉಣಿಸುತ್ತಿವೆ. ಈ ತೆರನಾಗಿ ಕೆರೆಗಳು ಇಂದಿಗೂ ಕಾಮಧೇನುವಾಗಿ ಸಾಂಸ್ಕೃತಿಕ ತಾಣಗಳಾಗಿ ಧಾರ್ಮಿಕ ಕೇಂದ್ರಗಳಾಗಿ ಎಲ್ಲವನ್ನೂ ಬೆಸೆಯುವ ಮಾಧ್ಯಮಗಳಾಗಿ ಮುನ್ನಡೆದಿವೆ.

## ಕರ್ನಾಟಕ–ಕೆರೆಗಳ ರಾಜ

ಕರ್ನಾಟಕ ಕೆರೆಗಳ ನಿರ್ಮಾಣಕ್ಕೆ ಕ್ರಿಸ್ತಶಕದಾರಂಭದ ಶತಮಾನಗಳ ಗತ ಇತಿಹಾಸವಿದೆ. ಬನವಾಸಿ ನಗರದಲ್ಲಿ ಕರ್ನಾಟಕದ ಅತ್ಯಂತ ಪ್ರಾಚೀನ ನೀರಾವರಿ ಯೋಜನೆ ಇತ್ತೆಂದು ಶಿಲಾಶಾಸನಗಳಿಂದ ತಿಳಿದು ಬರುತ್ತದೆ ಕೆರೆ ನೀರಾವರಿಯು ನಾಗರಿಕತೆಯ ಪ್ರಾಚೀನತೆಯಷ್ಟೇ ಪುರಾತನವಾದ ಕತೆಯಾಗಿತ್ತು. ಕೆರೆ, ಕುಂಟೆ, ಕಟ್ಟೆ, ಕೇಳ, ಮಿಷ್ಕರಣೆ ಇನ್ನೂ ಅನೇಕ ನೀರಾವರಿ ಆಶ್ರಯಗಳು ಕರ್ನಾಟಕ ಶಾಸನಗಳಲ್ಲಿ ಕಾಣಸಿಗುತ್ತವೆ. ಚಂದ್ರವಳ್ಳಿ ಮತ್ತು ತಾಳೆಗುಂದಗಳಲ್ಲಿ ಕದಂಬರ ಕಾಲದಲ್ಲೇ ಕೆರೆಗಳಿದ್ದವು. ಗಂಗ ಅರಪ ದುರ್ವಿನೀತ ಅನೇಕ ಕೆರೆಗಳನ್ನು ಕಟ್ಟಿದ್ದನೆಂದೂ ಅವು ಸಮುದ್ರದೋಪಾದಿಯಲ್ಲಿ ಇದ್ದವೆಂದೂ ಅವನ ತಾಮ್ರಶಾಸನಗಳಲ್ಲಿ ಉಲ್ಲೇಖವಿದೆ. ಬಹುತೇಕ ರಾಜರು ಕೆರೆಕುಂಟೆಗಳನ್ನು ಕಟ್ಟಿಸಲು ತುಂಬ ಧನಸಹಾಯ ಮಾಡುತ್ತಿದ್ದರು. ಅಲ್ಲದೆ ಕರ್ನಾಟಕದ ಅರಸರು ಧಾರ್ಮಿಕ ಪ್ರಿಯರಾಗಿದ್ದು ದೇವಸ್ಥಾನಗಳ ನಿರ್ಮಾಣದಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿದ್ದರು. ಹಾಗೆಯೇ ದೇವರ ಕಾರ್ಯಕ್ಕೆಂದೋ ದೇವಸ್ಥಾನಕ್ಕೆ ಬಂದ ಜನರಿಗೆಂದೋ ದೇವಸ್ಥಾನಗಳ ಸನಿಹದಲ್ಲೇ ಕೆರೆಗಳನ್ನು ಕಟ್ಟಿಸುತ್ತಿದ್ದರು. ಇಂದಿಗೂ ದೇವಸ್ಥಾನಗಳ ಸಮೀಪ ಇಂಥಹ ಕೆರೆಗಳನ್ನು ಕಾಣಬಹುದು. ಉದಾಹರಣೆಗೆ ಈಗಲೂ ಜೀವಂತವಾಗಿರುವ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿರುವ ಕವಡಿಕೆರೆ ಶ್ರೀಕವಡಮ್ಮ ಅರ್ಥಾತ್ ದುರ್ಗಾದೇವಿ ದೇವಸ್ಥಾನದ ಪಕ್ಕದಲ್ಲಿದೆ. ಈ ಕೆರೆಯ ಮಧ್ಯ ಬಂಗಾರದ ಗುಡಿ ಇತ್ತು ಎನ್ನುತ್ತದೆ ಇತಿಹಾಸ. ಹಾಗೆಯೇ ಬಲ್ಲಾಳರಾಯನ ಸಮುದ್ರ, ಭರಮಸಾಗರ, ದೇವರಾಯ ಸಮುದ್ರ ಮುಂತಾದ ಕೆರೆಗಳು ದೇವಸ್ಥಾನಗಳ ಪಕ್ಕದಲ್ಲಿವೆ ಅಂದು ಊರಿನಲ್ಲಿ ಕೆರೆ ಕಟ್ಟಿಸಲು ಎಷ್ಟೊಂದು ಮಹತ್ವವಿತ್ತೆಂದರೆ ಊರಿನವರು ಯಾರೇ ಆಗಲಿ ಯಾವುದಾದರೂ ಕಾರ್ಯಕ್ರಮ ಹಮ್ಮಿಕೊಂಡಾಗ ಕೆರೆ ಅಭಿವೃದ್ಧಿಗಾಗಿ ಹಾಗೂ ಹೊಸ ಕೆರೆಯನ್ನು ಕಟ್ಟಿಸುವುದಕ್ಕಾಗಿ ಮನಸಾರೆ ವಂತಿಗೆಯನ್ನು ನೀಡುತ್ತಿದ್ದರು. ಈಗಲೂ ಕರ್ನಾಟಕಾದ್ಯಂತ ಕೆರೆಗಳೇ ಊರಿನ ಸಕಲ ಕಾರ್ಯಗಳೊಂದಿಗೆ ಕೃಷಿಗೆ ಮೂಲಾಧಾರವಾಗಿವೆ 60 ಎಕರೆ ವಿಸ್ತಾರವನ್ನು ಆಕ್ರಮಿಸಿರುವ ಯಲ್ಲಾಪುರದ ಕವಡಿಕೆರೆ 5000 ಎಕರೆ ವಿಸ್ತಾರದ ಮದಗದ ಕೆರೆ 2000 ಎಕರೆಯ ಕಡೂರು ತಾಲ್ಲೂಕಿನ ಸುಖರಾಯ ಪಟ್ಟಣದ ಅಯ್ಯನ ಕೆರೆ ಮುಂತಾದ ಅನೇಕ ದೊಡ್ಡ ಹಾಗೂ ಸಣ್ಣ ಕೆರೆಗಳು ಆಯಾ ಊರುಗಳಿಗೆ ಅಷ್ಟೇ ಅಲ್ಲ ಸುತ್ತಮುತ್ತಲಿನ ಊರುಗಳಿಗೆ ನೀರುಣಿಸುತ್ತಿವೆ.

ಹೌದು! ಕೆರೆಗಳ ರಾಜ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಕರ್ನಾಟಕದಲ್ಲಿ 7 ಲಕ್ಷ ಹೆಕ್ಟೇರ್‌ಕ್ಕೂ ಹೆಚ್ಚು ಭೂ ಪ್ರದೇಶಕ್ಕೆ ಈಗಲೂ ನೀರುಣಿಸುತ್ತಿವೆ ಎಂದು ಅಂದಾಜಿಸಲಾಗಿದೆ. ಗ್ರಾಮೀಣ ನೀರಾವರಿಯಲ್ಲಿ

ಬಹುಮುಖ ಪಾತ್ರವಹಿಸುವ ಈ ಕೆರೆಗಳು ಅತ್ಯಂತ ಪ್ರಾಚೀನ ಕಾಲದ ನಿರ್ಮಾಣಗಳು ಎಂಬುದು ಐತಿಹಾಸಿಕ ಸತ್ಯ. ಕೆಲವೊಂದು ಕೆರೆಗಳಿಗೆ ಶತಶತಮಾನಗಳ ಇತಿಹಾಸವಿದೆ. ಕವಡಿ ಕೆರೆಯನ್ನು ಪಾಂಡವರ ವನವಾಸ ಸಮಯ ಭೀಮನು ಇದನ್ನು ಕಟ್ಟಿದ ಎಂದು ಹೇಳಲಾಗುತ್ತಿದೆ. ಅಯ್ಯನಕೆರೆಯನ್ನು 13ನೇ ಶತಮಾನದಲ್ಲಿ ರುಕ್ಮಾಂಗದ ರಾಜ ಕಟ್ಟಿಸಿದ ಎನ್ನುತ್ತದೆ ಇತಿಹಾಸ. ಕರ್ನಾಟಕದ ಕೆರೆಗಳು ಯಾವ ರೀತಿಯಾಗಿ ಉಪಯುಕ್ತವಾಗಿವೆ ಎಂಬುದಕ್ಕೆ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಊರಿಗೊಂದಿರುವ ಕೆರೆಗಳನ್ನು ಹೆಸರಿಸಬಹುದು. ಶಿರೂರು ಕೆರೆ 1000 ಎಕರೆ ಭೂಮಿಗೆ ನೀರುಣಿಸಿದರೆ ಪೇತಾಲೂರು ಕೆರೆ 900 ಎಕರೆಗೆ ಜಂಲ್ಲಿ ಶಿರೂರು ಕೆರೆ 1100 ಎಕರೆಗೆ ಮುಂಡವಾಡ ಕೆರೆ 930 ಎಕರೆಗೆ ತಾಮ್ರಗುಂಡಿ ಕೆರೆ 600 ಎಕರೆ ನೀರುಣಿಸುತ್ತಿದ್ದು ಇಲ್ಲಿಯ ಪ್ರತಿ ಊರಿನ ಎಲ್ಲ ಕೆರೆಗಳು ಜೀವನಾಧಾರವಾಗಿವೆ. ಇಲ್ಲಿಯ ಒಂದು ವಿಶೇಷವೆಂದರೆ ಬ್ರಿಟನ್ನಿನ ಮಹಾರಾಣಿ ವಿಕ್ಟೋರಿಯಾ ಶ್ರದ್ಧೆಯಿಂದ ಕಟ್ಟಿಸಿದ ಕೆರೆಯೊಂದು ಇಲ್ಲಿದೆ ವಿಕ್ಟೋರಿಯಾ ಮಹಾರಾಣಿಯ ಈ ಕೆರೆ



ತಪೋತಗಿರಿಯಿಂದ ಹರಿದು ಬರುವ ಡಂಬಳ ಊರಿನ ಕಡೆಯ ಎಲ್ಲಾ ನೀರನ್ನೂ ತನ್ನ ಒಡಲಿಗೆ ಹಾಕ್ಕೊಂಡು ತುಂಬಿ ತುಳುಕುತ್ತದೆ. ಇದೆಲ್ಲ ನೋಡಿದಾಗ ಕರ್ನಾಟಕ ಕೆರೆಗಳ ರಾಜ ಎಂಬುದು ಸತ್ಯವೆನಿಸುತ್ತದೆ. 1959ರ ನವದೆಹಲಿ ಪಂಚವಾರ್ಷಿಕ ಯೋಜನಾಸಮಿತಿಯ ವರದಿಯ ಪ್ರಕಾರ 37,000ಕ್ಕೂ ಹೆಚ್ಚು ಕೆರೆಗಳು ಕರ್ನಾಟಕದಲ್ಲಿದ್ದು ಉತ್ತರ ಕನ್ನಡದಲ್ಲಿ 5819, ಧಾರವಾಡದಲ್ಲಿ 3653, ಬೆಳಗಾವಿಯಲ್ಲಿ 757 ಕೆರೆಗಳಿವೆ. ಎಂದು ವರದಿಯಾಗಿದೆ.

## ನಿರ್ಜೀವದತ್ತ

ಒಂದು ಕಾಲವಿತ್ತು. ಕೆರೆ ಕಟ್ಟಿಸುವುದು ಹಾಗೂ ಅದನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವುದು ಎಂದರೆ ತುಂಬ ಪುಣ್ಯದ ಕೆಲಸವಾಗಿತ್ತು. ಕೆರೆಯನ್ನು ಚೆನ್ನಾಗಿ ನೋಡಿಕೊಳ್ಳುವುದು ಊರಿನ ಎಲ್ಲರ ಜವಾಬ್ದಾರಿಯಾಗಿತ್ತು. ಜೊತೆಗೆ ಅಂದು ಜನರಿಗೆ ನಮ್ಮೂರಿನ ಕೆರೆ ಎಂಬ ಅಭಿಮಾನವಿತ್ತು. ಮೇಲಾಗಿ ಅವರ ಜೀವನಾಧಾರವಾಗಿದ್ದುದರಿಂದ ಅದರ ಬಗೆಗೆ ಪೂಜ್ಯ ಭಾವನೆಯೂ ಇತ್ತು. ಆದರೆ ಸ್ವಾತಂತ್ರ್ಯ ಬಂದ ಮೇಲೆ ಎಲ್ಲ ಊರಿನ ಕೆರೆಗಳನ್ನು ಸರಕಾರ ತನ್ನ ವಶಕ್ಕೆ ತೆಗೆದುಕೊಂಡು ಅವುಗಳ ಸಂರಕ್ಷಣೆಯ ಹೊಣೆ ಹೊತ್ತುಕೊಂಡಿತು. ಆದರೆ ಊರಿನ ಜನರನ್ನು ದೂರವಿಟ್ಟದ್ದರಿಂದ ಜನರೂ ಕೆರೆಗಳತ್ತ ಗಮನ ಹರಿಸಲಿಲ್ಲ. ಬರಬರುತ್ತ ಕೆರೆಯ ಯಾವುದೇ ಕೆಲಸ ಬಂದರೂ ಅದು ಸರಕಾರದ ಕೆಲಸ ಎಂದು ಹೇಳುವುದು ಸಾಮಾನ್ಯವಾಯಿತು. ಅನೇಕ ತುರ್ತು ಕೆಲಸಗಳ ನಡುವೆ ಕೆರೆಯತ್ತ ಸರಕಾರ ಗಮನ ಹರಿಸದೇ ಇದ್ದಾಗ ಅವು ನಿರ್ಜೀವದತ್ತ ಸಾಗತೊಡಗಿದವು. ಕೆರೆಗಳ ಹೂಳನ್ನು ಕಾಲಕಾಲಕ್ಕೆ ತೆಗೆಯದೇ ಇದ್ದುದರಿಂದ ಅವುಗಳ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವೂ ಕಡಿಮೆಯಾಗಿತ್ತು. ಹೀಗಾಗಿ ಊರಿನ ಕೆರೆ ಊರಿನ ಜನರಿಂದಲೂ ನಿರ್ಲಕ್ಷ್ಯಕ್ಕೊಳಗಾಯಿತು. ಹೀಗಾಗಿ ಇಂದು ಅನೇಕ ಕೆರೆಗಳು ತಮ್ಮ ಜೀವಂತಿಕೆಯನ್ನು ಕಳೆದುಕೊಂಡಿವೆ ಎಂಬುದು ಸತ್ಯ.

**"ಮೂಡಲ್ ಕುಣಿಗಲ್ ಕೆರೆ**
**ನೋಡೋರ್ಗೊಂದ್ವೈಭೋಗ**
**ಓಡಿ ಬರ್‍ತಾನೆ ಚಂದಿರಾಮ......"**

ಈ ಸಾಲುಗಳನ್ನು ಓದುತ್ತಿದ್ದಂತೇ ನಿಮಗೆ ದಿವಂಗತ ಪಿ. ಕಾಳಿಂಗರಾಯರ ಹೆಸರು ನೆನಪಾಗಿರಬೇಕು.

ಕುಣಿಗಲ್ ಕೆರೆಯ ಸೌಂದರ್ಯವನ್ನು ಜನಪದ ಕವಿಯೊಬ್ಬ ಹೇಳಿದ್ದನ್ನು ಕಾಳಿಂಗರಾಯರು ಅರ್ಥವತ್ತಾಗಿ ಹಾಡಿ ಆ ಕೆರೆಯ ಸೊಬಗನ್ನು ನಾಡಿನ ಮನೆ ಮನೆಗೂ ಪರಿಚಯ ಮಾಡಿಕೊಟ್ಟಿದ್ದರು. ಆದರೆ ಆ ಕೆರೆಯ ಸೊಬಗು ಇಂದು ಬಹುತೇಕ ಒಂದು ನೆನಪು ಮಾತ್ರ. ಈಗಲೂ ಮಳೆಗಾಲದಲ್ಲಿ ಕೆರೆ ತುಂಬಿದಾಗ ಕೆರೆ ವಿಶಾಲವಾಗಿ ಕಂಡರೂ ಮಳೆಗಾಲ ಮುಗಿದ ಕೆಲವೇ ದಿನಗಳಲ್ಲಿ ನೀರು ಇಳಿದು ಹೋಗಿ ಬಿಡುತ್ತದೆ. ಕಾರಣ ಕೆರೆಯ ತುಂಬ ತುಂಬಿರುವ ಹೂಳು! ಇದು ಕೇವಲ ಕುಣಿಗಲ್ ಕೆರೆಯ ಕಥೆಯಲ್ಲ ಈಗ ನಮ್ಮ ರಾಜ್ಯದಲ್ಲಿರುವ ಬಹುತೇಕ ಕೆರೆಗಳ ಅವಸ್ಥೆ ಇದೇ ಆಗಿದೆ. ಇದು ಹೀಗೆ ಮುಂದುವರೆದರೆ ಈಗ ನಮ್ಮ ರಾಜ್ಯದಲ್ಲಿರುವ 37000 ಕೆರೆಗಳಲ್ಲಿ 35000 ಕೆರೆಗಳು ಮುಚ್ಚಿ ಹೋಗುತ್ತವೆ ಎಂದು ಅಂದಾಜಿಸಲಾಗಿದೆ ಹೀಗಾದಲ್ಲಿ ಇದು ಕೃಷಿಯ ಮೇಲೆ ಬೀರುವ ಪರಿಣಾಮ ಅತ್ಯಂತ ಭಯಾನಕವಾಗಿರುತ್ತದೆ. ಕೆರೆಗಳು ತಮ್ಮ ಮೊದಲಿನ ಜೀವಂತಿಕೆಯನ್ನು ಕಳೆದುಕೊಳ್ಳುತ್ತಿರುವುದಕ್ಕೆ ಈ ಕೆಳಗಿನ ಕಾರಣಗಳು ಪ್ರಮುಖವಾಗಿವೆ.

* ಸಾಂಪ್ರದಾಯಕ ಕೆರೆ ನಿರ್ವಹಣೆ ಇಲ್ಲದ್ದರಿಂದ ಕೆರೆಗಳಿಗಾದ ಅಡಚಣೆಗಳನ್ನು ಶೀಘ್ರವಾಗಿ ಪರಿಹರಿಸಲು ಅಸಾಧ್ಯವಾಗುತ್ತಿದೆ. ಈ ಹಿಂದೆ ಊರಿನ ಜನರೇ ಊರಿನ ಕೆರೆಯ ಉಸ್ತುವಾರಿ ಮಾಡುತ್ತಿದ್ದುದರಿಂದ ಕೆರೆಗಾದ ತೊಂದರೆಗಳನ್ನು ಊರಿನ ಜನರೆಲ್ಲ ಸೇರಿ ಬಹುಬೇಗ ನಿವಾರಿಸುತ್ತಿದ್ದರು ಅಲ್ಲದೆ ಅಂದು ಕೆರೆ ನಿರ್ವಹಣೆಯಲ್ಲಿ ಸಾಂಪ್ರದಾಯಕವಾದ ವಾರದ ಕೆಲಸ, ಸೋಮವಾರದ ಕೆಲಸ, ನೀರುಗುಂಟೆ ಮುಂತಾದ ವಿಧಾನಗಳು ಕೆರೆಯ ಸಂರಕ್ಷಣೆಗೆ ಪೂರಕವಾಗಿದ್ದವು. ಈಗ ಕೆರೆಗಳ ನಿರ್ವಹಣೆ ಸರಕಾರದ್ದಾಗಿದ್ದರಿಂದ ಕೆರೆಗಳ ಸಂರಕ್ಷಣೆ ಸಕಾಲಕ್ಕೆ ಆಗುತ್ತಿಲ್ಲ. ಇದನ್ನು ಸ್ವತಃ ಸರಕಾರವೇ ಒಪ್ಪಿಕೊಂಡಿದ್ದು ಈಗ ಕೆರೆಗಳ ಜವಾಬ್ದಾರಿಯನ್ನು ಸ್ಥಳೀಯರಿಗೇ ವಹಿಸಿಕೊಡುವ ಪ್ರಯತ್ನ ಮಾಡುತ್ತಿದೆ.

* "ನಿರ್ಜೀವವಾಗುತ್ತಿರುವ ಕೆರೆಗಳಿಗೂ ಬೇಕಾಬಿಟ್ಟಿಯಾಗಿ ಕಡಿದು ಹಾಕುತ್ತಿರುವ ಮರಗಿಡಗಳಿಗೂ ನಿಕಟ ಸಂಬಂಧವಿದೆ" ಎನ್ನುತ್ತಾರೆ ಪರಿಸರ ತಜ್ಞರು. ಆದರೆ ಈ ಸಂಬಂಧ ಎದ್ದು ಕಾಣುವಂಥಹದಲ್ಲವಾದರೂ ಇದು ವೈಜ್ಞಾನಿಕ ಸತ್ಯ. ನೆಲದಾಳದಲ್ಲಿ ಹರಡಿರುವ ಗಿಡ ಮರಗಳ ಬೇರುಗಳು ಮಣ್ಣಿನ ಕಣಗಳನ್ನು ಒತ್ತಾಗಿ ಹಿಡಿದು ನಿಲ್ಲಿಸಿರುತ್ತವೆ. ಇದರ ಜೊತೆಗೆ ಮರಗಳಲ್ಲಿರುವ ಎಲೆಗಳು ಮಳೆಯ ಹನಿಗಳನ್ನು ತಡೆದು ಮಳೆ ಬೀಳುವ ರಭಸವನ್ನು ಕಡಿಮೆ ಮಾಡುತ್ತವೆ. ಹೀಗಾಗಿ ಬಿದ್ದ ನೀರು ನೆಲವನ್ನು ಕೊರೆದುಕೊಂಡು ಮಣ್ಣನ್ನು ಕೊಚ್ಚಿಕೊಂಡು ಹೋಗುವುದಿಲ್ಲ. ಆದರೆ ಮರಗಿಡಗಳನ್ನು ಕಡಿದು ಹಾಕಿದರೆ ಬೀಳುವ ರಭಸದ ಮಳೆಗೆ ಅಡೆತಡೆಯೇ ಇರುವುದಿಲ್ಲ. ಬೋಳು ನೆಲದ ಮೇಲೆ ಬಿದ್ದ ಮಳೆನೀರು, ಬೇಸಿಗೆಯಲ್ಲಿ ಚೆನ್ನಾಗಿ ಕಾಯ್ದು ಸಡಿಲಗೊಂಡಿರುವ ಮಣ್ಣನ್ನು ಸುಲಭವಾಗಿ ಕೊಚ್ಚಿಕೊಂಡು ಹೋಗಿ ಕೆರೆಯ ತಳಭಾಗದಲ್ಲಿ ಸಂಗ್ರಹಿಸುತ್ತದೆ. ಇದೇ ರೀತಿ ಪ್ರತಿವರ್ಷ ಹೂಳು ಹೆಚ್ಚುತ್ತ ಹೋಗಿ ಕೆರೆಯ ನೀರು ಸಂಗ್ರಹಿಸುವ ಸಾಮರ್ಥ್ಯ ಕಡಿಮೆಯಾಗುತ್ತ ಬರುತ್ತದೆ ಹೀಗಾಗಿ ಆ ಕೆರೆಯ ನೀರಾವರಿ ಅಚ್ಚುಕಟ್ಟು ಪ್ರದೇಶವೂ ಕಡಿಮೆಯಾಗುತ್ತ ಹೋಗುತ್ತದೆ. ಅತ್ತ ಗಮನ ಹರಿಸದೇ ಇದ್ದರೆ ಕಾಲದಗತಿಯಲ್ಲಿ ಕೆರೆ ಅನುಪಯುಕ್ತವಾಗುತ್ತದೆ. ಕಾರಣ ಕೆರೆಯ ಸುತ್ತಮುತ್ತ ಗಿಡ ಮರಗಳನ್ನು ಬೆಳೆಸಬೇಕು. ಹಳ್ಳಿಯ ಗೋಮಾಳ, ಗುಂಡು ತೋಪುಗಳನ್ನು ಸುರಕ್ಷಿತವಾಗಿಟ್ಟುಕೊಂಡು ಬರಬೇಕು.

* ಕೆರೆಗಳು ಒತ್ತುವರಿಯಾಗಿರುವುದೊಂದು ದೊಡ್ಡ ಸಮಸ್ಯೆ ಕೆಲವು ಕಡೆ ಕೆರೆಗಳು ಎಷ್ಟೊಂದು ಒತ್ತುವರಿಯಾಗಿವೆ ಎಂದರೆ ಅವು ಎಲ್ಲಿ ಇದ್ದವು ಎಂಬುದನ್ನು ಕಂಡು ಹಿಡಿಯುವುದೇ ಕಷ್ಟ. ಉದಾಹರಣೆಗಾಗಿ ಬೆಂಗಳೂರಿನ ಎಷ್ಟೋ ಕುಟುಂಬಗಳ ಬುಡದಲ್ಲಿ ಹಲವು ಕೆರೆಗಳೇ ಇವೆ. ಈ ಎಲ್ಲ ಕುಟುಂಬಗಳನ್ನು ಈಗ ತೆರವುಗೊಳಿಸುವುದು ಸಾಧ್ಯವೇ? ಕಾರಣ ಕೆರೆಗಳು ಒತ್ತುವರಿಯಾಗುವುದನ್ನು ಮೊದಲೇ

ಗುರುತಿಸಿ ತಡೆಯಬೇಕು. ಇದರತ್ತ ಊರಿನ ಜನರು ಸದಾ ಗಮನವಿರಿಸಬೇಕು.

* ನೀರು ನಿರ್ವಹಣೆಯಲ್ಲಿ ದಕ್ಷ ವ್ಯವಸ್ಥೆ ಇಲ್ಲದಾಗಿದೆ. ಇತ್ತೀಚೆಗೆ ಕೆರೆಗಳು ಊರಿನ ಜನರಿಂದ ನಿರ್ಲಕ್ಷ್ಯಕ್ಕೊಳಗಾಗಿದ್ದು ನೀರಿನ ನಿರ್ವಹಣೆ ಸರಿಯಾಗಿ ಆಗುತ್ತಿಲ್ಲ. ಬೇಕಾದವರು ಬೇಕಾದ ಹಾಗೆ ಕೆರೆಯ ನೀರನ್ನು ಬಳಸುತ್ತಿದ್ದಾರೆ. ಮೇಲಾಗಿ ಸರಕಾರಿ ಕೆರೆ ಎಂಬರ್ಥದಲ್ಲಿ ಊರಿನ ಹೊಲಸನ್ನೆಲ್ಲ ಇಲ್ಲಿಯೇ ಬಿಡುತ್ತಾರೆ. ಕೆರೆಯ ನಟ್ಟನಡುವೆ ಹೋಗಿ ದನಕರುಗಳ ಮೈ ತೊಳೆಯುವುದು ಬಟ್ಟೆ ತೊಳೆಯುವುದು ಕೆರೆಯ ನೀರಿನ ಸಮೀಪವೇ ಮಲಮೂತ್ರ ವಿಸರ್ಜಿಸುವುದು. ಊರಿನ ಹೊಲಸನ್ನೆಲ್ಲ ತಂದು ಕೆರೆಯ ನೀರಿಗೆ ಎಸೆಯುವುದು ಕೆರೆಯ ದಂಡೆಯ ಮೇಲಿರುವ ಗಿಡಮರಗಳನ್ನು ಕಡಿದುಕೊಂಡು ಹೋಗುವುದು ಇನ್ನೂ ಅನೇಕ ಕಾರಣಗಳಿಂದ ಕೆರೆಗಳೆಲ್ಲ ದುಃಸ್ಥಿತಿಗೆ ತಲುಪಿವೆ.

## ಕೊನೆಹನಿ

ಈಗ ಸರಕಾರ ಎಚ್ಚೆತ್ತುಕೊಂಡಿದೆ. ಈಗಿನ ಎಲ್ಲ



ನಿರ್ಜೀವ ಕೆರೆಗಳನ್ನು ಅಭಿವೃದ್ಧಿಪಡಿಸಿ ಗ್ರಾಮೀಣರ ಕೈಗೆ ಮೊದಲಿನಂತೇ ಒಪ್ಪಿಸಲು ಮುಂದಾಗಿದೆ. ಈ ಅವಕಾಶವನ್ನು ನಮ್ಮ ಗ್ರಾಮೀಣರು ಸರಿಯಾಗಿ ಸದುಪಯೋಗಪಡಿಸಿಕೊಳ್ಳಬೇಕು. ನಮ್ಮೂರಿನ ಕೆರೆ ನಮ್ಮ ಅಮೂಲ್ಯ ಆಸ್ತಿ. ಈ ಆಸ್ತಿಯನ್ನು ಉಳಿಸಿ ಬೆಳೆಸಿದರೆ ಮಾತ್ರ ನಮಗೆ ಉಳಿಗಾಲ. ಗ್ರಾಮಗಳಲ್ಲಿ ಕೆರೆಗಳ ಅಭಿವೃದ್ಧಿ ಹಾಗೂ ಅವುಗಳ ಮುಂದಿನ ನಿರ್ವಹಣೆಯ ಬಗೆಗೆ ಜನರಲ್ಲಿ ಸಂಪೂರ್ಣ ಮಾಹಿತಿ ನೀಡಿ ಅವರನ್ನು ಈ ಪ್ರಗತಿಪರ ಕಾರ್ಯದಲ್ಲಿ ಅಳವಡಿಸಿಕೊಳ್ಳಬೇಕು. ಇಲ್ಲಿ ಯಾವುದೇ ಕಾರಣಕ್ಕೂ ಭ್ರಷ್ಟಾಚಾರ ಸಲ್ಲದು. ಈ ಕಾರ್ಯಕ್ಕೆ ಗ್ರಾಮೀಣ ಪದವೀಧರರನ್ನು ಸರಕಾರ ಬಳಸಿಕೊಳ್ಳಬೇಕು. ಧನಸಹಾಯ ನೀಡಿ ಅವರಿಂದಲೆ ಕೆರೆಗಳನ್ನು ಜೀವಂತಗೊಳಿಸುವ ಕಾರ್ಯ ಮಾಡಿಸಬೇಕು. ಗ್ರಾಮೀಣ ಪದವೀಧರರು ಈ ಕಾರ್ಯದಲ್ಲಿ ತನುಮನದಿಂದ ದುಡಿಯಲು ಮುಂದೆ ಬರಬೇಕು. ಇದು ನೀವು ನಿಮ್ಮ ಊರಿಗೆ ಸೇವೆ ಸಲ್ಲಿಸಲು ಸಿಕ್ಕ ಸುವರ್ಣ ಅವಕಾಶ ಎಂಬುದನ್ನು ನಮ್ಮ ಗ್ರಾಮೀಣ ಯುವಕರು ಅರಿತುಕೊಂಡು ಸಿದ್ಧರಾಗಬೇಕು. ಸರಕಾರ ಕೆರೆಗಳ ಜೀವಂತಿಕೆಗೆ ಹಣ ನೀಡುತ್ತದೆ ಅದನ್ನು ಸದುಪಯೋಗ ಪಡಿಸಿಕೊಂಡು ತಮ್ಮೂರಿನಲ್ಲಿ ಜಲಕ್ರಾಂತಿಯನ್ನು ಯುವಶಕ್ತಿ ಮಾಡಬೇಕು. ತಮ್ಮಲ್ಲೇ ಒಂದು ಸಂಘಟನೆ ಮಾಡಿಕೊಂಡು ಊರಿನ ಜನರು ಪ್ರಾಮಾಣಿಕವಾಗಿ ಈ ಪವಿತ್ರ ಕಾರ್ಯಕ್ಕೆ ಮುಂದಾಗಬೇಕು ಕೆರೆಗಳು ಸಕಲವನ್ನೂ ನೀಡುವ ಕಾಮಧೇನು ಇದಂತೆ. ನಿತ್ಯ ಚಟುವಟಿಕೆಗಳಿಗೆ ನೀರನ್ನೊದಗಿಸುವುದರ ಜೊತೆಗೆ ನಿಮ್ಮ ಭೂಮಿಗೂ ನೀರು ನೀಡುತ್ತದೆ. ನಿಮ್ಮೂರಿನ ಹವೆಯನ್ನೂ ಶುದ್ಧಗೊಳಿಸುತ್ತದೆ. ಈ ನಿಮ್ಮ ಕೆರೆಗಳ ಜವಾಬ್ದಾರಿ ನಿಜಕ್ಕೂ ನಿಮ್ಮದೇ ಹೌದು! ಕೆರೆಯ ಸುತ್ತಮುತ್ತ ಶುದ್ಧ ಪರಿಸರ ಕಾಪಾಡಿಕೊಳ್ಳಿ. ಕೆರೆಯ ಏರಿಯ ಮೇಲೆ ಸುತ್ತಮುತ್ತ ಗಿಡ ಉಪಯುಕ್ತ ಗಿಡಮರಗಳನ್ನು ಬೆಳೆಸಿ. ಅವು ಕೆರೆಯ ಆಯುಸ್ಸು ಹೆಚ್ಚಿಸುತ್ತವೆ ಎಂಬುದನ್ನು ಮನದಟ್ಟಾಗಿಸಿಕೊಳ್ಳಿ. ಕಾರಣ ಅಲ್ಲಿ ಸಸಿನೆಟ್ಟು ಬೆಳೆಸಲು ಎಲ್ಲರೂ ಮುತುವರ್ಜಿವಹಿಸಿ. ಈಗ ಸರಕಾರ ನಿಮ್ಮೂರಿನ ಕೆರೆಯ ಸಂರಕ್ಷಣೆಯನ್ನು ನಿಮಗೆ ವಹಿಸುತ್ತಿರುವುದರಿಂದ ನಿಮ್ಮ ಜವಾಬ್ದಾರಿ ಈಗ ತುಂಬ ಹೆಚ್ಚಿದೆ. ಬನ್ನಿ, ಕೆರೆಗಳನ್ನು ಉಳಿಸೋಣ, ಬೆಳೆಸೋಣ ಅದರೊಂದಿಗೆ ನಾವೂ ಬೆಳೆಯೋಣ. ಪರಿಸರವನ್ನು ಜಲಮೂಲಗಳನ್ನು ಸಂರಕ್ಷಿಸೋಣ.

ಚಿಂತನ

ಜನಪದ ಸಾಹಿತ್ಯದಲ್ಲಿ ಹೆಣ್ಣಿಗೆ ನೀಡಿರುವ ಸ್ಥಾನಮಾನದ ಬಗ್ಗೆ ಲೇಖಕರ ವಿಶ್ಲೇಷಣೆ

# ಜಾನಪದ ಸಂಸ್ಕೃತಿಯ ಮೂಲವೆ ಮಹಿಳೆ

*** ಅಪ್ಪಗೆರೆ ತಿಮ್ಮರಾಜು**

ಜಾನಪದ ಸಾಹಿತ್ಯ ಸಂಸ್ಕೃತಿ ವಿಚಾರಗಳು ಬಂದಾಗ, ಜನಪದ ಸಂಸ್ಕೃತಿಗೆ ಮುಖ್ಯ ಕಾರಣ ಮಹಿಳೆ ಎನ್ನುವುದರಲ್ಲಿ ಯಾವ ಅನುಮಾನ ಬೇಡವೆಂದೆ ಗ್ರಹಿಸಬೇಕು. ಜನಪದ ಅಂದಾಕ್ಷಣ ಬರುವುದೇ ಬರುವವಳೆ ಮೊದಲು ಹೆಣ್ಣು. ಅದು ಹೇಗೆ? ಎಂಬ ಪ್ರಶ್ನೆಗಳಿಗೆ ಕೈಹಾಕಿದಾಗ, ಬೆಳಿಗ್ಗೆ ಎದ್ದು ಕಾರ್ಯ ಪ್ರವೃತ್ತಿ ಕೈಗೊಳ್ಳುವಳೆ ಹೆಣ್ಣಾದ್ದರಿಂದ ಪ್ರಾರಂಭ ಆರಂಭವೇ ಹೆಣ್ಣು ಎನ್ನುವುದರಲ್ಲಿ ನಮ್ಮ ಕಣ್ಮುಂದೆ ಇದೊಂದು ತ್ರಿಪದಿಯೇ ಸಾಕ್ಷಿ.

**ಕಲ್ಲು ಬಿಟ್ಟೇನೆಂದು ಸಿಟ್ಯಾಕೆ ಸರಸ್ವತಿಯೆ**
**ಕುಕ್ಕೇಲಿರಾಗಿ ಬೆಳೆಯಲಿ–ತಕ್ಕೊಂಡು**
**ಮತ್ತೆ ರಾತ್ರೀಗೆ ಬರುತೀನಿ.**

ರಾಗಿ ಕಲ್ಲನ್ನು ಗಂಡು ತಯಾರಿಸಿರಬಹುದು. ಆದರೆ ಅದಕ್ಕೆ ಸೂಕ್ತ ಕೆಲಸಕ್ಕೆ ಚಾಲನೆ ಕೊಟ್ಟವಳು ಹೆಣ್ಣು. ಬೆಳಿಗ್ಗೆ ಎದ್ದಾಕ್ಷಣ ರಾಗಿ ಬೀಸುವ ಎಚ್ಚರ ಎಚ್ಚರಿಕೆ ಇದು ನನ್ನ ಕರ್ತವ್ಯವಲ್ಲವೆ ಎಂಬ ಅನಂತ ಜ್ಞಾನ ಅಂದೆ ಮಹಿಳೆಗಿತ್ತು. ಮತ್ತೊಂದು ಆ ದಿನದ ಪ್ರಾರಂಭ ಹೆಣ್ಣೆ. ರಾಗಿ ಬೀಸಿದ ನಂತರ ಎರಡನೆ ಕರ್ತವ್ಯ ದನದ ಕೊಟ್ಟಿಗೆಯನ್ನು ಗುಡಿಸಿ ಕಸವನ್ನು ಹೊಲಕ್ಕೆ ತೆಗೆದುಕೊಂಡು ಹೋಗುವ ಸಂಸ್ಕಾರವೂ ಹೆಣ್ಣಿನದೆ. ತದನಂತರ ಸೂರ್ಯೋದಯಕ್ಕೆ ಸ್ವಾಗತ ತನ್ನ ಮನೆಯ ಮುಂದಿನ ರಂಗೋಲೆ. ಆ ರಂಗೋಲೆ ಬಿಡುವವಳು ಹೆಣ್ಣೆ. ಆ ನಂತರ ಸೌದೆ ಒಲೆ, ಹಸಿ ಸೌದೆಯಾದರು ಸರಿ ಅಡುಗೆ ಮಾಡಿ ತನ್ನ ಪುರುಷ ಉಳುತ್ತಿರುವ ಹೊಲಕ್ಕೆ ರೊಟ್ಟಿಯೊ, ಹಿಟ್ಟೊ ಹೊತ್ತು ಹೋಗುವವಳೂ ಹೆಣ್ಣೆ.

ಹೀಗೆ ಹೆಣ್ಣೆಂಬುವವಳು ಒಂದು ರೀತಿ ಸಾಮಾಜಿಕ ಅಭಿವೃದ್ಧಿಯಲ್ಲಿ ಮಹಾನ್ ಪಾತ್ರ ವಹಿಸುತ್ತಾಳೆ. ಹಿಂಸೆ, ಕಷ್ಟ ಸಹಿಸಿಕೊಳ್ಳುವ ಹೃದಯವೂ ಹೆಣ್ಣಿನದೆ. ಆ ನಂತರ ಹೊಲಗದ್ದೆಗಳಲ್ಲಿ ದನ, ಕುರಿ ಮೇಯಿಸುವ ಅಥವಾ ಗಂಡನಿಗೆ ಹೊಲದಲ್ಲಿ ಕಳೆಯೊ, ಕಸವೊ ಎತ್ತಾಕುವ ಸಹಾಯ ಮಾಡುತ್ತಲೆ, ತೆಗೆದುಕೊಂಡು ಹೋಗಿದ್ದ ಬಟ್ಟೆಯನ್ನು ಪಕ್ಕದ ಕೆರೆ, ಕಟ್ಟೆಯಲ್ಲಿ ತೊಳೆದು ಅಲ್ಲೆಯೆ ಒಣಹಾಕಿಕೊಂಡು ಸ್ವಚ್ಛಗೊಳಿಸುತ್ತಾ, ಸಂಜೆ ಅಡುಗೆಗೆ ಏನು ಬೇಕು ಎಂದು ಯೋಚಿಸಿ, ತನ್ನ ಹೊಲದಲ್ಲೆ ಇದ್ದ ಕಾಯಿ, ಸೊಪ್ಪನ್ನು ವ್ಯವಸ್ಥೆ ಮಾಡಿಕೊಳ್ಳುತ್ತಾಳೆ ಎಂಬುವುದಕ್ಕೆ ಇವೆಲ್ಲ ಸಾಕ್ಷ್ಯಾಧಾರ, ಅಷ್ಟೊತ್ತಿಗೆ ಸಂಜೆ, ಗೋಧೂಳಿ ಮನೆಗೆ ಬರುವ ಕಾಲಕ್ಕೆ ಮಕ್ಕಳು ಹಸಿವಿನಿಂದ ಬಳಲುತ್ತಿವೆ ಎಂಬ ವ್ಯಥೆ. ಅಷೊತ್ತಿಗೆ ಮತ್ತೆ ಅಡುಗೆ ಮಾಡಿ ಮಕ್ಕಳಿಗೂ, ಗಂಡನಿಗೂ, ಅತ್ತೆ ಮಾವಂದಿರನ್ನು ನೋಡುತ್ತಾ, ಉಂಡ ಪಾತ್ರ ಪಗಡೆ ತೊಳೆದಿಟ್ಟು ಮತ್ತೆ ಕೋಳಿ ನಿದ್ದೆಯಂತೆ ನಿದ್ದೆ ಮಾಡಿ ಮತ್ತೆ ಬೆಳಿಗ್ಗೆ ಕೋಳಿ ಕೂಗುವ ಕಾಲಕ್ಕೆ ಎದ್ದು ಮತ್ತೆ ಅದೇ ವೃತ್ತಿ ಕಾಯಕ ಈ ನೆಲದ ಹೆಣ್ಣಿಗೆ.

* ಜಾನಪದ ಗಾಯಕರು, ಚಿಂತಕರು, ನಂ. 28, 10ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಹಂಪಿನಗರ, ವಿಜಯನಗರ, ಬೆಂಗಳೂರು–560104. Email : appagere@gmail.com

ಇದೆಲ್ಲವುದರ ಹುಟ್ಟು ಹೆಣ್ಣೆ ಎಂಬುವುದನ್ನು ಪುರುಷ ಪ್ರಧಾನವಾದ ವ್ಯಕ್ತಿ ಮರೆಯಲಾಗದಂತ ಚಾರಿತ್ರಿಕ ಜಾನಪದ ವಿಚಾರಗಳು, ಸಾಮಾಜಿಕ ಬದುಕಿನಲ್ಲಿ ಹೆಣ್ಣಿಲ್ಲದೆ ವಿಷಯವಿಲ್ಲ, ಹೆಣ್ಣಿಲ್ಲದ ಸಮಾಜವಿಲ್ಲ, ಜನಪದ ಮಹಾಭಾರತವೇ ಆಗಲಿ, ಜನಪದ ರಾಮಾಯಣವೇ ಆಗಲಿ, ಹೆಣ್ಣಿಲ್ಲದೆ ಯಾವ ಕಥೆಯೂ ಇಲ್ಲವೆಂಬುವುದು ನಮಗೆ ಉದಾಹರಣೆಯಾಗಿವೆ.

ಸಾಮಾಜಿಕ ಕಥೆಗಳಲ್ಲಿ ಹೆಣ್ಣಿಗೆ ಪ್ರಾಧಾನ್ಯತೆ. ಭಕ್ತಿ ಪ್ರಕಾರದಲ್ಲಿ ದುರ್ಗಿ, ಚಾಮುಂಡಿಯೇ ಮುಖ್ಯ. ಕಥನ ಗೀತೆಯಲ್ಲೂ ಹೆಣ್ಣೆ, ಸಂಪ್ರದಾಯ, ಆಚಾರ-ವಿಚಾರಗಳಲ್ಲೂ ಹೆಣ್ಣೆ. ಪತಿವ್ರತೆಯ ವಿಚಾರದಲ್ಲೂ ಹೆಣ್ಣೆ. ಮಾತೃ ಪ್ರಧಾನದಲ್ಲೂ ಹೆಣ್ಣೆ. ಕುಟುಂಬ ವ್ಯವಸ್ಥೆಯಲ್ಲಿ ತಾಯಿಯಾಗಿ, ಹೆಂಡತಿಯಾಗಿ, ಮಗಳಾಗಿ, ಅಕ್ಕ-ತಂಗಿಯಾಗಿ, ಸೊಸೆಯಾಗಿ ಮಾತೃವಂತಿಕೆಯಲ್ಲು ಹೆಣ್ಣೆ. ಅನೇಕ ಶೋಷಣೆಗೆ ಒಳಗಾದ ಕಥನ ಕಾವ್ಯ ಮತ್ತು ಜನಪದ



ಬಿಡಿಗೀತೆಗಳಲ್ಲೂ ಹೆಣ್ಣೆ, ಸಂಬಂಧ ವಿಚಾರ ಬಂದಾಗಲೂ ಹೆಣ್ಣೆ. ರುದ್ರಕಾಳಿಯಾಗಿಯೂ ಹೆಣ್ಣೆ, ಅತೀ ಸೂಕ್ಷ್ಮ ಬಿತ್ತನೆಯ ಪ್ರತೀಕದಲ್ಲೂ ಹೆಣ್ಣೆ. ಐತಿಹಾಸಿಕ ವಿಚಾರಗಳಲ್ಲೂ ಹೆಣ್ಣೆ ಆದ್ದರಿಂದ ಮೂಲ ಸ್ಥಾಯಿ ಭಾವ ಹೆಣ್ಣೆ. ಆದ್ದರಿಂದ ಹೆಣ್ಣಿನ ಆಚಾರ-ವಿಚಾರಗಳನ್ನು ನಾವು ಎಷ್ಟೆಷ್ಟು ಅಂಶಗಳನ್ನು ಗ್ರಹಿಸುತ್ತೇವೆ. ಅಷ್ಟು ಪುರುಷ ಮನೆಯ ಏಳ್ಗೆಗೆ ಒಳ್ಳೆಯದು. ಕೆಲವು ಸಂದರ್ಭದಲ್ಲಿ ಪುರುಷ ಹೆಚ್ಚುಗಾರಿಕೆ ವಹಿಸುತ್ತಾನೆ. ಎಚ್ಚರಿಕೆ ಭಯ, ಇವು ಹೆಣ್ಣಿಗೆ ಇರಬೇಕಾದ್ದು ಆಪುರುಪದ ಭಯದ ಜೊತೆಗೆ ಅನನ್ಯ ಪ್ರೀತಿಯು ಹೆಣ್ಣೆ. ಕರುಳ ಬಳ್ಳಿಯ ವಂಶ ಕುಡಿಯು ಹೆಣ್ಣೆ. ಸಮಾಜದ ಸರ್ವಸ್ವವು ಮನೆಯ ದೀಪದಂತೆ, ದೇವರಿಗೆ ಹೊತ್ತ ಆರತಿಯಂತೆ ಹೆಣ್ಣು, ಕಟ್ಟುವವಳೆ ಹೆಣ್ಣು.

**ತವರೂರ ದಾರೀಲಿ ಕಲ್ಲಿಲ್ಲ ಮುಳ್ಳಿಲ್ಲ**
**ಸಾಸಿವೆಯಷ್ಟು ಮರಳಿಲ್ಲ ಬಾನಲ್ಲಿ**
**ಬಿಸಲೀನ ಬೇಗೆ ಸುಡಲಿಲ್ಲ.**

ಎಷ್ಟೆ ಮಕ್ಕಳು ಮರಿ ಮೊಮ್ಮಕ್ಕಳಾದರು ತೌರಿನ ಹಂಬಲ ಹೇಳತೀರದು. ಯಾವುದೇ ಸಂಸ್ಕೃತಿ ಯಾವುದೆ ಅರಿವು ಯಾವುದೇ ತಿಳಿವು ಪವಿತ್ರ ಕಾರ್ಯಕ್ಕೆ ಮೀಸಲಾಗದಿದ್ದರೆ ಅಂತಹ ಜ್ಞಾನದಿಂದ ಬಂದ ಲಾಭವೇನು? ಅನೇಕ ಆಚರಗಳನ್ನು ನಂಬಿಕೆಗಳನ್ನು ಭಕ್ತಿಯನ್ನು ಬಲಪಡಿಸುವವರೆ ಹೆಣ್ಣು ಮಕ್ಕಳು. ಮುತ್ತೈದೆ ತನ, ಮುತ್ತೈದೆಯ ಭಾಗ್ಯ, ಮುತ್ತೈದೆಯ ಗೌರವ, ಮುತ್ತೈದೆತನ ಕಳೆದುಕೊಂಡ ಮೇಲೆ ಹೆಣ್ಣಿಗೆ ಇರುವ ಗೌರವ ಇವೆಲ್ಲವನ್ನು ಕಟ್ಟಿದವಳೆ ಹೆಣ್ಣು.

ಇಂದಿಗೂ ಮಹಿಳೆಯರೆ ಪ್ರಧಾನವಾಗಿ ಮಾಡುವ ಪ್ರಧಾನ ಪಾತ್ರ ವಹಿಸುವ ನಮ್ಮ ಗ್ರಾಮೀಣ ಹಬ್ಬಗಳನ್ನು ಸ್ವಲ್ಪ ಸ್ಮರಿಸಿಕೊಂಡರೆ ತೌರಿನ ಗೌರಿಹಬ್ಬ, ಸೀಗೆ ಹುಣ್ಣಿಮೆ ಹಬ್ಬ, ನಾಗರ ಪಂಚಮಿ ಹಬ್ಬ, ಹೆಣ್ಣು ದೇವರ ಹಬ್ಬಗಳು, ಭೂಮಿ ಹುಣ್ಣಿಮೆ ಹಬ್ಬ ಇಂತಹ ಹಬ್ಬಗಳಿಗೆ ಹೆಣ್ಣು ಬರಲೇಬೇಕು, ಭಾಗವಹಿಸಲೇಬೇಕು. ಈ ರೀತಿಯಾಗಿ ಗಂಡು ಬರಲೇಬೇಕು ಮಾಡಲೇಬೇಕೆಂಬ ಯಾವುದೇ ನಿಶ್ಚಿತ ನಂಬಿಕೆಗಳು ಬಹಳ ಕಡಿಮೆ. ಹಾಗೆಯೇ ಹೆಣ್ಣು ಈ ಹಬ್ಬಗಳಿಗೆ ಕಾಯುತ್ತಲೂ ಇರುತ್ತಾಳೆ. ಹರಕೆ

ಹೊರುವವಳು ಹೆಣ್ಣುಮಗಳು ಉಪವಾಸ ಇರುವವಳು ಹೆಣ್ಣುಮಗಳು, ಜಾತ್ರೆಯಲಿ ತೇರುಬೀದಿಯಲಿ ಬಾಯಿಬೀಗ ಚುಚ್ಚಿಸಿಕೊಳ್ಳುವಳು ಹೆಣ್ಣುಮಗಳೆ. ಗ್ರಾಮ ದೇವತೆಯ ಹಬ್ಬಗಳಿಗೂ ಮತ್ತು ಹೆಣ್ಣುಮಕ್ಕಳಿಗೂ ಅನನ್ಯ, ಅಗಾದವಾದ ಬೆಸುಗೆ, ಭಕ್ತಿ ಮೊದಲಿನಿಂದಲೂ ನಂಬಿಕೆ ಮತ್ತು ಆಚರಣೆಯಾಗಿ ಬಂದು ಬಿಟ್ಟಿದೆ. ಎಷ್ಟೋ ಬಡವೆ ಹೆಣ್ಣು ಮಗಳಾದರು ಸರಿ ಹೊಸ ಬಟ್ಟೆ ಉಟ್ಟು, ಉಪವಾಸ ತೊಟ್ಟು ಹಬ್ಬ ಆಚರಿಸುತ್ತಾಳೆ. ಇವೆಲ್ಲವೂ ಮಹಿಳಾ ಜನಪದ ಸಂಸ್ಕೃತಿಯಾಗಿ ಹೆಣ್ಣುಮಕ್ಕಳ ಪದವಾಗಿ ಹುಟ್ಟಿವೆ.

ಜನಪದ ಗೀತೆಗಳ ರಸಘಟ್ಟಗಳನ್ನು, ಕಾವ್ಯ ಸ್ವಾರಸ್ಯವನ್ನು ಗುರುತಿಸುತ್ತಾ ಹೋದರೆ, ಜನಪದ ವ್ಯಾಖ್ಯಾನ ಅಪಹಾಸ್ಯಕರ. ಆದರೂ ಸಾಮಾನ್ಯ ಓದುಗರಿಗೆ, ಧ್ವನಿಗರ್ಭಿತವಾದ ರಸಪೂರ್ಣವಾದ ಹೆಣ್ಣು ಮಕ್ಕಳ ಗೀತೆಗಳಿಗೆ ಅರ್ಥ ಹೇಳಬೇಕಾಗುತ್ತದೆ. ತನ್ನ ಹಿತಮಿತ ಸಹಜ, ಸರಳತೆಯಲ್ಲೆ ಸೌಂದರ್ಯ ಬಚ್ಚಿಟ್ಟುಕೊಂಡಿದೆ. ಕವಿಗಳು, ಸಾಹಿತಿಗಳು, ತಮ್ಮ ಮಹತ್ತರವನ್ನು ಕಂಡರು. ಆದರೆ ಓದು, ಬರಹವಿಲ್ಲದ ಜನಪದ ಏನೂ ಒದ್ದಾಡದೆ ಎತ್ತರ ಮುಟ್ಟಿದರು.

ವಿದ್ಯೆ, ಪದವಿ, ಶಾಸ್ತ್ರಜ್ಞಾನ ಇವೆಲ್ಲಕ್ಕಿಂತ ಅನುಭವ ಪ್ರತಿಭೆ ಬಹುಮುಖ್ಯವಾದದ್ದು ಎಂದು ಜನಪದ ಸಾಹಿತ್ಯ ಕೋರುತ್ತದೆ.

**ಮಕ್ಕಳ ಪಾಶಕ್ಕೆ ಹಕ್ಕಿ ಕಟ್ಟಿತು ಗೂಡು**
**ಸಿಕ್ಕಿತ್ತು ಶಿವನ ಬಲೆಯಲ್ಲಿ – ಬಲೆಗಾರ**
**ಮಕ್ಕಳ ತಾಯ ಕೊಲ್ಲದಿರು.**

ಮಕ್ಕಳ ಮೇಲಿನ ಪ್ರೀತಿ ಹಕ್ಕಿಗೆ ಪಾಶವಾಗಿದೆ. ಅದಕ್ಕೆ ಬೇರೆ ಬಲೆ ಬೀಸಬೇಕಿಲ್ಲ. ಶಿವನು ಸಂಸಾರದ ಬಲೆ ಬೀಸಿದ್ದಾನೆ. ಬಂಧನವಿಲ್ಲದೆ ಗೂಡು ಕಟ್ಟುತ್ತಿತ್ತೆ? ತಾಯಿ ಮಗು ಸಂಬಂಧವನ್ನು ಹಳ್ಳಿಯ ಸಾಹಿತ್ಯ ಇನ್ನಿಲ್ಲ ಎಂಬಂತೆ ವರ್ಣಿಸಿದೆ. ತಾಯಿ ಮಗಳ ವಾತ್ಸಲ್ಯ ಮಮತೆ, ಕರಳುಬಳ್ಳಿಯ ಸಂಬಂಧ ತೊಟ್ಟಿಲ ಹಾಗೆ ಅತ್ತಿಂದಿತ್ತ, ಇತ್ತಿಂದತ್ತ ಸರಿಯುವ ವೇಗವೇ ಶೃತಿ. ಕಂದನ ಕೇಕೆಯೆ ಪ್ರೋತ್ಸಾಹ. ಆ ಲಾಲಿ ಪದಗಳ ಕೇಳೆ ನಿದ್ದೆ ಮಾಡುತ್ತವೆ.

**ಮುದ್ದೆ ಬಾ ಮುಗುಳೆ ಬಾ ವಜ್ರದ ಹರಳೆ ಬಾ**
**ಅರ್ಜುನನ ಕೊರಳ ಪದಕವೆ–ಬಾಯೆಂದು**
**ಅಜ್ಜಿ ಮೊಮ್ಮಗನ ಕರದಳು.**

ಮುಗುಳೆ ಎಂದರೆ ಇನ್ನು ಅರಳದಿರುವ ಮಗು ಮಗ್ಗು ಎಂದು ಕರೆಯುತ್ತಾರೆ. ಅದರ ಪರಿಮಳ ವಜ್ರದ ಹರಳಿನ ಹಾಗೆ.

## ತಾಯಿ–ಮಗಳು–ತವರು:

ತಾಯಿ, ತವರು, ಮಗಳು ಇದೊಂದು ಕಿತ್ತಾಕಲಾಗದ ಕರುಳ ಬಳ್ಳಿ. ತಾಯಿ ಮನೆ ಅಷ್ಟೇ ಪ್ರೀತಿ, ಮಗಳ ಸಂಕಟ ವರ್ಣಿಸಲಾಗದು. ಬಣ್ಣನೆ ಬಡವಾಗುತ್ತದೆ. ಯಾವ ಕಾಳಿದಾಸನಿಗೂ ಕಡಿಮೆಯಿಲ್ಲ ನಮ್ಮ ಹಳ್ಳಿದಾಸರು ಎಂದರೆ ತಪ್ಪಾಗಲಾರದು.

**ಹೆಣ್ಣೆತ್ತ ಮನೆಯು ಭಿನ್ನ ಭಿನ್ನವಾಯ್ತು**
**ಬಣ್ಣ ಬರದಿದ್ದಿ ನಡುಮನೆಗೆ – ತಾಯಮ್ಮ**
**ಬಣ್ಣಕಂಡ್ ನಮ್ಮ ಮರೆಯಮ್ಮ**

ಕಣ್ಣು ಕಾಣುವ ತನಕ ಬೆನ್ನು ಬಾಗುವ ತನಕ ಅಮ್ಮನ ತವರು ನನಗಿರಲಿ. ತವರನ್ನು ಬಿಡುವ ಕೊನೆಯ ದಿನ, ತವರಿನ ಎಲ್ಲಾ ವಸ್ತುಗಳು ಮಾತಾಡುತ್ತಿವೆ. ಹೊಸ್ತಿಲೆ, ಹೋಗ್ತೀನಿ, ಬಾಗಿಲೆ ಹೋಗ್ತೀನಿ, ನಡುಮನೆಯ ಹೋಗ್ತೀನಿ, ನನ್ನ ಪಡಸಾಲೆಯೆ ಹೋಗಿ ಬರುತ್ತೇನೆ. ಇಷ್ಟೆಲ್ಲಾ ಮಹಾ ಮೌನದಲ್ಲೆ ವರ್ಣಿಸಿದ್ದಾಳೆ ಹೆಣ್ಣುಮಗಳು.

"ಮಲ್ಲಿಗೆ ಹೂವನ್ನೂ ಬೆಳ್ಳಗಿ ಹೆಣ್ಣನ್ನು ಬಯಸದವನಾರು!" ಹಾಗೆಯೆ ಬಾಳಿನ ಗೋಳನ್ನು ದಾಟಲು ಹಾಸ್ಯದ ಹರಿಗೋಲು. ಜಾನಪದವನ್ನು ಬಹು ಹಿಂದಿನದು ಎಂದು ನೋಡಬೇಡಿ, ಒಂದು ಸಾವಿರ ವರ್ಷ ಅವಧಿಯ ಜನಪದವು ಬೇಡದ, ಐನೂರು ವರ್ಷದ್ದೂ ಬೇಡ, ಈಗಿನ ಶತಮಾನದ ಜಾನಪದದಿಂದ ಈಚೆಗೆ ಅದರಲ್ಲೂ ಐವತ್ತು ವರ್ಷಗಳಿಂದೀಚೆಗೆ ಜಾನಪದವನ್ನು ನೋಡಿ ಆ ಮೂಲ ಆ ನೈಜತೆ, ಆ ಸೊಗಡು, ಸಂಬಂಧ ನಮ್ಮ ಕೈಯಿಂದ ಬಾಯಿಂದ ಜಾರಿಹೋಗಿವೆ. ಸಿಗುವುದಕ್ಕೆ ಸಾಧ್ಯವಿಲ್ಲ, ಎಷ್ಟೋ ಸಾಹಿತ್ಯ ಸಂಗೀತ, ನೃತ್ಯದ ಜೊತೆ ಬೆರೆತು ಹೋಗಿವೆ.

ಜಾನಪದ ವಿಶ್ವವೌಲಿಕವಾದದ್ದು. ಅದು ಯಾವುದೋ ಒಂದು ಕಾಲಘಟ್ಟದ ಮೈದೋರಿದರೂ ಕಾಲ ದೇಶ ಬಾಧಿತವಾಗಿ ನಿಲ್ಲುತ್ತದೆ. ಇದು ಅನೇಕ ಕಾಲದ ಬಹುಜನರ ಅನುಭವ ರಸಾಯನವಾದ್ದರಿಂದ ಅದಕ್ಕೆ ಚಿರಚಿಂತ ಜೀವಂತಿಕೆ ಮರು ಚೇತನ ಲಭಿಸುತ್ತದೆ. ಇಂದಿನ ಅನೇಕ ಶಿಷ್ಟ ಸಾಹಿತ್ಯದ ವಾಕ್ಯಗಳು ಮರೆತುಹೋಗುತ್ತವೆ. ಆದರೆ "ಆಚಾರಕ್ಕರಸಾಗು ನೀತಿಗೆ ಪ್ರಭುವಾಗು, ಮಾತಿನಲಿ ಚೂಡ ಮಣಿಯಾಗು" ಎಂಬ ಮಾತುಗಳು ಮರೆಯಲು ಸಾಧ್ಯವೇ ಎನ್ನುವುದಕ್ಕಿಂತ ನನ್ನ ಜೀವನದ ಸತ್ಯ ಜನಪದಕ್ಕಿದೆ ಎನ್ನಿಸುತ್ತದೆ.

**ಹಾಡೇಳಿ ಹಾಡೇಳಿ ಬಾಯಲ್ಲ ಬತ್ತಿದೊ**
**ಹಾಡಿನ್ ಬಾಯ್ಲೊಂದು ಎಲೆಯಿಲ್ಲ-ಗಂಗಮ್ನ**
**ಬಡಿವಾರಕೊಂದು ಎಲಿಸಂಚಿ**

ಹೇಗೆ ಎಷ್ಟು ಎಂಬುವುದನ್ನು ಜನಪದ ಧ್ವನಿಸುತ್ತದೆ. ಈ ರಸಮಾಧುರ್ಯ ವಿಶೇಷ. ಹಾಡು ಹೇಳಿ ಹೇಳಿ ಹಾದಿಯ ಮೇಲೆ ಚೆಲ್ಲಿದಳಂತೆ, ಚೆಲ್ಲುವಷ್ಟು ಧಾರಾಳವಾಗಿ ಹಾಡು ಬರುತ್ತಿತ್ತು. ಆರಿದ್ರಾ ನಕ್ಷತ್ರದ ಮಳೆ ಬಂದು ಆ ಹಾಡುಗಳೆಲ್ಲ ಚಿಗುರಿದವಂತೆ. ಈ ಹಾಡಿನ ಪರಿಮಳ ಇನ್ನೂ ಯಾವ ಹಾಡಿಗೆ ಬಂದೀತು, ಹೆಣ್ಣು ಮಕ್ಕಳು ಅವುಗಳನ್ನು ಪಚ್ಚೆಯ ಕದಿರೆಂದು ಭಾವಿಸಿ ಮೂಡಿದಂತೆ. ಈ ಬಾವಾರ್ಥಗಳು ಒಮ್ಮೊಮ್ಮೆ ನಮಗು ಅರ್ಥವಾಗದು.

ಜನಪದ ಸಾಹಿತ್ಯದ ಹೆಸರೆತ್ತಿದ ಕೂಡಲೇ ಮೂಗು ಮುರಿಯುವಂತಹ ಆಧುನಿಕರು ತುಂಬಾ ಇದ್ದಾರೆ. ಯಾವುದೇ ಸಾಹಿತ್ಯವನ್ನಾಗಲೀ ಅದು ಹುಟ್ಟಿದ ಸಾಮಾಜಿಕ, ಸಾಂಸ್ಕೃತಿಕ, ಚಾರಿತ್ರಿಕ ಹಿನ್ನೆಲೆಯ ದೃಷ್ಟಿಯಲ್ಲಿ ಇಟ್ಟುಕೊಂಡು ನೋಡಬೇಕು, ಅಭ್ಯಸಿಸಬೇಕು. ಅದರ ಹುಟ್ಟಿಗೆ ಅನೇಕ ಕಾರಣವಿರಬಹುದು. ಅವುಗಳ ಧ್ಯೇಯ, ಧೋರಣೆಗಳನ್ನು ಗಮನಿಸಬೇಕು. ಇದು ನಿಸ್ಸಾರವಾದುದ್ದು, ನಿರ್ಜೀವವಾದದ್ದು ಎಂದು ಹೇಳುವ ಸಾಹಿತ್ಯದಲ್ಲು ಸದ್ಗುಣಗಳನ್ನು ಕಾಣಬಹುದು ಎಂಬ ಭಾವನೆ ನಮಗಿರಬೇಕು.

ಈ ಕಲೆ ಸಾಹಿತ್ಯವನ್ನು ಆಧುನಿಕ ದೃಷ್ಟಿಯಿಂದ ಸಮೀಕ್ಷಿಸಬೇಕೆಂಬುದು ಒಂದು ಜನಪದ ಅನ್ವಯಿಕ ಅಧ್ಯಯನವಾಗಬೇಕಾಗಿದೆ. ಅಂದಿನ ಕಾಲದ ಜನರ ಮನದಂಗಳದ ಸ್ಫೂರ್ತಿ, ಪ್ರೇಮ, ಭಾವನೆಗಳನ್ನು ಮರೆಯಬಾರದೆಂಬುದೇ ಇದರ ಉದ್ದೇಶ. ಮಾನವ ಜೀವನದ ಕಾಲದ ಜ್ಞಾನ ವಿಜ್ಞಾನಗಳೆಲ್ಲ ಅದರಲ್ಲಿ ಅಡಕಗೊಂಡಿವೆ. ಆದಿ ಮಾನವ ಕಾಲದ ಘಟ್ಟದಿಂದ ಎಲ್ಲಾ ಕಾಲದ ಜನರ ನಂಬಿಕೆಗಳು, ಆಶೋತ್ತರಗಳು, ಅದರೊಳಗೆ ಮಿಲನಗೊಂಡಿವೆ ಹಾಗೂ ಸರ್ವಕಾಲಕ್ಕು ಸಾಮಾನ್ಯರ ವೇದಗಳಾಗಿ ವಿಶ್ವಕೋಶವಾಗಿ ನಿಲ್ಲುತ್ತವೆ. ರವೀಂದ್ರನಾಥರು ಒಂದು ಮಾತು ಹೇಳಿದ್ದಾರೆ. ಎಲ್ಲಾ ಕಾವ್ಯಗಳಿಗಿಂತ ಜನಪದ ಕಾವ್ಯಗಳಲ್ಲಿ ಅನೇಕ ಬೇರೆ ಬೇರೆ ಮಟ್ಟುಗಳಿವೆ. ಪೌರಾಣಿಕ ನದಿ ಮಂದಾಕಿನಿಯಂತೆ ಜಾನಪದ ಎಂದಿದ್ದಾರೆ.

**ಆಡಿ ಬಾ ನನಕಂದ ಅಂಗಾಲ ತೊಳಿದೇನು**
**ತೆಂಗಿನಕಾಯಿ ಎಳೆನೀರ-ತಕ್ಕೊಂಡು**
**ಬಂಗಾರ ಮೋರೆ ತೊಳೆದೇನು.**

ಈಗಂತು ಜನಪದ ಹುಟ್ಟುತ್ತಿಲ್ಲ. ಇರುವುದನ್ನೆ ಬರೆದಿಡುವ ಕೋಶವಾಗುತ್ತಿದೆ. ಇದರ ಜೊತೆ ಜೊತೆಗೆ ಹಲವಾರು ಜನಪದ ಕಲೆಯ ಪ್ರಕಾರಗಳು ಉಳಿಯಬೇಕಾದರೆ, ಕಲೆಗಳನ್ನು ನಮ್ಮ ಮೈಗೆ ಒಗ್ಗೂಡಿಕೊಳ್ಳಬೇಕು. ಆ ರೀತಿ ಒಗ್ಗೂಡಿಸಿಕೊಳ್ಳ ಬೇಕಾದರೆ, ನಾವು ದಿನನಿತ್ಯ ಮುಜಗರ ಬಿಟ್ಟು ಹಾಡಿ ಕುಣಿದಾಗ ನಮ್ಮ ಮುಂದಿರುವ ಯುವಕರಿಗೆ ಪ್ರೇರಣೆಯಾಗುತ್ತವೆ. ಅವರು ಕಲಿಯುವ ಸಾಹಸಕ್ಕೆ ಕೈಹಾಕುತ್ತಾರೆ. ಜನಪದವನ್ನು ಬೆಳೆಸುತ್ತಾರೆ. ಇಲ್ಲದೆ ಇದ್ದರೆ ಪುಸ್ತಕದಲ್ಲೆ ಓದಿಕೊಳ್ಳುವ ಕಾಲ ಹೆಚ್ಚು ದಿನಗಳೇನು ಇಲ್ಲ ನೋಡಿ, ಯೋಚಿಸಿ, ಜನಪದ ಪ್ರೀತಿಸಿ. ಹೆಣ್ಣಿನ ಶ್ರೇಷ್ಠತೆ ಮತ್ತು ಜನಪದದಲ್ಲಿ ಮಹಿಳೆಯ ಸ್ಥಾನಮಾನ ಮೂಲ ಬೇರೆ ಹೆಣ್ಣು. ಹೆಣ್ಣಿಗೊಂದು ಮುತ್ತೈದೆ ಗೌರವದ ಸ್ಥಾನವಿದೆ. ಬಂಜೆ ಹೆಣ್ಣಿಗು ಮಕ್ಕಳೆತ್ತ ಮುತ್ತೈದೆಗು ಅಜಗಜಾಂತರ ಸ್ಥಾನ, ಗುಣ ವ್ಯತ್ಯಾಸವಿದೆ. ಇವತ್ತಿನ ಸಾರ್ವತ್ರೀಕರಣ ಸಮಾಜದ ಸಂದರ್ಭದಲ್ಲು ಸಂಪ್ರದಾಯ, ನಾಚಿಕೆ ಇಲ್ಲದಿದ್ದರು ಸ್ಥಾನವಿದ್ದೇ ಇದೆ. ಮತ್ತೊಂದು ಅರ್ಥ ಪ್ರಕೃತಿಯೆ ಮಹಿಳೆ. ಮಹಿಳೆಯೆ ಹಳ್ಳಿಗೆ ಅರಳೋಲೆ. ಹೆಣ್ಣಿನ ಶಕ್ತಿ, ಪ್ರೀತಿ, ಸಂಬಂಧ ವರ್ಣಿಸಲಾಗದ ಬರೆಯಲಾಗದ ಆಕಾಶಗಂಗೆ.

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 27-05-2014ರಲ್ಲಿದ್ದಂತೆ

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2011-12ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2012-13ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2012-13ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ, ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಒಟ್ಟಾರೆ ಶೇಕಡ ವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|
| ಧಾರವಾಡ | 127 | 100 | 60 | 0 | 96 | 98 | 3 | 59 | 1 |
| ಉತ್ತರ ಕನ್ನಡ | 208 | 100 | 0 | 47 | 61 | 97 | 21 | 54 | 2 |
| ಹಾವೇರಿ | 208 | 100 | 56 | 0 | 67 | 87 | 8 | 53 | 3 |
| ದಕ್ಷಿಣ ಕನ್ನಡ | 203 | 100 | 0 | 57 | 44 | 90 | 14 | 50 | 4 |
| ರಾಮನಗರ | 130 | 100 | 0 | 0 | 92 | 96 | 11 | 49 | 5 |
| ಮಂಡ್ಯ | 232 | 100 | 0 | 0 | 79 | 97 | 23 | 49 | 6 |
| ಬಾಗಲಕೋಟೆ | 163 | 100 | 1 | 4 | 73 | 96 | 18 | 48 | 7 |
| ಗದಗ | 106 | 100 | 0 | 0 | 91 | 93 | 9 | 48 | 8 |
| ದಾವಣಗೆರೆ | 230 | 100 | 0 | 2 | 91 | 97 | 1 | 48 | 9 |
| ಉಡುಪಿ | 146 | 100 | 0 | 40 | 52 | 80 | 8 | 46 | 10 |
| ಬೆಂಗಳೂರು (ಗ್ರಾ) | 98 | 100 | 97 | 0 | 18 | 50 | 6 | 45 | 11 |
| ಚಿಕ್ಕಬಳ್ಳಾಪುರ | 151 | 100 | 0 | 1 | 62 | 90 | 17 | 45 | 12 |
| ಚಿಕ್ಕಮಗಳೂರು | 226 | 100 | 72 | 19 | 13 | 65 | 4 | 45 | 13 |
| ಹಾಸನ | 258 | 100 | 55 | 3 | 23 | 78 | 7 | 44 | 14 |
| ಮೈಸೂರು | 235 | 100 | 0 | 1 | 70 | 82 | 11 | 44 | 15 |
| ಗುಲ್ಬರ್ಗಾ | 220 | 100 | 14 | 0 | 76 | 58 | 13 | 43 | 16 |
| ಚಿತ್ರದುರ್ಗ | 185 | 100 | 23 | 0 | 50 | 74 | 10 | 42 | 17 |
| ಶಿವಮೊಗ್ಗ | 260 | 100 | 0 | 6 | 45 | 91 | 8 | 41 | 18 |
| ಚಾಮರಾಜನಗರ | 120 | 100 | 0 | 0 | 30 | 87 | 12 | 38 | 19 |
| ಕೊಡಗು | 98 | 100 | 0 | 23 | 6 | 85 | 12 | 37 | 20 |
| ಬಿಜಾಪುರ | 199 | 99 | 5 | 1 | 29 | 63 | 15 | 35 | 21 |
| ಕೊಪ್ಪಳ | 134 | 100 | 7 | 2 | 20 | 73 | 2 | 34 | 22 |
| ಬಳ್ಳಾರಿ | 189 | 100 | 0 | 1 | 24 | 64 | 17 | 34 | 23 |
| ತುಮಕೂರು | 321 | 100 | 32 | 0 | 19 | 48 | 7 | 34 | 24 |
| ಬೆಂಗಳೂರು (ನ) | 86 | 100 | 0 | 4 | 23 | 58 | 11 | 32 | 25 |
| ಕೋಲಾರ | 156 | 99 | 0 | 0 | 19 | 71 | 3 | 32 | 26 |
| ಬೆಳಗಾವಿ | 486 | 99 | 12 | 0 | 14 | 60 | 6 | 31 | 27 |
| ಬೀದರ | 175 | 100 | 0 | 0 | 7 | 42 | 16 | 27 | 28 |
| ಯಾದಗಿರಿ | 117 | 100 | 0 | 0 | 0 | 38 | 0 | 23 | 29 |
| ರಾಯಚೂರು | 165 | 93 | 0 | 0 | 1 | 17 | 1 | 18 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಮೇ 2014)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) A | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ B | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) C | ವಿಳಂಬ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ D | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು E | ಒಂದು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ F | ಅಂತಿಮವಾಗಿ ಪಡೆದ ಶ್ರೇಣಿ [(ಆ)ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (ಈ)ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] G |
|---|---|---|---|---|---|---|---|
| ದಾವಣಗೆರೆ | 3989 | 3922 | 0.3 | 3 | 209 | 3 | 1 |
| ಬಾಗಲಕೋಟೆ | 5017 | 5834 | 0.8 | 1 | 278 | 2 | 2 |
| ಹಾವೇರಿ | 4876 | 4530 | 1.2 | 10 | 325 | 1 | 3 |
| ರಾಮನಗರ | 2084 | 2451 | 0.4 | 4 | 208 | 4 | 4 |
| ಚಿಕ್ಕಬಳ್ಳಾಪುರ | 1814 | 1839 | 0.2 | 2 | 151 | 5 | 5 |
| ಉತ್ತರ ಕನ್ನಡ | 1472 | 1592 | 0 | 1 | 105 | 8 | 6 |
| ಮಂಡ್ಯ | 2310 | 2207 | 0.6 | 5 | 128 | 7 | 7 |
| ಮೈಸೂರು | 3054 | 2992 | 1.1 | 9 | 105 | 8 | 8 |
| ಚಿತ್ರದುರ್ಗ | 2332 | 2206 | 6.7 | 21 | 145 | 6 | 9 |
| ಉಡುಪಿ | 734 | 593 | 1.9 | 11 | 66 | 12 | 10 |
| ಶಿವಮೊಗ್ಗ | 907 | 814 | 0.7 | 6 | 53 | 15 | 11 |
| ತುಮಕೂರು | 1767 | 1713 | 5.1 | 17 | 67 | 11 | 12 |
| ಬೆಳಗಾವಿ | 4040 | 4325 | 5.8 | 20 | 85 | 10 | 13 |
| ಹಾಸನ | 1039 | 908 | 2.8 | 13 | 61 | 14 | 14 |
| ಚಾಮರಾಜನಗರ | 399 | 329 | 3 | 15 | 39 | 16 | 15 |
| ದಕ್ಷಿಣ ಕನ್ನಡ | 656 | 655 | 2.9 | 14 | 32 | 17 | 16 |
| ಬೆಂಗಳೂರು ಗ್ರಾಮಾಂತರ | 596 | 618 | 15.7 | 26 | 66 | 12 | 17 |
| ಕೊಡುಗು | 109 | 111 | 0.9 | 8 | 21 | 22 | 18 |
| ಗದಗ | 251 | 351 | 4.6 | 16 | 25 | 20 | 19 |
| ಕೊಪ್ಪಳ | 385 | 470 | 7 | 22 | 29 | 18 | 20 |
| ಚಿಕ್ಕಮಗಳೂರು | 319 | 377 | 7.7 | 23 | 29 | 18 | 21 |
| ಬೆಂಗಳೂರು | 933 | 582 | 2.4 | 12 | 9 | 26 | 22 |
| ಕೋಲಾರ | 255 | 207 | 7.7 | 23 | 17 | 23 | 23 |
| ಗುಲ್ಬರ್ಗಾ | 598 | 622 | 19.9 | 28 | 23 | 21 | 24 |
| ಧಾರವಾಡ | 113 | 154 | 5.2 | 18 | 6 | 27 | 25 |
| ಬಿಜಾಪುರ | 321 | 577 | 18.9 | 27 | 15 | 24 | 26 |
| ಬಳ್ಳಾರಿ | 266 | 248 | 12.5 | 25 | 10 | 25 | 27 |
| ಬೀದರ್ | 85 | 71 | 5.6 | 19 | 5 | 28 | 28 |
| ಯಾದಗಿರಿ | 27 | 40 | 37.5 | 30 | 2 | 29 | 29 |
| ರಾಯಚೂರು | 5 | 24 | 20.8 | 29 | 0 | 30 | 30 |

ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ 07 ಗ್ರಾನೀಸ (4) 2014.

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ, ಬೆಂಗಳೂರು,
ದಿನಾಂಕ: ದಿನಾಂಕ: 28-04-2014.

# ಸುತ್ತೋಲೆ

**ವಿಷಯ:** ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಮತ್ತು ನೈರ್ಮಲ್ಯ ಕಾಪಾಡಲು ಕೈಗೊಳ್ಳ ಬೇಕಾಗಿರುವ ಕ್ರಮಗಳ ಕುರಿತು.

**ಉಲ್ಲೇಖ:**
1. ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ/15/ಗ್ರಾನೀಸ (3) / 2009, ದಿ : 23-03-2009.
2. ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ/67/ಗ್ರಾನೀಸ (4) / 2010, ದಿ : 6/8-10-2010.
3. ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ/67/ಗ್ರಾನೀಸ (4)/2010, ದಿ : 05-02-2011.
4. ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ/79/ಗ್ರಾನೀಸ (4)/2013, ದಿ : 22-04-2013.
5. ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ/07/ಗ್ರಾನೀಸ (4) 2014, ದಿ : 07-01-2014.
6. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಟಿಪ್ಪಣಿ ಸಂಖ್ಯೆ : ಗ್ರಾಪಂರಾಸ/ಟಿ/2014-15/250, ದಿ : 25-04-2014.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಉಲ್ಲೇಖ (6)ರ ಟಿಪ್ಪಣಿಗೆ ಅನುಗುಣವಾಗಿ ತುರ್ತು ಸಮಯದಲ್ಲಿ ಸಾಮಾನ್ಯ ಜನರ ಆಶೋತ್ತರಗಳಿಗೆ ಸಕಾರತ್ಮಕವಾಗಿ ಸ್ಪಂದಿಸಲು ಅನುವಾಗುವಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

✦ ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆಗಾಗಿ ಒಂದು ನಿಯಂತ್ರಣ ಕೊಠಡಿ ಮತ್ತು ಟೋಲ್ ಫ್ರೀ ಸಹಾಯವಾಣಿ ಸಂಖ್ಯೆ : 18004258666ಕ್ಕೆ ಪೂರಕವಾಗಿ ಪ್ರತಿನಿತ್ಯ 12 ಗಂಟೆಗಳ ಕಾಲ ಕಾರ್ಯನಿರ್ವಹಿಸುವ ವ್ಯವಸ್ಥೆಯನ್ನು ಮಾಡುವುದು, ಸದರಿ ವ್ಯವಸ್ಥೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಜವಾಬ್ದಾರಿಯುತ ನೋಡಲ್ ಅಧಿಕಾರಿಯನ್ನು ನೇಮಿಸುವುದು.

✦ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸುವುದು. ಇವರು ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸ್ಥಳೀಯ ಗ್ರಾಮಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಸಮನ್ವಯದಲ್ಲಿ ಕುಡಿಯುವ ನೀರಿನ ಸಮಸ್ಯೆಯ ಕುರಿತು ಸ್ವೀಕರಿಸಿದ ದೂರು/ ಮಾಹಿತಿಗಳ ಮೇಲೆ ಕ್ರಮವಹಿಸಿ, ಅದೇ ದಿನ ಸಾಯಂಕಾಲ ಮುಖ್ಯ ಕಾರ್ಯನಿರ್ವಾಹಕ ಅಧೀಕಾರಿಯವರಿಗೆ ಲಿಖಿತ ಅನುಪಾಲನಾ ವರದಿ ಸಲ್ಲಿಸಬೇಕು.

✦ ಜಿಲ್ಲೆಯ ಎಲ್ಲಾ ಕುಡಿಯುವ ನೀರಿನ ಸಮಸ್ಯೆಗಳ ದೂರು/ಮಾಹಿತಿ/ಅಹವಾಲುಗಳ ಮೇಲೆ ಕ್ರಮ ಕೈಗೊಂಡ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಪ್ರತಿ ಶುಕ್ರವಾರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಗೆ ವರದಿ ಸಲ್ಲಿಸಬೇಕು.

✦ ಕುಡಿಯುವ ನೀರಿನ ಕುರಿತಾದ ಯಾವುದೇ ಸಮಸ್ಯೆಗಳನ್ನು 8 ಘಂಟೆಗಳ ಕಾಲಾವಧಿಯಲ್ಲಿ ಕೇಂದ್ರೀಕೃತ ಪ್ರಯತ್ನದೊಂದಿಗೆ (Focussed Effort) ಪರಿಹರಿಸಲೇಬೇಕು.

✦ ಒಂದು ವೇಳೆ ಸಮಸ್ಯೆಗೆ ಶೀಘ್ರ ಪರಿಹಾರ ದೊರೆಯದೇ ವಿಳಂಬವಾದಲ್ಲಿ ಅಥವಾ ಕಷ್ಟಸಾಧ್ಯ ಎಂದು ಕಂಡು ಬಂದಲ್ಲಿ ಕೂಡಲೇ ಟ್ಯಾಂಕರ್ ಮೂಲಕ ಕುಡಿಯುವ ನೀರಿನ ಪೂರೈಕೆಗಾಗಿ ಜಿಲ್ಲಾಧಿಕಾರಿಗಳ ಸಮನ್ವಯದಲ್ಲಿ ಕ್ರಮ ಜರುಗಿಸುವುದು.

✦ ನೋಡಲ್ ಅಧಿಕಾರಿ ಅಥವಾ ನಿಯಂತ್ರಣ ಕೊಠಡಿಯಲ್ಲಿ ದೂರು ಸ್ವೀಕೃತವಾದ 2 ತಾಸುಗಳೊಳಗೆ ಪರಿಶೀಲಿಸಿ ಪರಿಹಾರ ಕ್ರಮ ನಿರ್ಧರಿಸಿ ತಕ್ಷಣ ಕ್ರಮ ವಹಿಸಬೇಕು.

✦ ಕುಡಿಯುವ ನೀರು ಯಾವುದೇ ಗ್ರಾಮ/ಸ್ಥಳದಿಂದ 2 ಕಿ.ಮೀ. ವ್ಯಾಪ್ತಿಯಲ್ಲಿ ಲಭ್ಯವಿಲ್ಲದಿದ್ದರೆ, ದೂರು/ಮಾಹಿತಿ ಮುಂಜಾನೆ 11 ಘಂಟೆಯೊಳಗಾಗಿ ಸ್ವೀಕರಿಸಿದಲ್ಲಿ ಅಂದೇ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಕೆ ವ್ಯವಸ್ಥೆ ಮಾಡಬೇಕು.

✦ ತೀವ್ರ ಕುಡಿಯುವ ನೀರಿನ ಸಮಸ್ಯೆಯಿರುವ ಗ್ರಾಮ/ಜನವಸತಿಗಳಿಗೆ ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಕೂಡಲೇ ಟ್ಯಾಂಕರ್ ಮುಖೇನ ಶುದ್ಧ ಕುಡಿಯುವ ನೀರಿನ ಪೂರೈಕೆ ಮಾಡಲು ಕ್ರಮ ವಹಿಸತಕ್ಕದ್ದು. ಈ ಸಂಬಂಧ, ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಉಸ್ತುವಾರಿ ನಿರ್ವಹಿಸತಕ್ಕದ್ದು. ನಂತರ ಈ ಸಂಬಂಧದ ವೆಚ್ಚಗಳನ್ನು ಜಿಲ್ಲಾಧಿಕಾರಿಗಳಿಂದ ಹಿಂಪಡೆಯಲು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು. ಯಾವುದೇ ಕಾರಣಕ್ಕೂ ಕುಡಿಯುವ ನೀರಿನ ವ್ಯವಸ್ಥೆಗೆ ತೊಂದರೆಯಾಗದಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ವಹಿಸತಕ್ಕದ್ದು.

✦ ಟ್ಯಾಂಕರ್ ಮೂಲಕ ಕುಡಿಯುವ ನೀರಿನ ಸರಬರಾಜಿನಲ್ಲಿ ದೂರುಗಳಿಗೆ ಆಸ್ಪದವಾಗದಂತೆ ಎಚ್ಚರಿಕೆ ವಹಿಸಬೇಕು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಗ್ರಾಮ ಲೆಕ್ಕಿಗರು ಮತ್ತು ಗ್ರಾಮ ಮಟ್ಟದ ನೀರು ಮತ್ತು ನೈರ್ಮಲ್ಯ ಸಮಿತಿಯ ಅಧ್ಯಕ್ಷರು/ಸದಸ್ಯರಿಂದ ಧೃಡೀಕರಣ ಪಡೆದು ಟ್ಯಾಂಕರ್‌ಗಳ ಬಿಲ್ ಪಾವತಿ ಮಾಡಲು ಕ್ರಮ ವಹಿಸಬೇಕು. ಟ್ಯಾಂಕರ್ ಮೂಲಕ ಸರಬರಾಜು ಮಾಡುವ ನೀರು ಕುಡಿಯಲು ಯೋಗ್ಯವಾಗಿರುವುದನ್ನು ಖಾತ್ರಿ ಪಡಿಸಿಕೊಳ್ಳಬೇಕು.

✦ ಮಾಸಿಕ ದರ ನೀಡಿ ಖಾಸಗಿ ಬೋರ್‌ವೆಲ್‌ನಿಂದ ನೀರು ಪಡೆಯಲು CEO/ZP ಸ್ಥಳೀಯವಾಗಿ ನಿರ್ಧರಿಸಬಹುದು ಅಥವಾ ಜಿಲ್ಲಾಧಿಕಾರಿಗಳು ನಿಗಧಿಪಡಿಸುವ ದರದಂತೆ ದರ ನಿಗದಿಪಡಿಸಬಹುದು.

✦ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿರುವ ಪ್ರಕರಣಗಳಲ್ಲಿ ESCOM ಗಳ ಸಹಯೋಗದಲ್ಲಿ ತಕ್ಷಣ ಕುಡಿಯುವ ನೀರಿನ ಯೋಜನೆಗಳನ್ನು ವಿದ್ಯುದ್ಧೀಕರಣಗೊಳಿಸತಕ್ಕದ್ದು.

**ಮಾಹಿತಿ / ದೂರುಗಳು :**

✦ ಯಾವುದೇ ಚುನಾಯಿತ ಪ್ರತಿನಿಧಿಗಳು, ಸಚಿವರುಗಳು, ನೀರು ಮತ್ತು ನೈರ್ಮಲ್ಯ ಸಮಿತಿ ಹಾಗೂ ಸಾಮಾನ್ಯ ಜನರು ಯಾವುದೇ ರೂಪದಲ್ಲಿ ನೀಡುವ ಕುಡಿಯುವ ನೀರಿನ ಸಮಸ್ಯೆಗಳ ವಿಚಾರದಲ್ಲಿ ತಕ್ಷಣವೇ ಪರಿಹಾರ ಕ್ರಮ ಕೈಗೊಳ್ಳುವುದು.

✦ ಸಾರ್ವಜನಿಕರು ದೂರವಾಣಿ/ಸಹಾಯವಾಣಿ/ಲಿಖಿತ/ ಮೌಖಿಕವಾಗಿ ನೀಡುವ ದೂರನ್ನು ಗ್ರಾಮ ಪಂಚಾಯತಿ ಅಧ್ಯಕ್ಷರು / ಪಂಚಾಯತ್ ಅಭಿವೃದ್ಧಿ ಅಧಿಕಾರಿ ಜೊತೆ ಚರ್ಚಿಸಿ ಅಗತ್ಯತೆಯನ್ನು ಮನವರಿಕೆ ಮಾಡಿಕೊಂಡು ಮುಂದಿನ ಜರೂರು ಕ್ರಮ ಕೈಗೊಳ್ಳತಕ್ಕದ್ದು.

✦ ಯಾವುದೇ ಮಾಧ್ಯಮದಲ್ಲಿ (Electronic Media & Print Media) ಕುಡಿಯುವ ನೀರಿನ ಸಮಸ್ಯೆಯ ಕುರಿತಾದ ಸುದ್ದಿಗಳನ್ನು ಗಮನಿಸಿ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಬೇಕು.

✦ ರಾಜ್ಯ ಮಟ್ಟದಲ್ಲಿ ಮಾನಿಟರ್ ಮಾಡುವುದಕ್ಕೆ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದ್ದು ಅವರ ಹೆಸರು ಮತ್ತು ದೂರವಾಣಿಯ ಸಂಖ್ಯೆಯು ಈ ಕೆಳಕಂಡಂತಿದೆ.

**ಹೆಸರು : ಶ್ರೀ ರಾಮಕೃಷ್ಣ ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ), ಗ್ರಾಅಪಂ.ರಾಜ್ ಇಲಾಖೆ ದೂರವಾಣಿ ಸಂಖ್ಯೆ : 22032806, ಮೊಬೈಲ್ ಸಂಖ್ಯೆ : 9845904870, ಫ್ಯಾಕ್ಸ್ ಸಂಖ್ಯೆ : 22203175, ಇ–ಮೇಲ್ : rk3452000@gmail.com.**

## ಕಾರ್ಯಯೋಜನೆ :

✦ ವಾರಕೊಮ್ಮೆ ಜಿಲ್ಲೆಯ ಕುಡಿಯುವ ನೀರಿನ ದೂರುಗಳು ಹಾಗೂ ಪರಿಹಾರಕ್ಕಾಗಿ ತೆಗೆದುಕೊಂಡ ಕ್ರಮಗಳ ವಿವರಗಳನ್ನು ಜಿಲ್ಲೆಯ ಉಸ್ತುವಾರಿ ಸಚಿವರಿಗೆ ಸಲ್ಲಿಸಿ, ಸಾರ್ವಜನಿಕರ ಗಮನಕ್ಕೆ ಬರುವಂತೆ ಪ್ರಚಾರಪಡಿಸುವುದು.

✦ ಸರ್ಕಾರದ ಇಲಾಖೆಗಳಾದ ಜಲ ಸಂಪನ್ಮೂಲ ಇಲಾಖೆ/ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ / ಪೌರಾಡಳಿತ ಇಲಾಖೆ / ವಿದ್ಯುತ್ ಇಲಾಖೆ ಹಾಗೂ ಇತರೆ ಸಂಬಂಧಿಸಿದ ಇಲಾಖೆಗಳ ಜಿಲ್ಲಾ ಮಟ್ಟದ ಸಭೆ ಏರ್ಪಡಿಸಿ ದೂರುಗಳು ಹಾಗೂ ಪರಿಹಾರಗಳ ಬಗ್ಗೆ ಚರ್ಚಿಸಿ ಸೂಕ್ತ ಸಮಯದಲ್ಲಿ ಉಪಯುಕ್ತತಾ ನಿರ್ಧಾರಗಳನ್ನು ಕೈಗೊಳ್ಳುವುದು.

ಮೇಲ್ಕಂಡ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜನಪ್ರತಿನಿಧಿಗಳಾದ ಶಾಸಕರು/ಜಿಲ್ಲಾ ಪಂಚಾಯತ್ ಸದಸ್ಯರು/ತಾಲ್ಲೂಕ್ ಪಂಚಾಯತ್ ಸದಸ್ಯರು/ಹಿರಿಯ ಅಧಿಕಾರಿಗಳು / ಕುಡಿಯುವ ನೀರಿನ ಬಳಕೆದಾರರು ಹಾಗೂ ಗ್ರಾಮಮಟ್ಟದ ನೀರು ನೈರ್ಮಲ್ಯ ಸಮಿತಿಯವರು **ಪ್ರತಿವಾರ ಸಭೆ ನಡೆಸಿ, ಕುಡಿಯುವ ನೀರು ಪೂರೈಕೆ ಮತ್ತು ನೈರ್ಮಲ್ಯ ಸಂಬಂಧ ವಸ್ತುಸ್ಥಿತಿ ಅವಲೋಕಿಸಿ, ಸ್ಥಳೀಯ ಅಗತ್ಯತೆಯನ್ವಯ ಸೂಕ್ತ ಕ್ರಮ ಕೈಗೊಳ್ಳಬೇಕು ಮತ್ತು ಕೈಗೊಂಡ ಕ್ರಮಗಳ ಕುರಿತು ಪ್ರತಿ ಶುಕ್ರವಾರ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಇ–ಮೇಲ್ ಮುಖೇನ ಕಳುಹಿಸಬೇಕು.**

**(ಟಿ.ಎಂ. ವಿಜಯ ಭಾಸ್ಕರ್)**

ಸಕಾರದ ಅಪರ ಮುಖ್ಯ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 180 ಗ್ರಾಪಂಅ. 2014

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:07.03.2014

# ಸುತ್ತೋಲೆ

**ವಿಷಯ:** ಸ್ವಾಸ್ಥ ಭೀಮಾ ಯೋಜನೆಗಳ Field Key Officers ಆಗಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ನಿಯೋಜಿಸುವ ಬಗ್ಗೆ.

**ಉಲ್ಲೇಖ:** ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಕ್ಷಿಣ ಕನ್ನಡ ರವರ ಅ.ಸ. ಪತ್ರ ಸಂಖ್ಯೆ : ಅಸಪ/ಮುಕಾನಿಅ/10–2012–13 ದಿನಾಂಕ : 16–01–2014.

ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ರವರು ಸ್ವಾಸ್ಥ ಭೀಮಾ ಯೋಜನೆಯ Field Key Officers ಆಗಿ ಜಿಲ್ಲೆಯ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ನಿಯೋಜಿಸಿರುವುದರಿಂದ ಗ್ರಾಮ ಪಂಚಾಯತ್ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಗುರಿ ಸಾಧಿಸುವಲ್ಲಿ ಹಾಗೂ ವರ್ಷಾಂತ್ಯದಲ್ಲಿ ಎಲ್ಲಾ ಗ್ರಾಮ ಪಂಚಾಯತಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ಒತ್ತಡಗಳು ಇರುವುದು ಮಾತ್ರವಲ್ಲದೆ ತೆರಿಗೆ ಸಂಗ್ರಹಣೆ ಬಗ್ಗೆಯೂ ಗುರಿ ಸಾಧಿಸುವ ಹಾಗೂ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ವಹಿಸಿರುವ GSBY ಯೋಜನೆಯ Field Key Officers ಜವಾಬ್ದಾರಿಯಿಂದ ಅವರನ್ನು ವಿಮುಕ್ತಿಗೊಳಿಸಲು ಹಾಗೂ ಈ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಗ್ರಾಮ ಪಂಚಾಯತ್‌ಗಳಿಗೆ ಸೂಚನೆ ನೀಡಲಾಗಿದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ ರವರು ಉಲ್ಲೇಖಿತ ಅರೆ ಸರ್ಕಾರಿ ಪತ್ರದಲ್ಲಿ ತಿಳಿಸಿರುತ್ತಾರೆ.

ಆದುದರಿಂದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಗ್ರಾಮೀಣಾ ಸ್ವಾಸ್ಥ ಭೀಮಾ ಯೋಜನೆಯ Field Key Officers ಆಗಿ ನಿಯೋಜಿಸುವ ಮುನ್ನ ಸಂಬಂದಪಟ್ಟ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತರದೆ ಈ ರೀತಿ ಕೆಲಸಗಳನ್ನು ವಹಿಸಬಾರದೆಂದು ಸೂಚಿಸಿದೆ.

(ಟಿ.ಎಂ.ವಿಜಯಭಾಸ್ಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬಹುಮಹಡಿಗಳ ಕಟ್ಟಡ, ಬೆಂಗಳೂರು,

# ಸುತ್ತೋಲೆ

**ವಿಷಯ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೂಲಿ ಕಾರ್ಮಿಕರಿಗೆ ಕೂಲಿ ವೇತನ ಪಾವತಿ ವಿಳಂಬವಾದಲ್ಲಿ ಪರಿಹಾರ ನೀಡುವ ಕುರಿತು.

**ಓದಲಾಗಿದೆ :**

1. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ 2005.
2. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಾಚರಣೆ ಮಾರ್ಗಸೂಚಿಗಳು 2013, 4ನೇ ಆವೃತ್ತಿ.
3. ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ, ಅಧಿಸೂಚನೆ ದಿನಾಂಕ:03–01–2014 (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ 2005ರ ಅನುಸೂಚಿ I ಮತ್ತು IIಕ್ಕೆ ತಿದ್ದುಪಡಿ).

## ಪ್ರಸ್ತಾವನೆ:

1. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ 2005 (ಕಾಯ್ದೆ ಸಂಖ್ಯೆ: 42) ರನ್ವಯ, ಅಕುಶಲ ದೈಹಿಕ ಕೆಲಸ ಮಾಡಲು ಇಚ್ಛಿಸುವ ಗ್ರಾಮೀಣ ಪ್ರದೇಶಗಳಲ್ಲಿನ ವಯಸ್ಕ ಸದಸ್ಯರನ್ನು ಹೊಂದಿದ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಗರಿಷ್ಠ 100 ದಿನಗಳಿಗೆ ಮೀರದಂತೆ ಕೂಲಿ ಉದ್ಯೋಗವನ್ನು ಒದಗಿಸುವುದು ಕಡ್ಡಾಯವಾಗಿರುವುದರಿಂದಲೂ;
2. ಕಾಯ್ದೆಯ ಪ್ರಕರಣ 3ರ ಉಪ ಪ್ರಕರಣ(3)ರ ಪ್ರಕಾರ, ಕೂಲಿ ಕಾರ್ಮಿಕರಿಗೆ ಕೂಲಿ ವೇತನವನ್ನು ಪ್ರತಿ ವಾರ ಅಥವಾ ಯಾವುದೇ ಸಂದರ್ಭದಲ್ಲಿ, ಕೆಲಸ ಮಾಡಿದ ದಿನದಿಂದ 15 ದಿನಗಳಿಗಿಂತ ವಿಳಂಬವಾಗದಂತೆ ಪಾವತಿಸಬೇಕಾಗಿರುವುದರಿಂದಲೂ;
3. ಉಲ್ಲೇಖ (3)ರ ಅಧಿಸೂಚನೆಯ ಅನುಸೂಚಿ II (ಕಾಯ್ದೆಯ 29ನೇ ಕ್ಲಾಸ್) ರಲ್ಲಿ ಕಡ್ಡಾಯಗೊಳಿಸಿರುವ ಪ್ರಕಾರ, ಇ–ಎನ್.ಎಂ.ಆರ್. ಅಂತಿಮಗೊಳಿಸಿದ 15ನೇ ದಿನದೊಳಗೆ ಕೂಲಿ ವೇತನ ಪಾವತಿಸುವುದು, ಇಲ್ಲದಿದ್ದಲ್ಲಿ 15ನೇ ದಿನದ ನಂತರ ವಿಳಂಬವಾದ ಪ್ರತಿ ದಿನ ಕೂಲಿ ಕಾರ್ಮಿಕರಿಗೆ ಪಾವತಿಸಬೇಕಾದ ವೇತನದ ಶೇ.0.05ರಷ್ಟರ ಧರದಲ್ಲಿ ವಿಳಂಬ ಪರಿಹಾರ ಪಾವತಿಸಬೇಗಿರುವುದರಿಂದಲೂ;
4. ಉಲ್ಲೇಖ (3)ರ ಅಧಿಸೂಚನೆಯ ಅನುಸೂಚಿ II (ಕಾಯ್ದೆಯ 29ನೇ ಕ್ಲಾಸ್) ರಲ್ಲಿ ಕಡ್ಡಾಯಗೊಳಿಸಿರುವ ಪ್ರಕಾರ, ವಿಳಂಬ ಪಾವತಿಗೆ (15 ದಿನಗಳಿಗೆ ಮೀರಿದ) ಕಾರಣರಾದ ಅನುಷ್ಠಾನ ಇಲಾಖೆ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಜವಾಬ್ದಾರರಾಗಿರುವುದರಿಂದಲೂ;

5. ಇ–ಎನ್.ಎಂ.ಆರ್. ಅಂತಿಮಗೊಳಿಸಿದ ದಿನದಿಂದ ಉದ್ಯೋಗ ಚೀಟಿದಾರರ (ಕೂಲಿಕಾರ್ಮಿಕ) ಖಾತೆಗೆ ವೇತನ ಪಾವತಿಯಾಗುವವರೆಗಿನ ಕಾರ್ಯಾನುಷ್ಠಾನ ಪ್ರಕ್ರಿಯೆ ಹಂತಗಳನ್ನು ಗುರುತಿಸಿ, ಪ್ರತಿ ಕಾರ್ಯಾನುಷ್ಠಾನ ಪ್ರಕ್ರಿಯೆ ಹಂತಕ್ಕೆ ಸಮಯ ಮಿತಿ ನಿಗಧಿಪಡಿಸಿ ಮತ್ತು ಪ್ರತಿಯೊಂದು ಕಾರ್ಯಾನುಷ್ಠಾನ ಪ್ರಕ್ರಿಯೆ ಹಂತಕ್ಕಾಗಿ ಸರ್ಕಾರಿ ನೌಕರ/ಸಿಬ್ಬಂದಿ/ಪ್ರಾಧಿಕಾರಕ್ಕೆ ಜವಾಬ್ದಾರಿಯನ್ನು ನಿಗದಿ ಪಡಿಸಬೇಕಾಗಿರುವುದರಿಂದಲೂ;

6. ಇ–ಎನ್.ಎಂ.ಆರ್. ಅಂತಿಮಗೊಳಿಸಿದ 15 ದಿನಗಳೊಳಗೆ ಕೂಲಿ ವೇತನ ಪಾವತಿಗೆ ವಿಳಂಬವಾದಲ್ಲಿ, ಈ ವಿಳಂಬಕ್ಕೆ ಜವಾಬ್ದಾರರಾದ ವ್ಯಕ್ತಿಗಳು/ಪ್ರಾಧಿಕಾರವನ್ನು ಗುರುತಿಸುವುದು ಹಾಗೂ ಈ ಆದೇಶದನ್ವಯ ಉದ್ಯೋಗ ಚೀಟಿದಾರರಿಗೆ ಪರಿಹಾರ ಸಂದಾಯ ಮಾಡಿದ್ದನ್ನು ಅವನು/ಅವಳು ವಿಳಂಬಕ್ಕೆ ಕಾರಣರಾಗುವಷ್ಟು ದಿನಗಳ ಅನುಪಾತದಲ್ಲಿ ಅವರಿಂದ ಮರು ತುಂಬಲು ಹೊಣೆಗಾರರಾಗಿಸಬೇಕಾಗಿರುವುದರಿಂದಲೂ;

7. ಈ ಆದೇಶದ ಪ್ರಕಾರ ವಿಳಂಬ ಪರಿಹಾರ ಪಾವತಿಯನ್ನು ನಿಗಧಿಪಡಿಸಿದ ದಿನದಿಂದ 15 ದಿನಗಳೊಳಗೆ ಪಾವತಿಸುವುದು, ಇಲ್ಲದಿದ್ದಲ್ಲಿ ಇದು ಪಾವತಿಗೆ ಬಾಕಿಯಾಗುತ್ತದೆ. ಇದು ತನ್ನಿಂದತಾನೇ ಲೆಕ್ಕಹಾಕಿಕೊಳ್ಳುತ್ತದೆ ಮತ್ತು ವಿಳಂಬಕ್ಕೆ ಜವಾಬ್ದಾರರಾದವರಿಂದ ಇದನ್ನು ಮರು ಪಾವತಿ ಮಾಡಿಸಿಕೊಳ್ಳಬೇಕಾಗಿರುವುದರಿಂದಲೂ;

8. ಕರ್ನಾಟಕದಲ್ಲಿ ಈಗಾಗಲೇ ಕೂಲಿ ಮತ್ತು ಸಾಮಗ್ರಿ ಮೊತ್ತದ ಪಾವತಿಗಳನ್ನು ವಿದ್ಯುನ್ಮಾನದ ಮೂಲಕ ನೇರವಾಗಿ ಕೂಲಿಕಾರರ/ಉದ್ಯೋಗ ಚೀಟಿ ಹೊಂದಿದವರ ಖಾತೆಗಳಿಗೆ ಪಾವತಿಸುವ ಇ–ಎಫ್.ಎಂ.ಎಸ್. ತಂತ್ರಾಂಶ ಜಾರಿಯಲ್ಲಿದ್ದು, ಅದರನ್ವಯ ಯಾವಾಗ ಇ–ಎನ್.ಎಂ.ಆರ್.ಗಳು ಕೂಲಿ ಪಾವತಿಗೆ ಬಾಕಿಯಾಗುವವು ಹಾಗೂ ವಾಸ್ತವವಾಗಿ ಕೂಲಿಕಾರ್ಮಿಕರ ಖಾತೆಗಳಿಗೆ ಯಾವಾಗ ಕೂಲಿ ಜಮೆಯಾಗಿದೆ ಎಂಬುವ ವಿವರಗಳು ತಂತ್ರಾಂಶದಲ್ಲಿ ಲಭ್ಯವಿರುವುದರಿಂದಲೂ;

**ಆದ್ದರಿಂದ ಕೆಳಕಂಡ ಆದೇಶ**

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 264 ಉಖಾಯೋ 2013 ಬೆಂಗಳೂರು, ದಿನಾಂಕ: 06–02–2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಇ–ಎನ್.ಎಂ.ಆರ್. ಅಂತಿಮಗೊಳಿಸಿದ ದಿನದ ನಂತರದ ಯೋಜನೆ ಅಡಿಯ ಕಾರ್ಯಾನುಷ್ಠಾನದ ವಿವಿಧ ಹಂತಗಳು, ವಿವಿಧ ಹಂತದ ಕರ್ತವ್ಯವನ್ನು ನಿರ್ವಹಿಸಬೇಕಾದ ಅಧಿಕಾರಿ/ಸಿಬ್ಬಂದಿಗಳು, ಪ್ರತಿ ಹಂತವನ್ನು ಅಂತಿಮಗೊಳಿಸಲು ನಿಗದಿ ಪಡಿಸಿದ ಕಾಲಾವಧಿ, ಮತ್ತು ಈ ಜವಾಬ್ದಾರಿಗಳನ್ನು ನಿಗದಿ ಪಡಿಸುವ ವಿಧಾನದ ವಿವರಗಳನ್ನು ಈ ಕೆಳಕಾಣಿಸಿದ ಅನುಬಂಧದಲ್ಲಿ ಸ್ಪಷ್ಟಪಡಿಸಿ, ಕೂಡಲೇ ಜಾರಿಗೆ ಬರುವಂತೆ ಆದೇಶ ಹೊರಡಿಸಿದೆ.

| PÀæ ¸À | PÁAiÀÄð£ÀÄµÁ×£ÀzÀ ««zsÀ ºÀAvÀUÀ¼ÀÄ | PÁAiÀÄð£ÀÄµÁ×£ÀzÀ ¥Àæ ºÀAvÀzÀ°è dªÁ¨ÁÝgÀgÁzÀ C¢üPÁj/ ¹§âA¢/¥Á®ÄzÁgÀgÀÄ | PÁAiÀÄð£ÀÄµÁ×£ÀzÀ ¥Àæ ºÀAvÀPÉÌ ¤UÀ¢¥Àr¹zÀ CªÀ¢ü | E-J£ï.JA.Dgï. CAwªÀÄ ºÉƒ¹zÀ ¢£ÁAPÀ¢AzÀ ¥Àæ ºÀAvÀPÉÌ ¤UÀ¢¥Àr¹zÀ ¢£ÀUÀ¼ÀÄ | dªÁ¨ÁÝjAiÀÄ£ÀÄß ¤UÀ¢ü ¥Àr¸À¨ÉÃPÁzÀ«zsÁ£À |
|---|---|---|---|---|---|
| 1 | E-J£ï.JA.Dgï CAwªÀÄUÉƽ¸À¯ÁzÀ, PÉ®¸ÀzÀ C¼ÀvÉ ªÀÄvÀÄÛ C¼ÀvÉ ¥ÀĸÀÛPÀzÀ°è zÁR° ¸À¯ÁzÀÄ | QjAiÀÄ C©üAiÀÄAvÀgÀgÀÄ ±ÁSÁ C¢üPÁj/ vÁAwæPÀ ¸ÀºÁAiÀÄPÀgÀÄ | ªÀÄÆgÀÄ ¢£ÀUÀ¼ÀÄ | ªÀÄÆgÀ£ÉÃ ¢£À | ¸ÀA§AzsÀ¥ÀlÖªÀjUÉ PÁgÀt PÉÃ¼À¨ÉÃPÀÄ ¸ÀzÀåjAiÀÄ ªÀÄvÀÄÛ ¸ÀA§AzsÀ vÀ¥ÀÄà ªÀiÁrzÀªÀgÀ «gÀÄzÀÞ PÀæªÀÄ |
| 2 | PÉ®¸ÀzÀ C¼ÀvÉ | PÉ®¸ÀzÀ C¼ÀvÉ ªÀiÁqÀĪÀ ¥ÁæPÀgÀ | JgÀqÀÄ ¢£À | £Á®Ì£ÉÃ ¢£À | -ªÉÄð£ÀAvÉ- |
| 3 | ©®è vÀAiÀiÁj¹ UÀtPÀ ¥ÀvÀæ/C£ÀÄªÉÆÃzÀ£É ¸À°è¸À¯ÁzÀÄ | QjAiÀÄ C©üAiÀÄAvÀgÀgÀÄ ±ÁSÁ C¢üPÁj/ vÁAwæPÀ ¸ÀºÁAiÀÄPÀgÀÄ | JgÀqÀÄ ¢£À | DgÀ£ÉÃ ¢£À | -ªÉÄð£ÀAvÉ- |
| 4 | PÁªÀÄUÁj ªÀÄvÀÄÛ ©°è£À «ªÀgÀUÀ¼À£ÀÄß vÀAvÁæA±ÀzÀ°è Dgï.EJ£ï.£À°è DgÀA» ¸À¯ÁzÀÄ | UÀtPÀ ¥ÀvÀæ¸ÀºÁAiÀÄ C£ÀÄªÉÆÃzÀ£É ¸À°è¸À¯ÁzÀ qÁmÁ JAnæ D¥ÀgÉÃlgï | JgÀqÀÄ ¢£ÀUÀ¼ÀÄ | DgÀ ªÀÄvÀÄÛ K¼À£ÉÃ ¢£À | -ªÉÄð£ÀAvÉ- |
| 5 | PÀA° ¥ÀnÖ ¸À°è¸À¯ÁzÀ ªÀÄvÀÄÛ ªÉÃvÀ£À ¸ÀAzÁAiÀÄzÀ J¥sïn.N. ¸À ªÀiÁqÀ¯ÁzÀ | UÀtPÀ ¥ÀvÀæ¸ÀºÁAiÀÄ ¥ÀvÀæ¸ÀºÁAiÀÄ C©üªÀÈ¢Þ C¢üPÁj/PÁAiÀÄðzÀ²ð/ ªÉÃvÀ£À ¸ÀAzÁAiÀÄPÀgÀÄ | JgÀqÀÄ ¢£À | JAl£ÉÃ ¢£À | -ªÉÄð£ÀAvÉ- |
| 6 | JgÀqÀ£ÉÃ ¸ÀAzÁAiÀÄzÀ J¥sïn.N. ¸À ªÀiÁqÀ¯ÁzÀ | UÀtPÀ ¥ÀvÀæ¸ÀºÁAiÀÄ CzsÀåPÀë ¥ÁæPÀgÀ/JgÀqÀ£ÉÃ ¸ÀAzÁAiÀÄ | JgÀqÀÄ ¢£ÀUÀ¼ÀÄ | MA§vÀÄÛ ªÀÄvÀÄÛ ºÀvÀÛ£ÉÃ ¢£À | -ªÉÄð£ÀAvÉ- |
| 7 | J£ï.L.¹. £ÀªÀzÉºÀ° gÀªÀgÀzÀ J¥sïn.N. ¸À«ÄÃPÀëUÉ | J£ï.L.¹. £ÀªÀzÉºÀ° | JgÀqÀÄ ¢£À | ºÀ¢£ÉÊzÀ£ÉÃ ¢£À | -ªÉÄð£ÀAvÉ- |
| 8 | ¨ÁåAPï/CAZÉ PÀbÉÃj/ºÀtPÁ¸ÀÄ ¸ÀA¸ÉÜ ªÀÄ¬ÄAzÀ ¥sïn.N. ¸ÀA¸ÀÌgÀuÉ ªÀÄvÀÄÛ PÀÆ° PÁ«ÄðPÀgÀ SÁvÉUÉ dªÉÄ ªÀiÁqÀ¯ÁzÀ | J¸ï.©.J./¨ÁåAPï/CAZÉ PÀbÉÃj | £Á®Ì ¢£ÀUÀ¼ÀÄ | ºÀ¢£ÉÊzÀ£ÉÃ ¢£À | ¨ÁåAPï/ºÀtPÁ¸ÀÄ ¸ÀA¸ÉÜ ¤AzÀ ¹éÃPÀÈvÀªÁzÀ J£ï.L.¹ vÀAvÁæA±ÀzÀ C¼ÀªÀr¸À¯ÁzÀ |

1) ಮೇಲೆ ಪಟ್ಟಿ ಮಾಡಿರುವಂತೆ ಎನ್.ಐ.ಸಿ., ನವದೆಹಲಿ, ನರೇಗಾ ಸಾಫ್ಟ್/ತಂತ್ರಾಂಶಗಳ ವತಿಯಿಂದ ವಿಳಂಬದ ವಿವಿಧ ಹಂತದ ಕಾರ್ಯಾನುಷ್ಠಾನ ಜವಾಬ್ದಾರಿಗಳನ್ನು ಗುರುತಿಸುವುದು ಮತ್ತು ವಿಳಂಬದನ್ವಯ ಮರು ಪಾವತಿ ಮೊತ್ತವನ್ನು ಹಂಚಿಕೆ ಮಾಡುವುದು.

2) ಎಸ್.ಇ.ಜಿ.ಎಫ್/ರಾಜ್ಯದಲ್ಲಿ ಅನುದಾನದ ಕೊರತೆ/ಲಭ್ಯವಿಲ್ಲದಿದ್ದ ಸಂದರ್ಭದಲ್ಲಿ ವಿಳಂಬ ಪರಿಹಾರ ಪಾವತಿ ಪ್ರಕ್ರಿಯೆಯನ್ನು ನರೇಗಾ ಸಾಫ್ಟ್‌ನಲ್ಲಿ ನಿಷ್ಕ್ರಿಯವಾಗುವಂತಹ ವಿಧಾನದ ಸೂಕ್ತ ತಂತ್ರಾಂಶವನ್ನು ಎನ್.ಐ.ಸಿ., ನವದೆಹಲಿ ಇವರ ವತಿಯಿಂದ ರೂಪಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಹಾಗೂ ಅವರ ಹೆಸರಿನಲ್ಲಿ

ಸಹಿ/–

(ಮುನೀಶ್ ಮೌದ್ಗಿಲ್)

ಆಯುಕ್ತರು ಗ್ರಾಮೀಣಾಭಿವೃದ್ಧಿ ಮತ್ತು ಸರ್ಕಾರದ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ 74 ಉಖಾಯೋ 2014

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬಹುಮಹಡಿಗಳ ಕಟ್ಟಡ, ಬೆಂಗಳೂರು,
ದಿನಾಂಕ: ದಿನಾಂಕ: 05-05-2014

# ಸುತ್ತೋಲೆ

**ವಿಷಯ:** 2014-15ನೇ ಸಾಲಿನಲ್ಲಿ ಕೂಲಿಯನ್ನು ಪರಿಷ್ಕರಿಸಿದ ಹಿನ್ನೆಲೆಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳ ಅನುಷ್ಠಾನದಡಿ ಕೂಲಿ ಪಾವತಿಗಾಗಿ ಕೂಲಿದರ ಪಟ್ಟಿಯನ್ನು ಹೊರಡಿಸುವ ಕುರಿತು (SOR For Wager)

**ಉಲ್ಲೇಖ:** 1. ಸರ್ಕಾರದ ಆದೇಶದ ಸಂಖ್ಯೆ ಗ್ರಾಅಪ 230 ಉಖಾಯೋ 2011 ದಿನಾಂಕ : 21-03-2013.
2.ಸರ್ಕಾರದ ಸುತ್ತೋಲೆಯ ಪತ್ರದ ಸಂಖ್ಯೆ ಗ್ರಾಅಪ 161 ಉಖಾಯೋ 2014 ದಿನಾಂಕ : 25-02-2014:

ಕೇಂದ್ರ ಸರ್ಕಾರವು 2014-15ನೇ ಸಾಲಿಗೆ ಅಕುಶಲ ಕೂಲಿ ಕಾರ್ಮಿಕರಿಗೆ ಪಾವತಿಸುತ್ತಿರುವ ಕೂಲಿ ಹಣವನ್ನು ರೂ. 174/- ರಿಂದ ರೂ. 191/-ಗಳಿಗೆ ಪರಿಷ್ಕರಿಸಿ ದಿನಾಂಕ : 01-04-2014 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲು ತಿಳಿಸಿದ್ದು, ಅದರಂತೆ ರಾಜ್ಯ ಸರ್ಕಾರವು ಸುತ್ತೋಲೆಯ ಮೂಲಕ ರಾಜ್ಯದ ಎಲ್ಲಾ ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿಗಳಿಗೆ ಉಲ್ಲೇಖ (2) ರಲ್ಲಿ ತಿಳಿಸಲಾಗಿರುತ್ತದೆ.

2014-15ನೇ ಸಾಲಿಗೆ ಕೂಲಿ ಪರಿಷ್ಕರಿಸಿದ ಹಿನ್ನೆಲೆಯಲ್ಲಿ ಕೂಲಿದರ ಪಟ್ಟಿಯನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನವಾಗುತ್ತಿರುವ ವಿವಿಧ ಇಲಾಖೆಗಳ ಕಾಮಗಾರಿಗಳ ಚಟುವಟಿಕೆಗಳಿಗೆ ಪ್ರತ್ಯೇಕವಾಗಿ ನಿಗಧಿ ಪಡಿಸಿ ಆದೇಶವನ್ನು ಹಿಂದಿನ ಮಾರ್ಚ್ 2014ರ ಮಾಹೆಯಲ್ಲಿ ಹೊರಡಿಸಬೇಕಾಗಿತ್ತು. ಆದರೆ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿ ಇದ್ದುದರಿಂದ ಕೂಲಿದರ ಪಟ್ಟಿಯನ್ನು (Schedule of Rates) ಹೊರಡಿಸಲು ಸಾಧ್ಯವಾಗಿರುವುದಿಲ್ಲ. ಈಗ ಚುನಾವಣಾ ಆಯೋಗದಿಂದ ದಿನಾಂಕ : 24-04-2014ರಂದು ಅನುಮತಿ ನೀಡಿರುವುದರಿಂದ ಕೂಲಿದರ ಪಟ್ಟಿಯ ಆದೇಶವನ್ನು ಹೊರಿಡಿಸಲು ಸರ್ಕಾರವು ತೀರ್ಮಾನಿಸಿದೆ. ಈಗಾಗಲೇ ಉಲ್ಲೇಖ(1)ರಲ್ಲಿ ಕಾಮಗಾರಿಗಳ ವಿವಿಧ ಚಟುವಟಿಕೆಗಳಿಗಾಗಿ ಕೂಲಿದರ ಪಟ್ಟಿಯನ್ನು ಕೂಲಿದರ ರೂ. 82/-, ರೂ. 100/-, ರೂ. 125/-, ರೂ. 155/-, ರೂ. 174/-ಗಳಿಗೆ ಪ್ರತಿ ಘಟಕದ ದರವನ್ನು ಲೆಕ್ಕಚಾರ ಮಾಡಿ ವಿವರವನ್ನು ನಮೂದಿಸಲಾಗಿರುತ್ತದೆ. ದಿನಾಂಕ : 01-04-2014 ರಿಂದ ಕೂಲಿದರವನ್ನು ರೂ. 191/-ಕ್ಕೆ ಪರಿಷ್ಕರಿಸುವುದರಿಂದ ಕೂಲಿದರ ಪಟ್ಟಿಯನ್ನು ಕೂಲಿಯದರಕ್ಕೆ ಅನುಗುಣವಾಗಿ ಘಟಕದ ದರವನ್ನು ಲೆಕ್ಕಚಾರ ಮಾಡಿ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಲಗತ್ತಿಸಿದೆ.

ಇದಲ್ಲದೇ, ಅಕುಶಲ ಕಾರ್ಮಿಕರು ದಿನದ ಒಂದು ಗಂಟೆ ವಿರಾಮವು ಸೇರಿದಂತೆ ಒಟ್ಟು ಒಂಭತ್ತು ಗಂಟೆಗಳ ಕಾಲ ಕೆಲಸ ನಿರ್ವಹಿಸಿದ್ದಲ್ಲಿ ಕಾಮಗಾರಿಗಳ ಯಾವ ಯಾವ ಚಟುವಟಿಕೆಗಳಲ್ಲಿ ಎಷ್ಟು ಪ್ರಮಾಣದ ಕೆಲಸವನ್ನು ನಿರ್ವಹಿಸಲು ಸಾಧ್ಯ ಎಂಬುದರ ಬಗ್ಗೆ ಕೆಲಸದ ಪ್ರಮಾಣವನ್ನು ಲಗತ್ತಿಸಿರುವ ಕೂಲಿದರ ಪಟ್ಟಿಯಲ್ಲಿ ನಿಗಧಿ ಪಡಿಸಿ ತೋರಿಸಲಾಗಿರುತ್ತದೆ. ಕನಿಷ್ಠ ಕೂಲಿ ದರವು ಅಧಿನಿಯಮದಡಿ ಕಾಲಕಾಲಕ್ಕೆ ಬದಲಾವಣೆಗೆ ಒಳಪಟ್ಟಿದ್ದು ಕನಿಷ್ಠ ಕೂಲಿದರ ಬದಲಾವಣೆಯಾದ ಪ್ರತಿ ಸಮಯದಲ್ಲಿ ವಿವಿಧ ಚಟುವಟಿಕೆಗಳ ಪ್ರತಿ ಘಟಕಕ್ಕೆ ನಿಗಧಿ ಪಡಿಸಿರುವ ದರವು

ಬದಲಾವಣೆಯಾಗುತ್ತದೆ. ಆದರೆ ಕೂಲಿ ಕಾರ್ಮಿಕರು ದಿನ ಒಂದರಲ್ಲಿ ಕೆಲಸ ನಿರ್ವಹಿಸುವ ಕೆಲಸದ ಪ್ರಮಾಣದಲ್ಲಿ ಮಾತ್ರ ಯಾವುದೇ ಬದಲಾವಣೆ ಇರುವುದಿಲ್ಲ. ಇದಕ್ಕೆ ಲಗತ್ತಿಸಿದ ಅನುಬಂಧದಲ್ಲಿ ಯಾವುದೇ ಮುದ್ರಣ ದೋಷಗಳು ಕಂಡುಬಂದಲ್ಲಿ ಆಯುಕ್ತಾಲಯದ ಗಮನಕ್ಕೆ ತರುವುದು. ತಮ್ಮ ಹಂತದಲ್ಲಿ ಈ ಮಾಹಿತಿ ಪುನಃ ಪರಿಶೀಲಿಸಿ ಕ್ರಮವಹಿಸಲು ವಿನಂತಿಸಿದೆ.

ಈಗ ಅನುಮೋದಿಸಿದ ಕೂಲಿ ದರ ಪಟ್ಟಿಯಲ್ಲಿ (ಅನುಸೂಚಿತ ದರಪಟ್ಟಿ) ಎಲ್ಲೆಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತೊಡಗಿದ ವಿವಿಧ ಇಲಾಖೆಗಳ ಕಾಮಗಾರಿಗಳ ಚಟುವಟಿಕೆಗಳಿಗೆ ದರಗಳನ್ನು ಒದಗಿಸದೇ ಇರುವ ಚಟುವಟಿಕೆಗಳಿಗೆ ಆಯಾ ಅನುಷ್ಠಾನ ಇಲಾಖೆಗಳಡಿ ನಿಗಧಿ ಪಡಿಸಿದ ಅನುಸೂಚಿತ ದರಗಳನ್ನೇ ಅಂದಾಜು ಪತ್ರಿಕೆಗಳ ತಯಾರಿಕೆಯಲ್ಲಿ ಅಳವಡಿಸಿಕೊಳ್ಳತಕ್ಕದ್ದು.

(ಮುನೀಶ್ ಮೌದ್ಗಿಲ್)

ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಇಲಾಖೆ.

---

## ಪ್ರಿಯ ಓದುಗರೆ, ಗಮನಿಸಿ....... ಚಂದಾದಾರರಲ್ಲಿ ಮನವಿ

**'ಕರ್ನಾಟಕ ವಿಕಾಸ'** ಮಾಸ ಪತ್ರಿಕೆಯ ಚಂದಾಹಣ ಪರಿಷ್ಕೃತಗೊಂಡಿದೆ. ಪತ್ರಿಕೆಯ ಬಿಡಿ ಪ್ರತಿ ₹ 10 ಗಳಾಗಿದ್ದು, ವಾರ್ಷಿಕ ಚಂದಾಹಣ ವ್ಯಕ್ತಿಗಳಿಗೆ ₹100 ಮತ್ತು ಸಂಘ/ಸಂಸ್ಥೆಗಳಿಗೆ ₹120.

ವಾರ್ಷಿಕ ಚಂದಾಹಣವನ್ನು ಒಂದು ವರ್ಷದ ಕಾಲಾವಧಿಗಾಗಿ ಮಾತ್ರ ಪಾವತಿಸಲು ಕೋರಿದೆ. ಚಂದಾಹಣವನ್ನು ಡಿ.ಡಿ/ಚೆಕ್ ರೂಪದಲ್ಲಿ ಸ್ವೀಕರಿಸಲಾಗುವುದಿಲ್ಲ. ಚಂದಾದಾರರು ಪೋಸ್ಟಲ್ ಮನಿ ಆರ್ಡರ್ ಮೂಲಕ ಮಾತ್ರ ಚಂದಾಹಣವನ್ನು ಪಾವತಿಸಲು ಕೋರಿದೆ.

ಚಂದಾದಾರರು ಚಂದಾಹಣವನ್ನು ಅಂಚೆ ಕಚೇರಿಯಲ್ಲಿ ಪೋಸ್ಟಲ್ ಮನಿ ಆರ್ಡರ್ ಮೂಲಕ ಪಾವತಿಸುವಾಗ ಮನಿ ಆರ್ಡರ್ ಫಾರಂನಲ್ಲಿ ಚಂದಾದಾರರ ಹೆಸರು ಮತ್ತು ಸಂಪೂರ್ಣ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ ಸ್ಪಷ್ಟವಾಗಿ ನಮೂದಿಸಿದೆಯೇ? ಎಂದು ಖಚಿತಪಡಿಕೊಳ್ಳಲು ಕೋರಿದೆ. ಸ್ಪಷ್ಟ ಅಂಚೆ ವಿಳಾಸಗಳಿಲ್ಲದ ವಾರ್ಷಿಕ ಚಂದಾಹಣವನ್ನು ಸ್ವೀಕರಿಸಲಾಗುವುದಿಲ್ಲ. ಚಂದಾಹಣವನ್ನು ಪಾವತಿಸಬೇಕಾದ **'ಕರ್ನಾಟಕ ವಿಕಾಸ'**ದ ಕಛೇರಿ ವಿಳಾಸ ಈ ಕೆಳಕಂಡಂತಿದೆ.

**ಸಂಪಾದಕರು**
**ಕರ್ನಾಟಕ ವಿಕಾಸ,**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,**
ನಂ.309, 3ನೇ ಮಹಡಿ, ಗೇಟ್ ನಂ.1, ಬಹುಮಹಡಿ ಕಟ್ಟಡ, ಡಾ||ಅಂಬೇಡ್ಕರ ವೀದಿ, ಬೆಂಗಳೂರು – 560 001.
ದೂರವಾಣಿ ಸಂಖ್ಯೆ : 080 – 22353857.
ಇ–ಮೇಲ್: kvrdpr@gmail.com, ವೆಬ್‌ಸೈಟ್: www.rdpr.kar.nic.in

ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ 06 ಉಖಾಯೋ 2013

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬಹುಮಹಡಿಗಳ ಕಟ್ಟಡ, ಬೆಂಗಳೂರು,
ದಿನಾಂಕ: ದಿನಾಂಕ: 08–05–2014

# ಸುತ್ತೋಲೆ

**ವಿಷಯ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪ್ರತಿವಾರದ ಗುರುವಾರದ ದಿನದಂದು ರೋಜ್‌ಗಾರ್ ದಿವಸವನ್ನು ಆಚರಿಸುವ ಬಗ್ಗೆ.

**ಉಲ್ಲೇಖ:** 1. ಭಾರತ ಸರ್ಕಾರದ ಪತ್ರ ಸಂಖ್ಯೆ: J11011/07/2012/RE–1 ದಿನಾಂಕ: 18–11–2013

2. ಸರ್ಕಾರದ ಪತ್ರ ಸಂಖ್ಯೆ ಗ್ರಾಅಪ 06 ಉಖಾಯೋ 2013 ದಿನಾಂಕ: 09–12–2013

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಾಚರಣೆ ಮಾರ್ಗಸೂಚಿ 2013 4ನೇ ಆವೃತ್ತಿ ಕಂಡಿಕೆ 3.3ರಂತೆ ಉದ್ಯೋಗ ಖಾತರಿ ದಿವಸ ಅರ್ಥಾತ್ ರೋಜ್‌ಗಾರ್ ದಿವಸವನ್ನು ಆಚರಿಸಬೇಕಾಗುತ್ತದೆ. ಉಲ್ಲೇಖ (1)ರ ಪ್ರಕಾರ ಭಾರತ ಸರ್ಕಾರವು ಈ ಕುರಿತು ಕಾರ್ಯಸೂಚಿಗಳನ್ನು ಪ್ರಕಟಿಸಿದೆ. ಉಲ್ಲೇಖ (2)ರ ಪ್ರಕಾರ ಸದರಿ ಕಾರ್ಯಸೂಚಿಗಳನ್ನು ತಮಗೆ ಕಳುಹಿಸಲಾಗಿದೆ. ಸಿದ್ಧ ಅವಗಾಹನೆಗಾಗಿ ಸದರಿ ಪತ್ರ ಮತ್ತು ಅದರ ಅಡಕಗಳನ್ನು ಇದರೊಂದಿಗೆ ಲಗತ್ತಿಸಿದೆ. ರೋಜ್‌ಗಾರ್ ದಿವಸವನ್ನು ಯಾವರೀತಿ ನಡೆಸಬೇಕು ಎಂಬುವುದರ ಬಗ್ಗೆ ಮಾರ್ಗಸೂಚಿ ಇದರಲ್ಲಿದ್ದು ಅದು ಸ್ವಯಂ ವೇದ್ಯವಾಗಿದೆ. ಅನುಬಂಧ–1ರಲ್ಲಿ ರೋಜ್‌ಗಾರ್ ದಿವಸದ ನಡವಳಿಯನ್ನು ದಾಖಲಿಸುವ ನಮೂನೆಯನ್ನು ಸಹ ಲಗತ್ತಿಸಿದೆ. ರಾಜ್ಯದಲ್ಲಿ ಪ್ರತಿ ಗುರುವಾರ ರೋಜ್‌ಗಾರ್ ದಿವಸವನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಆಯೋಜಿಸಲು ಸೂಚಿಸಿದೆ. ರೋಜ್‌ಗಾರ್ ದಿವಸವನ್ನು ಸಂಘಟನೆ ಆಗುವುದನ್ನು ಜಿಲ್ಲೆಯ ಕಾರ್ಯಕ್ರಮ ಸಮನ್ವಯಾಧಿಕಾರಿ ಖಾತರಿಪಡಿಸಿಕೊಳ್ಳತಕ್ಕದ್ದು. ರೋಜ್‌ಗಾರ್ ದಿವಸವನ್ನು ವಾರ್ಡ್‌ಮಟ್ಟದಲ್ಲಿ ಅಥವಾ ಶಾಲಾ ಕಟ್ಟಡಗಳಲ್ಲಾಗಲೀ ಇತರೇ ಸಾರ್ವಜನಿಕ ಸ್ಥಳಗಳಲ್ಲಿ ಸಂಘಟಿಸಲು ಕ್ರಮವಹಿಸಬಹುದು. ರೋಜ್‌ಗಾರ್ ದಿವಸದ ಉದ್ದೇಶ, ಕಾರ್ಯಕ್ರಮದ ಪಟ್ಟಿ ಬಾಧ್ಯಸ್ಥರು, ತಯಾರಿಕಾ ಪೂರ್ವ ಚಟುವಟಿಕೆಗಳು ಯಾವ ರೀತಿ ಸಂಘಟಿಸಬೇಕು ಹಣ ಕಾಸಿನ ವ್ಯವಸ್ಥೆ ಅನುಸರಣೆ ಯಾವ ರೀತಿ ಮಾಡುವ ಬಗ್ಗೆ ಮಾರ್ಗಸೂಚಿಗಳಲ್ಲಿ ವಿವರವಾಗಿ ತಿಳಿಸಲಾಗಿದೆ. ಅನುಬಂಧ–1ರಲ್ಲಿ ರೋಜ್‌ಗಾರ್ ದಿವಸದ ನಡವಳಿ ದಾಖಲಿಸಲು ನಮೂನೆ ತಿಳಿಸಲಾಗಿದೆ. ಅದರಂತೆ ಮಾಹಿತಿಯನ್ನು ಭರ್ತಿ ಮಾಡಿ ರೋಜ್‌ಗಾರ್ ದಿವಸ ನಡೆಸಿದ ಬಗ್ಗೆ ಪ್ರತಿವಾರ ಘೋಷ್ವಾರೆ ಮಾಹಿತಿಯನ್ನು ಮಾತ್ರ ರಾಜ್ಯ ಸರ್ಕಾರಕ್ಕೆ ಸಲ್ಲಿಸುವುದು.

ಈ ರೋಜ್‌ಗಾರ್ ದಿವಸದಲ್ಲಿ ಅನುಷ್ಠಾನ ಇಲಾಖೆಯೂ ಸಹಿತ ಭಾಗವಹಿಸುವಂತೆ ಕ್ರಮವಹಿಸಲು ಸೂಚಿಸಿದೆ.

(ಅಡಕಗಳು ಮೇಲಿನಂತೆ)

(ಮುನೀಶ್ ಮೌದ್ಗಿಲ್)
ಆಯುಕ್ತರು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಪಂ.ರಾಜ್ ಅಧಿನಿಯಮಕ್ಕೆ ತಿದ್ದುಪಡಿ ತರಲು ಶಿಫಾರಸ್ಸು ಮಾಡಲು ಉನ್ನತ ಮಟ್ಟದ ತಜ್ಞರ ಸಮಿತಿ ರಚಿಸುವ ಬಗ್ಗೆ.

## ಪ್ರಸ್ತಾವನೆ:

ಸಂವಿಧಾನದ 73ನೇ ತಿದ್ದುಪಡಿಯ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕರ್ನಾಟಕ ಪಂ.ರಾಜ್ ಅಧಿನಿಯಮ, 1993 ಜಾರಿಗೆ ಬಂದಿರುತ್ತದೆ. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸಬಲೀಕರಣಗೊಳಿಸಲು ಹಿಂದಿನ ಸರ್ಕಾರಗಳು ನೀಡಿರುವ ಕೊಡುಗೆ ಅವಿಸ್ಮರಣೀಯ ಹಾಗೂ ಅದ್ವಿತೀಯವಾಗಿರುತ್ತದೆ. ಇಂದು ರಾಜ್ಯದಲ್ಲಿ ಪಂ.ರಾಜ್ ವ್ಯವಸ್ಥೆಯನ್ನು ಮತ್ತಷ್ಟು ಸಬಲೀಕರಣಗೊಳಿಸಲು ವಿಕೇಂದ್ರಿಕರಣ ವ್ಯವಸ್ಥೆಯನ್ನು ವಿಸ್ತರಿಸಲು ಸಾಮಾಜಿಕ ನ್ಯಾಯವನ್ನು ಸಾಧಿಸಲು ಸರ್ಕಾರವು ಬದ್ಧವಾಗಿದ್ದು, ಕೇಂದ್ರ ಸರ್ಕಾರದ ಹಲವಾರು ರಾಷ್ಟ್ರೀಯ ಪ್ರಾಮುಖ್ಯವಾದ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಕಳೆದ 20 ವರ್ಷಗಳಿಂದೀಚೆಗೆ ಬಹು ಪ್ರಮುಖವಾದ ಯೋಜನೆಗಳು ಜಾರಿಯಲ್ಲಿದ್ದು, ಅವುಗಳ ಸಮಗ್ರ ಅನುಷ್ಠಾನಕ್ಕಾಗಿ ಹಾಗೂ ಪಂ.ರಾಜ್ ವ್ಯವಸ್ಥೆಯನ್ನು ಮತ್ತಷ್ಟು ಜನಪರ ಸ್ನೇಹಿ ವ್ಯವಸ್ಥೆಯನ್ನಾಗಿ ರೂಪಿಸಲು 20 ವರ್ಷಗಳ ಹಿಂದೆ ರೂಪಿಸಿರುವ ಅಧಿನಿಯಮದ ಹಲವಾರು ಪ್ರಕರಣಗಳನ್ನು ಇಂದಿನ ಸಾಮಾಜಿಕ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಪ್ರಮುಖ ಪ್ರಕರಣಗಳನ್ನು ಪರಿಶೀಲಿಸಿ ಸೂಕ್ತ ತಿದ್ದುಪಡಿ ತರಲು ಸರ್ಕಾರ ಚಿಂತಿಸಿದೆ. ಈ ನಿಟ್ಟಿನಲ್ಲಿ ಪಂ.ರಾಜ್ ವ್ಯವಸ್ಥೆಯ ಬಗ್ಗೆ ಕಾಳಜಿ ಹೊಂದಿರುವ ಹಲವು ಪರಿಣಿತ ಸಂಸ್ಥೆಗಳಿಂದಲೂ ಹಾಗೂ ಶಾಸಕಾಂಗ ವರ್ಗದಿಂದಲೂ ಒತ್ತಾಯವಿರುತ್ತದೆ, ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಯುವ ಚೈತನ್ಯವನ್ನು ಮಹಿಳಾ ಶಕ್ತಿಯನ್ನು ಒಗ್ಗೂಡಿಸಿ ಸಾಮಾಜಿಕ ಬದಲಾವಣೆಯತ್ತ ದಿಟ್ಟ ಹೆಜ್ಜೆಯನ್ನಿಡಲು ಕಾಯ್ದೆಯ ಹಲವು ಪ್ರಕರಣಗಳಿಗೆ ತಿದ್ದುಪಡಿ ಅತ್ಯಾವಶ್ಯಕವಾಗಿರುವುದನ್ನು ಸರ್ಕಾರ ಮನಗಂಡಿರುತ್ತದೆ. ಗ್ರಾಮೀಣ ಜನರ ಬದುಕಿನಲ್ಲಿ ಗುಣಾತ್ಮಕ ಬದಲಾವಣೆಯನ್ನು ತರಬೇಕಾಗಿರುವುದು ಅತ್ಯಾವಶ್ಯಕವಾಗಿರುವ ಕಾರಣ ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರಲ್ಲಿನ ವಿವಿಧ ಪ್ರಕರಣಗಳನ್ನು ಪರಿಶೀಲಿಸಿ ಅವಶ್ಯ ತಿದ್ದುಪಡಿಯನ್ನು ಸೂಚಿಸಲು ಮಾಜಿ ವಿಧಾನ ಸಭಾಧ್ಯಕ್ಷರು ಹಾಗೂ ವಿಧಾನ ಸಭಾ ಸದಸ್ಯರಾದ ಮಾನ್ಯ ಶ್ರೀ ಕೆ.ಆರ್. ರಮೇಶ್‌ಕುಮಾರ್ ರವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯನ್ನು ರಚಿಸಲು ನಿರ್ಧರಿಸಲಾಗಿದೆ. ಅದರಂತೆ, ಕೆಳಕಂಡ ಆದೇಶ.

## ಸರ್ಕಾರಿ ಆದೇಶ ಸಂ. ಗ್ರಾಅಪ 221 ಜಿಪಸ 2013, ಬೆಂಗಳೂರು, ದಿನಾಂಕ 26-11-2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆ ಹಾಗೂ ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಸಮಗ್ರ ಅಧ್ಯಯನ ಮಾಡಿ ಸೂಕ್ತ ಶಿಫಾರಸ್ಸು ಮಾಡಲು ಮಾಜಿ ವಿಧಾನ ಸಭಾಧ್ಯಕ್ಷರು ಹಾಗೂ ವಿಧಾನ ಸಭಾ ಸದಸ್ಯರಾದ ಮಾನ್ಯ ಶ್ರೀ ಕೆ.ಆರ್. ರಮೇಶ್‌ಕುಮಾರ್ ರವರ ಅಧ್ಯಕ್ಷತೆಯಲ್ಲಿ ಕೆಳಕಂಡ ತಜ್ಞರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ. ಸಾಮಾಜಿಕ ನ್ಯಾಯ ಒದಗಿಸುವ ಪ್ರಬಲ, ಪರಿಣಾಮಕಾರಿ ಸಾಧನವಾಗಿ, ಅಭಿವೃದ್ಧಿಯ ಜೊತೆಗೆ ಪಂಚಾಯತ್ ರಾಜ್ ಸಂಸ್ಥೆಗಳನ್ನು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಕನಸಿನ ಗ್ರಾಮ ಸ್ವರಾಜ್ಯ ತತ್ವಗಳನ್ನು ಅಳವಡಿಸಿಕೊಂಡು ಹಾಗೂ ಘಟನಾ ತಿದ್ದುಪಡಿ ಮಾಡುವದರ ಮೂಲಕ ಈ ವ್ಯವಸ್ಥೆಗೆ ಭದ್ರ ಬುನಾದಿ ಹಾಕುವುದರೊಂದಿಗೆ ಸಮಾಜದ ಎಲ್ಲ ಜಾತಿ, ಮತ, ಪಂಗಡ ವರ್ಗದ ಜನ ಹಾಗೂ ಮಹಿಳೆ ಅಧಿಕಾರ ಗದ್ದುಗೇರುವ ಅವಕಾಶ ಕಲ್ಪಿಸಿರುವ ರಾಜೀವಗಾಂಧಿಯವರ ಕನಸಿನ ಪಂಚಾಯತ ರಾಜ್ಯ ವ್ಯವಸ್ಥೆ ರೂಪಿಸುವ ಸ್ವಯಂಆಡಳಿತ ಸಂಸ್ಥೆಗಳನ್ನಾಗಿ ಪರಿವರ್ತಿಸುವಂಥಹ ಅವಶ್ಯಕ ಬದಲಾವಣೆಗಳನ್ನು ಹಾಗೂ ಸುಧಾರಣೆಗಳನ್ನು ಈಗಿರುವ ಕಾನೂನಿನಲ್ಲಿ ಮಾಡಲು ಸಂಸದೀಯ ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿ "ಪ್ರಜೆಗಳೇ ಪ್ರಭುಗಳು" ಎಂಬ ಸಂವಿಧಾನದ ಆಶಯ ಹಾಗೂ ಸಿದ್ದಾಂತವನ್ನು ಶ್ರೀಸಾಮಾನ್ಯರ ಅನುಭವಕ್ಕೆ ಬರುವಂತೆ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಅನುಷ್ಠಾನಗೊಳಿಸಲು ಬೇಕಾಗುವಂತಹ ಎಲ್ಲ ಅವಶ್ಯಕ ಕಾನೂನಿನ ಬದಲಾವಣೆಗಳನ್ನು ಈ ಸಮಿತಿಯು ಶಿಫಾರಸ್ಸು ಮಾಡುವುದು. ಈ ಸಮಿತಿಯು ರಚನೆಯಾದ ದಿನಾಂಕದಿಂದ 4 (ನಾಲ್ಕು) ತಿಂಗಳೊಳಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.

| | | |
|---|---|---|
| 1 | ಶ್ರೀ ರಮೇಶ್‌ಕುಮಾರ್, ಮಾನ್ಯ ವಿಧಾನ ಸಭಾ ಸದಸ್ಯರು, ಶ್ರೀನಿವಾಸಪುರ. | ಅಧ್ಯಕ್ಷರು |
| 2 | ಶ್ರೀ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಸದಸ್ಯರು, ಗುಲ್ಬರ್ಗಾ | ಸದಸ್ಯರು |
| 3 | ಶ್ರೀ ಸಿ. ನಾರಾಯಣಸ್ವಾಮಿ, ಮಾಜಿ ಲೋಕಸಭಾ ಸದಸ್ಯರು, ಬೆಂಗಳೂರು | ಸದಸ್ಯರು |
| 4 | ಶ್ರೀ ಅಮರಸಿಂಗ್ ಪಾಟೀಲ್, ಮಾಜಿ ಲೋಕ ಸಭಾ ಸದಸ್ಯರು, ಬೆಳಗಾವಿ | ಸದಸ್ಯರು |
| 5 | ಶ್ರೀ ಡಿ.ಆರ್. ಪಾಟೀಲ್, ಮಾಜಿ ವಿಧಾನ ಸಭಾ ಸದಸ್ಯರು, ಗದಗ | ಸದಸ್ಯರು |
| 6 | ಶ್ರೀ ಜನಾರ್ಧನ, ಅಧ್ಯಕ್ಷರು, ಜಿಲ್ಲಾ ಪಂಚಾಯತಿ, ಕೊಪ್ಪಳ | ಸದಸ್ಯರು |
| 7 | ಶ್ರೀ ವೆಂಕಟರಾವ್ ಘೋರ್ಪಡೆ, ಮಾಜಿ ಜಿಲ್ಲಾ ಪಂಚಾಯತಿ ಅಧ್ಯಕ್ಷರು, ಬಳ್ಳಾರಿ | ಸದಸ್ಯರು |
| 8 | ಶ್ರೀ ಟಿ.ಆರ್. ರಘುನಂದನ್, ನಿವೃತ್ತ ಐ.ಎ.ಎಸ್. ಅಧಿಕಾರಿಗಳು, ಬೆಂಗಳೂರು | ಸದಸ್ಯರು |
| 9 | ಶ್ರೀ ಎಫ್.ಹೆಚ್. ಜಕ್ಕಪ್ಪನವರ, ಉಪಾಧ್ಯಕ್ಷರು, ಡಾ॥ ಅಂಬೇಡ್ಕರ್ ಫೌಂಡೇಷನ್ (ಸಾಮಾಜಿಕ ನ್ಯಾಯ ಮಂತ್ರಾಲಯ), ಹುಬ್ಬಳ್ಳಿ. | ಸದಸ್ಯರು |
| 10 | ಶ್ರೀ ಹರ್ಷದ್ ಆಲಿ, ಮಾಜಿ ವಿಧಾನ ಪರಿಷತ್ ಸದಸ್ಯರು, ಬೀದರ. | ಸದಸ್ಯರು |
| 11 | ಶ್ರೀ ಜಾರ್ಜ್ ಮ್ಯಾಥ್ಯೂ, ನಿರ್ದೇಶಕರು, ಐ.ಎಸ್.ಎಸ್., ನವದೆಹಲಿ. | ಸದಸ್ಯರು |
| 12 | ಶ್ರೀಮತಿ ಶಾಂತವ್ವ ಗುಜ್ಜಲ, ಮಾಜಿ ಜಿಲ್ಲಾ ಪಂಚಾಯತಿ ಅಧ್ಯಕ್ಷರು. ಧಾರವಾಡ. | ಸದಸ್ಯರು |
| 13 | ಶ್ರೀ ಸಂದೀಪ್ ಬೆಳಗಲಿ, ಕಾನೂನು ತಜ್ಞರು. | ಸದಸ್ಯರು |
| 14 | ಶ್ರೀ ಹೆಚ್.ಡಿ. ಅಮರನಾಥನ್, ಕಾನೂನು ತಜ್ಞರು, ಬೆಂಗಳೂರು. | ಸದಸ್ಯರು |
| 15 | ಶ್ರೀ ದಕ್ಷಿಣಾ ಮೂರ್ತಿ, ನಿವೃತ್ತ ಕಾರ್ಯದರ್ಶಿಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ಬೆಂಗಳೂರು. | ಸದಸ್ಯ ಕಾರ್ಯದರ್ಶಿ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ. ಯಾಲಕ್ಕಿಗೌಡ)**
ನಿರ್ದೇಶಕರು (ಪಂ.ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಅಗತ್ಯವಿರುವ ಕ್ರಮಗಳನ್ನು ತೆಗೆದುಕೊಳ್ಳಲು ತಜ್ಞರ ಸಮಿತಿ ರಚಿಸುವ ಬಗ್ಗೆ.

## ಪ್ರಸ್ತಾವನೆ:

2013–14ನೇ ಸಾಲಿನ ಆರ್ಥಿಕ ಆಯವ್ಯಯದಲ್ಲಿ ರಾಜ್ಯದಲ್ಲಿ ಗ್ರಾಮೀಣ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾಪಿಸಿದ್ದು, ವಿಧಾನಸಭೆ ಹಾಗೂ ವಿಧಾನ ಪರಿಷತ್ತುಗಳಲ್ಲಿ ಅಂಗೀಕರಿಸಲಾಗಿದೆ. ಸದರಿ ವಿಶ್ವವಿದ್ಯಾನಿಲಯವು ಯಾವ ರೀತಿ ಕಾರ್ಯಾಚರಣೆ ಮಾಡಬೇಕು ಎಂಬುದರ ಬಗ್ಗೆ ತಜ್ಞರ ಸಲಹೆಗಳನ್ನು ಪಡೆದು ಅವರ ಅಭಿಪ್ರಾಯದಂತೆ ಕಾರ್ಯನಿರ್ವಹಿಸಬೇಕಾಗಿರುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಯೋಜನೆಗಳಲ್ಲಿ ವಾರ್ಷಿಕ ಒಟ್ಟಾರೆ ಹತ್ತುಸಾವಿರ ಕೋಟಿ ಹಣವನ್ನು ವಿನಿಯೋಗಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ವಿವಿಧ ಅಭಿವೃದ್ಧಿ ಕ್ಷೇತ್ರಗಳಲ್ಲಿ ಆಗುತ್ತಿರುವ ಬದಲಾವಣೆಯ ಪ್ರಕ್ರಿಯೆಯನ್ನು ಗ್ರಹಿಸದಿದ್ದರೆ, ಇಲಾಖೆಯ ಕಾರ್ಯಕ್ರಮಗಳ ಗರಿಷ್ಠ ಪ್ರಯೋಜನವಾಗಲಿ ಅಥವಾ ಅಂತಹ ಯೋಜನೆಗಳಿಗೆ/ಕಾರ್ಯಕ್ರಮಗಳಿಗೆ ಸಮರ್ಥವಾಗಿ ಹಣವನ್ನು ಖರ್ಚು ಮಾಡುವುದಾಗಲಿ ಸಾಧ್ಯವಾಗುವುದಿಲ್ಲ.

ರಾಜ್ಯದ ಜನಸಂಖ್ಯೆಯಲ್ಲಿ ಶೇಕಡಾ 65ರಷ್ಟು ಗ್ರಾಮೀಣ ಪ್ರದೇಶದಲ್ಲಿ ವಾಸ್ತವ್ಯ ಹೂಡಿದವರಾಗಿರುತ್ತಾರೆ. ಇಂಥಹ ಅಪೂರ್ವ ಮಾನವ ಸಂಪನ್ಮೂಲವನ್ನು ಯಾವ ರೀತಿ ಅಭಿವೃದ್ಧಿಗೋಸ್ಕರ/ಬೆಳವಣಿಗೆಗೊಸ್ಕರ ಬಳಸಿಕೊಳ್ಳುವುದು, ಅಭಿವೃದ್ಧಿ ಹಾಗೂ ಉದ್ಯಮಶೀಲತೆಯ ಮೂಲಕ ಯುವಜನಾಂಗವನ್ನು ಗ್ರಾಮೀಣ ಪ್ರದೇಶಗಳತ್ತ ಆಕರ್ಶಿಸುವುದು, ಗ್ರಾಮೀಣ ವಾಸಿಗಳ ಸಾಮರ್ಥ್ಯಭಿವೃದ್ಧಿ (Capacity building) ನಮ್ಮ ಮುಂದಿರುವ ಸವಾಲುಗಳು ಈ ಹಿನ್ನೆಲೆಯಲ್ಲಿ ಸಂಶೋಧನೆ ಆಧಾರಿತ ಗ್ರಾಮೀಣ ವಿಶ್ವವಿದ್ಯಾನಿಲಯದ ಸ್ಥಾಪನೆಯ ಅಗತ್ಯ ಕಂಡುಬರುತ್ತದೆ.

**ಗ್ರಾಮೀಣ ವಿಶ್ವವಿದ್ಯಾನಿಲಯದ ಧ್ಯೇಯೋದ್ದೇಶಗಳು ಹಾಗೂ ಪ್ರಸ್ತಾವನೆಗಳು ಈ ಕೆಳಕಂಡಂತೆ ಇರಬೇಕಾಗುತ್ತದೆ.**

1) ಗ್ರಾಮೀಣ ವಿಶ್ವವಿದ್ಯಾನಿಲಯವು ಗ್ರಾಮೀಣಾಭಿವೃದ್ಧಿ ಯೋಜನಾ ಪ್ರಕ್ರಿಯೆ ಹಾಗೂ ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸುವುದು.

2) ಕರ್ನಾಟಕ ರಾಜ್ಯದ ವಿವಿಧ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳು ತಮ್ಮಲ್ಲಿ ಈಗಾಗಲೇ ಅಳವಡಿಸಿಕೊಂಡಿರುವ ಅನೇಕ ಉತ್ತಮ ಪದ್ಧತಿಗಳು ತಾತ್ವಿಕವಾಗಿ ವಿಶ್ಲೇಷಣೆಗೊಂಡು ಅವುಗಳಿಗೆ ರಾಜ್ಯಮಟ್ಟದಲ್ಲಿ ಮಹತ್ವ ದೊರಕಿಸಿಕೊಡುವುದು.

3) ಗ್ರಾಮೀಣಾಭಿವೃದ್ಧಿ ಕ್ಷೇತ್ರದ ಆದ್ಯತೆ ಹಾಗೂ ಅಗತ್ಯತೆಗಳಿಗೆ ಅನುಗುಣವಾಗಿ ಹೊಸ ಆವಿಷ್ಕಾರ ಸಂಶೋಧನೆಗಳನ್ನು ಗ್ರಾಮೀಣ ಜನರಿಗೆ ತಲುಪಿಸಲು ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾನಿಲಯವು ಸೇತುಬಂಧುವಾಗಿ ಕಾರ್ಯ ನಿರ್ವಹಿಸುವುದು.

4) ಗ್ರಾಮೀಣಾಭಿವೃದ್ಧಿ ಕುರಿತಂತೆ ಸಮಗ್ರ ಮುನ್ನೋಟ ತಯಾರಿಸುವುದು ಹಾಗೂ ಸಂಶೋಧನೆ ನಡೆಸುವುದು.

5) ಗ್ರಾಮೀಣ ಭಾಗದಲ್ಲಿರುವ ಬಿ.ಪಿ.ಎಲ್. ಹಾಗೂ ಶೋಷಿತ ಹಿಂದುಳಿದ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಅಧ್ಯಯನ ಹಾಗೂ ಸಂಶೋಧನೆ ಮಾಡುವುದು.

6) ಗ್ರಾಮೀಣ ಪ್ರದೇಶಕ್ಕೆ ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳಿಂದ ಅಭಿವೃದ್ಧಿಗೆ ಸಂಪನ್ಮೂಲ ತರಲು ಯೋಜನೆಗಳನ್ನು ರೂಪಿಸುವುದು, ಕಾರ್ಯಕ್ರಮ ವಹಿಸುವುದು (ಸಿ.ಎಸ್.ಆರ್.)

7) ಗ್ರಾಮೀಣ ಪ್ರದೇಶಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ಅಧ್ಯಯನ ಮತ್ತು ಸಂಶೋಧನೆ ನಡೆಸುವುದು.

8) ಗ್ರಾಮೀಣ ಭಾಗದ ಬಡತನ ಮತ್ತು ಅನಕ್ಷರತೆಯ ಬಗ್ಗೆ ಸಮಗ್ರ ಅಧ್ಯಯನ ಹಾಗೂ ಸಂಶೋಧನೆ ಹಮ್ಮಿಕೊಳ್ಳುವುದು. ಸರ್ಕಾರದ "ಪೈಲಟ್ ಪ್ರಾಜೆಕ್ಟ್‌ಗಳನ್ನು" ಪಡೆದು ಅವುಗಳ ಅಧ್ಯಯನ ಮಾಡಿ ಸಂಬಂಧಪಟ್ಟವರಿಗೆ ವರದಿ ಕೊಡುವುದು.

9) ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪ್ರಜಾಸತ್ತಾತ್ಮಕವಾಗಿ ಬಲಪಡಿಸಲು ಹಲವು ಆಡಳಿತದಲ್ಲಿರುವ ವಿಷಯಗಳಲ್ಲಿ ಬದಲಾವಣೆ ತರಲು ಅಧ್ಯಯನ ಮಾಡುವುದು.

10) ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಅವಕಾಶ ಕಲ್ಪಿಸಿ ವಲಸೆ ಹೋಗುವುದನ್ನು ತಡೆಗಟ್ಟಲು ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ನೀಡುವುದು.

11) ಗ್ರಾಮೀಣ ಭಾಗದ ಕೃಷಿ ಮತ್ತು ಕೃಷಿಯೇತರ ಕ್ಷೇತ್ರವನ್ನು ಅಧ್ಯಯನಕ್ಕೆ ಒಳಪಡಿಸುವುದು.

12) ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ನಿವಾರಣೆಗೆ ಉದ್ಯಮ ಶೀಲತೆಯನ್ನು ಅಭಿವೃದ್ಧಿ ಪಡಿಸುವುದು ಹೇಗೆ? ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕುಡಿಯುವ ನೀರು, ನೈರ್ಮಲ್ಯ, ಪೌಷ್ಠಿಕತೆ, ಸಾರ್ವಜನಿಕ ಆರೋಗ್ಯ ಉದ್ಯೋಗ ಖಾತ್ರಿ, ಮಹಿಳಾ ಸಬಲೀಕರಣ, ಗ್ರಾಮೀಣ ನಿರುದ್ಯೋಗ ನಿವಾರಣೆ ಮೊದಲಾದ ವಲಯಗಳಲ್ಲಿ ಸಾವಿರಾರು ಕೋಟಿಗಳನ್ನು ಖರ್ಚು ಮಾಡುತ್ತಿದೆ ಅವುಗಳ ಅಧ್ಯಯನ ಹಾಗೂ ಮೌಲ್ಯಮಾಪನ ಮಾಡುವುದು.

13) ಆಧುನಿಕ ಯುಗದ ಮಾಹಿತಿ ಮತ್ತು ತಂತ್ರಜ್ಞಾನವನ್ನು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸಮರ್ಪಕವಾಗಿ ಬಳಸಿಕೊಂಡು ವ್ಯಕ್ತಿ ಹಾಗೂ ಸಮುದಾಯದ ಸಾಮರ್ಥ್ಯದ ಹೆಚ್ಚಳಕ್ಕೆ ಅವಕಾಶಗಳನ್ನು ತೋರಿಸಿಕೊಡುವುದು.

14) ಗ್ರಾಮೀಣ ಪ್ರದೇಶದಲ್ಲಿ ಪಾರಂಪರಿಕವಾದ ಜಲ ಸಂಪನ್ಮೂಲ ರಕ್ಷಣೆ, ಅಂತರ್ಜಲದ ಸದುಪಯೋಗ.

15) ಪಂಚಾಯತ್ ರಾಜ್ ಸಂಸ್ಥೆಗಳು ತಮ್ಮ ಯೋಜನೆಗಳನ್ನು ಸಿದ್ದಪಡಿಸುವಲ್ಲಿ ಸಲಹೆ ಮತ್ತು ಸಹಕಾರ ಒದಗಿಸುವುದು.

16) ಗ್ರಾಮ ಪಂಚಾಯಿತಿಗಳ ಸ್ವಂತ ಸಂಪನ್ಮೂಲ ಕ್ರೋಢೀಕರಿಸಲು ಅಧ್ಯಯನ, ಸಲಹೆ ಮತ್ತು ಸಹಕಾರ ನೀಡುವುದು.

17) ಗ್ರಾಮೀಣಾಭಿವೃದ್ಧಿಯ ಭಾಗವಾಗಿರುವ ಯುವ ಜನಾಂಗದಲ್ಲಿ ಕೌಶಲ್ಯಾಭಿವೃದ್ಧಿ ಹಾಗೂ ಮಹಿಳಾ ಸಬಲೀಕರಣಕ್ಕೆ ಪೂರಕವಾದ ಸಂಶೋಧನೆ ಕೈಗೊಳ್ಳುವುದು.

ಈ ವಿಚಾರಗಳ ಬಗ್ಗೆ ನೂತನವಾಗಿ ಅಸ್ತಿತ್ವಕ್ಕೆ ಬರಲಿರುವ ವಿಶ್ವವಿದ್ಯಾನಿಲಯ ಪರ್ಯಾಲೋಚಿಸಬೇಕು. ಈ ವಿಶ್ವ ವಿದ್ಯಾನಿಲಯ ಸಂಪೂರ್ಣವಾಗಿ ಸಂಶೋಧನೆಗೆ ಮೀಸಲಾಗಿರಬೇಕೆ ಅಥವಾ ಕೋರ್ಸ್ (ಅಧ್ಯಯನ ವಿಷಯ)ಗಳನ್ನು ಪ್ರಾರಂಭಿಸಬೇಕೆ? ಹಾಗೆ ಪ್ರಾರಂಭಿಸುವ ಅಧ್ಯಯನ ವಿಷಯಗಳಾವುವು. ಸ್ನಾತಕ, ಸ್ನಾತಕೊತ್ತರ, ಪಿ.ಹೆಚ್.ಡಿ., ಡಿಪ್ಲೋಮಾ, ಸರ್ಟಿಫಿಕೆಟ್ ಕೋರ್ಸ್ ಇವುಗಳಲ್ಲಿ ತಕ್ಷಣ ಯಾವುದನ್ನು ಆರಂಭಿಸಬೇಕು. ಈಗ ಅಸ್ತಿತ್ವದಲ್ಲಿರುವ ಸಾಮಾನ್ಯ ವಿಶ್ವವಿದ್ಯಾನಿಲಯಗಳೊಂದಿಗೆ ಸದರಿ ವಿಶ್ವವಿದ್ಯಾನಿಲಯ ತನ್ನ ಸಂಪರ್ಕವನ್ನು ಯಾವ ರೀತಿ ಬೆಳೆಸಿಕೊಳ್ಳಬೇಕು, ಸಮನ್ವಯತೆ ಹೇಗಿರಬೇಕು.

ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾನಿಲಯ 5 ವರ್ಷಗಳಲ್ಲಿ ಮಾಡಬೇಕಾದ ಕಾರ್ಯಚಟುವಟಿಕೆಗಳ ಬಗ್ಗೆ ನೀಲ ನಕಾಶಯೊಂದನ್ನ ಸಿದ್ದಮಾಡಬೇಕಾಗಿರುತ್ತದೆ. ಈ ಅವಧಿಯಲ್ಲಿ ವಿಶ್ವವಿದ್ಯಾನಿಲಕ್ಕೆ ಬೇಕಾಗುವ ಸಂಪನ್ಮೂಲ ಎಷ್ಟು? ಈ ಸಂಪನ್ಮೂಲ ಯಾವ ಮೂಲದಿಂದ ಪಡೆದುಕೊಳ್ಳಬೇಕು. ಮುಂದುವರೆದು ವಿಶ್ವವಿದ್ಯಾನಿಲಯಕ್ಕೆ ಬೇಕಾಗುವ ಒಟ್ಟು ಸ್ಥಳ ಹಾಗೂ ಇದು ಕರ್ನಾಟಕದ ಯಾವ ಭಾಗದಲ್ಲಿದ್ದರೆ ಉತ್ತಮ. ಇದೇ ತರಹ ವಿಶ್ವವಿದ್ಯಾನಿಲಯ ಅಥವಾ ವಿದ್ಯಾ ಸಂಸ್ಥೆಗಳನ್ನು ರಾಷ್ಟ್ರದ ಬೇರೆ ಕಡೆಯಿದ್ದರೆ ಸಮಿತಿಯು ಅಲ್ಲಿಗೆ ಹೋಗಿ ಪ್ರಸ್ತುತವಿರುವ ಸಂಸ್ಥೆಗಳೊಂದಿಗೆ ಆಮೂಲಾಗ್ರವಾಗಿ ಚರ್ಚಿಸಿ ಅದು ಯಾವ ರೀತಿ ಕರ್ತವ್ಯವನ್ನು ನಿರ್ವಹಿಸುತ್ತಿದೆ ಎಂಬುದನ್ನು ತಿಳಿದುಕೊಂಡು ಬರಬೇಕಾಗುತ್ತದೆ ಹಾಗು ಅದನ್ನು ನಾವು ಸ್ಥಾಪಿಸುವ ವಿಶ್ವವಿದ್ಯಾನಿಲಯದಲ್ಲಿ ಅಳವಡಿಸುವ ಸಾಧ್ಯಾಸಾಧ್ಯತೆ ಬಗ್ಗೆ ಪರಿಶೀಲಿಸಬೇಕಾಗಿರುತ್ತದೆ. ಪ್ರಸ್ತುತ ಅಸ್ತಿತ್ವದಲ್ಲಿರುವಂತ ಸಂಸ್ಥೆಗಳೆಂದರೆ ಗುಜರಾತಿನ ಇರ್ಮ, ತಮಿಳುನಾಡಿನ ಗಾಂಧಿ ಗ್ರಾಮ ಹಾಗು ರಾಜಸ್ಥಾನದ ಬನಸ್ಥಳಿ ವಿದ್ಯಾಪೀಠ ಹಾಗೂ ಇತರೆ ಸಂಸ್ಥೆಗಳು.

ಗ್ರಾಮೀಣ ವಿಶ್ವವಿದ್ಯಾನಿಲಯ ಆಡಳಿತಾಂಗ ಹೇಗಿರಬೇಕು? ಪರೀಕ್ಷಾ ಪದ್ಧತಿ ಹೇಗಿರಬೇಕು ಹಾಗೂ ಪರೀಕ್ಷಾ ಮೌಲ್ಯ ಮಾಪನವನ್ನು ಯಾವ ದೃಷ್ಟಿಕೋನದಿಂದ ಮಾಡಬೇಕು ಎಂದೆಲ್ಲ ಪರ್ಯಾಲೋಚಿಸಬೇಕಾಗಿರುತ್ತದೆ.

ಮೇಲ್ಕಂಡ ವಿಷಯಗಳ ಬಗ್ಗೆ ಸಂಪೂರ್ಣವಾಗಿ ಅಧ್ಯಯನ ಮಾಡಿ ಎರಡು ತಿಂಗಳೊಳಗಾಗಿ ಸರ್ಕಾರಕ್ಕೆ ತಪ್ಪದೆ ವರದಿಯನ್ನು ಕೊಡಲು ಈ ಕೆಳಕಂಡ ತಜ್ಞರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ.

ಮೇಲ್ಕಂಡ ವಿಷಯಗಳ ಬಗ್ಗೆ ಸಂಪೂರ್ಣವಾಗಿ ಅಧ್ಯಯನ ಮಾಡಿ ಎರಡು ತಿಂಗಳೊಳಗಾಗಿ ಸರ್ಕಾರಕ್ಕೆ ತಪ್ಪದೆ ವರದಿಯನ್ನು ಕೊಡಲು ಈ ಕೆಳಕಂಡ ತಜ್ಞರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ.

| | | |
|---|---|---|
| 1 | ಶ್ರೀ ಎಸ್.ವಿ. ರಂಗನಾಥ್, ಭಾಆಸೇ ಮುಖ್ಯ ಕಾರ್ಯದರ್ಶಿಗಳು (ನಿವೃತ್ತ) ಕರ್ನಾಟಕ ಸರ್ಕಾರ | ಅಧ್ಯಕ್ಷರು |
| 2 | ಡಾ॥ ಎ.ಎನ್. ಯಲ್ಲಪ್ಪರೆಡ್ಡಿ, ಭಾಆಸೇ (ನಿವೃತ್ತ) | ಸದಸ್ಯರು |
| 3 | ಶ್ರೀ ಆರ್.ಬಿ. ಅಗವಾನೆ, ಭಾಆಸೇ (ನಿವೃತ್ತ) | ಸದಸ್ಯರು |
| 4 | ಡಾ॥ ಎಸ್.ಎ. ಪಾಟೀಲ, ಅಧ್ಯಕ್ಷರು ಕೃಷಿ ಮಿಷನ್ | ಸದಸ್ಯರು |
| 5 | ಡಾ॥ ವಾಲೇಕಾರ್, ಉಪ ಕುಲಪತಿಗಳು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ಸದಸ್ಯರು |
| 6 | ಶ್ರೀ ಪ್ರಕಾಶ್ ಭಟ್, ಗ್ರಾಮೀಣಾಭಿವೃದ್ಧಿ ಕ್ಷೇತ್ರದ ತಜ್ಞರು | ಸದಸ್ಯರು |
| 7 | ಡಾ॥ ಅರುಣ್ ಪಾಟೀಲ, ಕುಡಿಯುವ ನೀರಿನ ತಜ್ಞರು | ಸದಸ್ಯರು |
| 8 | ಡಾ॥ ಸಿ.ಎಸ್. ಪಾಟೀಲ | ಸದಸ್ಯರು |
| 9 | ಶ್ರೀಮತಿ ನಿತಿ ಶರ್ಮ, ಟೀಮ್‌ಲೀಸ್ ಸಂಸ್ಥೆ | ಸದಸ್ಯರು |
| 10 | ನಿರ್ದೇಶಕರು, ಕೆ.ವಿ.ಕೆ. ಹುಲಕೋಟಿ | ಸದಸ್ಯರು |
| 11 | ನಿರ್ದೇಶಕರು, ರುಡ್‌ಸೆಟ್, ಧರ್ಮಸ್ಥಳ | ಸದಸ್ಯರು |
| 12 | ನಿರ್ದೇಶಕರು, ಐಸೆಕ್, ಬೆಂಗಳೂರು | ಸದಸ್ಯರು |
| 13 | ಶ್ರೀ ಸಯ್ಯದ್ ಜಮಾಲ್ | ಸದಸ್ಯ-ಕಾರ್ಯದರ್ಶಿ |

## ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 142 ಜಿಪಸ 2013, ಬೆಂಗಳೂರು, ದಿನಾಂಕ: 31-12-2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯನ್ನು ಬಲವರ್ಧನೆಗೊಳಿಸುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಅಗತ್ಯವಿರುವ ಕ್ರಮಗಳ ಬಗ್ಗೆ ಸೂಕ್ತ ಶಿಫಾರಸ್ಸುಗಳನ್ನು ನೀಡಲು ಅನುವಾಗುವಂತೆ ಈ ಕೆಳಕಂಡ ತಜ್ಞರನ್ನೊಳಗೊಂಡ ಸಮಿತಿಯನ್ನು ರಚಿಸಲು ಸರ್ಕಾರವು ಅನುಮೋದನೆಯನ್ನು ನೀಡಿರುತ್ತದೆ. ಸದರಿ ಸಮಿತಿಯು ತಿಂಗಳೊಳಗಾಗಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು

| | | |
|---|---|---|
| 1 | ಶ್ರೀ ಎಸ್.ವಿ. ರಂಗನಾಥ್, ಭಾಆಸೇ ಮುಖ್ಯ ಕಾರ್ಯದರ್ಶಿಗಳು (ನಿವೃತ್ತ) ಕರ್ನಾಟಕ ಸರ್ಕಾರ | ಅಧ್ಯಕ್ಷರು |
| 2 | ಡಾ॥ ಎ.ಎನ್. ಯಲ್ಲಪ್ಪರೆಡ್ಡಿ, ಭಾಆಸೇ (ನಿವೃತ್ತ) | ಸದಸ್ಯರು |
| 3 | ಶ್ರೀ ಆರ್.ಬಿ. ಅಗವಾನೆ, ಭಾಆಸೇ (ನಿವೃತ್ತ) | ಸದಸ್ಯರು |
| 4 | ಡಾ॥ ಎಸ್.ಎ. ಪಾಟೀಲ, ಅಧ್ಯಕ್ಷರು ಕೃಷಿ ಮಿಷನ್ | ಸದಸ್ಯರು |
| 5 | ಡಾ॥ ವಾಲೇಕಾರ್, ಉಪ ಕುಲಪತಿಗಳು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ಸದಸ್ಯರು |
| 6 | ಶ್ರೀ ಪ್ರಕಾಶ್ ಭಟ್, ಗ್ರಾಮೀಣಾಭಿವೃದ್ಧಿ ಕ್ಷೇತ್ರದ ತಜ್ಞರು | ಸದಸ್ಯರು |
| 7 | ಡಾ॥ ಅರುಣ್ ಪಾಟೀಲ, ಕುಡಿಯುವ ನೀರಿನ ತಜ್ಞರು | ಸದಸ್ಯರು |
| 8 | ಡಾ॥ ಸಿ.ಎಸ್. ಪಾಟೀಲ | ಸದಸ್ಯರು |
| 9 | ಶ್ರೀಮತಿ ನಿತಿ ಶರ್ಮ, ಟೀಮ್‌ಲೀಸ್ ಸಂಸ್ಥೆ | ಸದಸ್ಯರು |
| 10 | ನಿರ್ದೇಶಕರು, ಕೆ.ವಿ.ಕೆ. ಹುಲಕೋಟಿ | ಸದಸ್ಯರು |
| 11 | ನಿರ್ದೇಶಕರು, ರುಡ್‌ಸೆಟ್, ಧರ್ಮಸ್ಥಳ | ಸದಸ್ಯರು |
| 12 | ನಿರ್ದೇಶಕರು, ಐಸೆಕ್, ಬೆಂಗಳೂರು | ಸದಸ್ಯರು |
| 13 | ಶ್ರೀ ಸಯ್ಯದ್ ಜಮಾಲ್ | ಸದಸ್ಯ ಕಾರ್ಯದರ್ಶಿ |

ಸದರಿ ಸಮಿತಿಯು ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ವರದಿಯನ್ನು ನೀಡಬೇಕಾಗಿರುತ್ತದೆ.

ಈ ಸಮಿತಿಗೆ ಕಾರ್ಯನಿರ್ವಹಿಸಲು ಬೇಕಾಗುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2515–00–101–0–09 (ಯೋಜನೆ) ರಡಿ ಭರಿಸತಕ್ಕದ್ದಾಗಿದೆ.

ಆಡಳಿತಾತ್ಮಕ ವೆಚ್ಚವನ್ನು ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಬೇಕಾಗಿರುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಕ್ರಮಾಂಕ ಆಇ 345 ವೆಚ್ಚ–6/2013 ದಿನಾಂಕ: 07–09–2013ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ. ಯಾಲಕ್ಕಿಗೌಡ)**
ನಿರ್ದೇಶಕರು (ಪಂ.ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ:209ಆರ್‌ಆರ್‌ಸಿ13

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ, ಬೆಂಗಳೂರು,
ದಿನಾಂಕ: ದಿನಾಂಕ: 26-05-2014

# ಸುತ್ತೋಲೆ

**ವಿಷಯ:** ಯೋಜನೇತರ ಲೆಕ್ಕ ಶೀರ್ಷಿಕೆ:-3054 (ನಿರ್ವಹಣಾ ಅನುದಾನ)ರಡಿ ಗ್ರಾಮೀಣ ರಸ್ತೆಗಳ ನಿರ್ವಹಣೆ ಹಾಗೂ ದುರಸ್ತಿ ಕುರಿತು.

**ಉಲ್ಲೇಖ:** 1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ, ನಿಮ್ಮ ಪತ್ರದ ಸಂಖ್ಯೆ:-ಜಿಪಂಶಿ/ಯೋಶಾ/ಗ್ರಾರದು/3054(ನಿಅ)/ಕ್ರಿಯೋ/2013-14 ದಿನಾಂಕ:-20.02.2014

ಪ್ರಸ್ತುತ ಸಾಲಿನಲ್ಲಿ ಯೋಜನೇತರ ಲೆಕ್ಕಶೀರ್ಷಿಕೆ-3054ರಡಿ ಗ್ರಾಮೀಣ ರಸ್ತೆ ಕಾಮಗಾರಿಗಳನ್ನು ಟಾಸ್ಕ್ ಫೋರ್ಸ್ ಸಮಿತಿ ಶಿಫಾರಸ್ಸಿನಡಿ ಕೈಗೊಳ್ಳುವ ಕುರಿತು ಶಿವಮೊಗ್ಗ ಜಿಲ್ಲಾ ಪಂಚಾಯತ್ ಕೆಲವು ಅಂಶಕ್ಕೆ ಸ್ಪಷ್ಟೀಕರಣ ಕೋರಲಾಗಿತ್ತು.

**ಈ ಹಿನ್ನಲೆಯಲ್ಲಿ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೂ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ.**

1) ಯೋಜನೇತರ ಲೆಕ್ಕ ಶೀರ್ಷಿಕೆ:-3054(ನಿರ್ವಹಣಾ ಅನುದಾನ)ರಡಿ 2013-14ನೆ ಸಾಲಿನ ಆರ್ಥಿಕ ವರ್ಷದಲ್ಲಿ ಗ್ರಾಮೀಣ ರಸ್ತೆಗಳ ನಿರ್ವಹಣೆ ಹಾಗೂ ದುರಸ್ತಿ ಅನುದಾನದಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಕೈಗೊಳ್ಳುವ ರಸ್ತೆಗಳ ನಿರ್ವಹಣೆ/ದುರಸ್ತಿ ಕಾಮಗಾರಿಗಳ ಸಲುವಾಗಿ ರಚಿಸಲಾದ ಕಾರ್ಯಪಡೆಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಟಾಸ್ಕ ಫೋರ್ಸ್ ಸಮಿತಿ ಸಭೆ ಜರುಗಿಸಿ ತುರ್ತಾಗಿ ಕಾಮಗಾರಿಗಳನ್ನು ಕೈಗೊಂಡು ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸುವಂತೆ ನಿರ್ದೇಶನ ನೀಡಲಾಗಿದೆ

| ಕ್ರಮ ಸಂಖ್ಯೆ | ಪ್ರತಿನಿಧಿಗಳು/ಅಧಿಕಾರಿಗಳು | |
|---|---|---|
| 1 | ಆಯಾ ವಿಧಾನ ಸಭಾ ಕ್ಷೇತ್ರದ ಸದಸ್ಯರು | ಅಧ್ಯಕ್ಷರು |
| 2 | ವಿಧಾನ ಪರಿಷತ್ ಸದಸ್ಯರು ( ಸಂಬಂಧಿಸಿದ ಮತಕ್ಷೇತ್ರದಲ್ಲ ವಾಸವಿರುವ) | ಸದಸ್ಯರು |
| 3 | ಜಿಲ್ಲಾ ಪಂಚಾಯತ್ ಸದಸ್ಯರು (ತಾಲ್ಲೂಕಿನ ಎಲ್ಲಾ ಜಿಲ್ಲಾ ಪಂಚಾಯತ್ ಸದಸ್ಯರು) | ಸದಸ್ಯರು |
| 4 | ತಾಲ್ಲೂಕು ಪಂಚಾಯತ್ ಸದಸ್ಯರು (ತಾಲ್ಲೂಕು ಪಂಚಾಯತಿಗೆ ಆವರ್ತನ ಪದ್ಧತಿಯಲ್ಲ ಆಯ್ಕೆಯಾಗಿ ಬರುವ ಗ್ರಾಮ ಪಂಚಾಯತಿಯ ಅಧ್ಯಕ್ಷರೂ ಒಳಗೊಂಡಂತೆ ತಾಲ್ಲೂಕ್ ಪಂಚಾಯತಿಯ ಎಲ್ಲಾ ಸದಸ್ಯರು) | ಸದಸ್ಯರು |
| 5 | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ | ಸದಸ್ಯರು |
| 6 | ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಿಎಮ್‌ಜಿಎಸ್‌ವೈ ಉಪ ವಿಭಾಗ | ಸದಸ್ಯರು |
| 7 | ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿರಿಂಗ್ ವಿಭಾಗ | ಕಾರ್ಯದರ್ಶಿ |

2)ಮೇಲಿನಂತೆ ಪುನರ್ ರಚಿಸಿದ ಟಾಸ್ಕ ಫೋರ್ಸ್ ಸಭೆಯ ಕೋರಂಗಾಗಿ ಒಟ್ಟು ಸದಸ್ಯರ ಪೈಕಿ ಶೇಕಡ 15ರಷ್ಟು ಸದಸ್ಯರ ಹಾಜರಾತಿಯನ್ನು ಕೋರಂಗಾಗಿ ನಿಗದಿಪಡಿಸಲಾಗಿದೆ.

3)ಒಂದು ವೇಳೆ ಸಭೆಯ ಕೋರಂ ಆಗದಿದ್ದಲ್ಲಿ, ಸಭೆಯನ್ನು ಮುಂದೂಡಿ ಕೋರಂ ಅಗತ್ಯತೆಗಾಗಿ ಮತ್ತೊಮ್ಮೆ ಒಂದು ಬಾರಿ ಸಭೆಯನ್ನು ಕರೆಯಬಹುದು. ಒಂದು ಬಾರಿ ಮುಂದೂಡಿದ ಸಭೆಯಲ್ಲೂ ಕೋರಂ ಆಗದಿದ್ದಲ್ಲಿ ಸಭೆಯ ಅಧ್ಯಕ್ಷರು ದುರಸ್ತಿಗಾಗಿ ರಸ್ತೆಗಳನ್ನು ಆಯ್ಕೆ ಮಾಡಬಹುದು.

4)ಕೋರಂ ಇದ್ದಂತಹ ಸಭೆಯಲ್ಲಿ ಹಾಜರಿದ್ದ ಟಾಸ್ಕ ಫೋರ್ಸನ ಸದಸ್ಯರು ರಸ್ತೆಗಳ ನಿರ್ವಾಹಣೆಗಾಗಿ ತಾವು ಸೂಚಿಸುವ ಕಾಮಗಾರಿಗಳನ್ನೇ ಕಡ್ಡಯವಾಗಿ ಕ್ರಿಯಾ ಯೋಜನೆಯಲ್ಲಿ ಅಳವಡಿಸಬೇಕೆಂದು ಒತ್ತಾಯಿಸುವಂತಿಲ್ಲ ಮತ್ತು ಸದಸ್ಯರು ವಾರು/ಕ್ಷೇತ್ರವಾರು ಅನುದಾನವನ್ನು ರಸ್ತೆ ನಿರ್ವಹಣೆಗಾಗಿ ಹಂಚಿಕೆ ಮಾಡಬೇಕೆಂದು ಕೇಳುವಂತಿಲ್ಲ. ರಸ್ತೆಗಳ ದುರಸ್ತಿಯ ಅಗತ್ಯತೆ ಮತ್ತು ಅವಶ್ಯಕತೆಯ ಆಧಾರದ ಮೇಲೆ ನಿಗದಿ ಪಡಿಸಿದ ಅನುದಾನದ ಮಿತಿಯೊಳಗೆ ರಸ್ತೆ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು.

ತಮ್ಮ ವಿಶ್ವಾಸಿ,

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬಹುಮಹಡಿಗಳ ಕಟ್ಟಡ, ಬೆಂಗಳೂರು,

# ಸುತ್ತೋಲೆ

**ವಿಷಯ:** 2013-14ನೇ ಸಾಲಿನ ಶಾಸನಬದ್ಧ ಅನುದಾನದ ನಾಲ್ಕನೇ ತ್ರೈಮಾಸಿಕ ಕಂತನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :**
1) ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 129 ಗ್ರಾಪಂಕಾ 2002 (3), ದಿನಾಂಕ: 2-12-2003.
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 234 ಗ್ರಾಪಂಅ 2007, ದಿನಾಂಕ: 27-3-2008.
3) ಆರ್ಥಿಕ ಇಲಾಖೆ ಅ.ಟಿ.ಸಂಖ್ಯೆ: ಆಇ 233 ವೆಚ್ಚ-6/2013, ದಿನಾಂಕ: 22-05-2013.
4) ಇದೇ ಸಮ ಸಂಖ್ಯೆಯ ಸರ್ಕಾರದ ಆದೇಶ ದಿನಾಂಕ: 27-05-2013.
5) ಆರ್ಥಿಕ ಇಲಾಖೆ ಅ.ಟಿ.ಸಂಖ್ಯೆ: ಆಇ 233 ವೆಚ್ಚ-6/2013, ದಿನಾಂಕ: 06-09-2013.
6) ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 23 ಗ್ರಾಪಂಅ 2013, ದಿನಾಂಕ: 19.09.2013.
7) ಇದೇ ಸಮ ಸಂಖ್ಯೆಯ ಸರ್ಕಾರದ ಆದೇಶ ದಿನಾಂಕ: 19-09-2013.
8) ಆರ್ಥಿಕ ಇಲಾಖೆ ಅ.ಟಿ.ಸಂಖ್ಯೆ: ಆಇ 233 ವೆಚ್ಚ-6/2013, ದಿನಾಂಕ: 30-10-2013.
9) ಇದೇ ಸಮ ಸಂಖ್ಯೆಯ ಸರ್ಕಾರದ ಆದೇಶ ದಿನಾಂಕ: 31-10-2013.
10) ಆರ್ಥಿಕ ಇಲಾಖೆ ಅ.ಟಿ.ಸಂಖ್ಯೆ: ಆಇ 233 ವೆಚ್ಚ-6/2013, ದಿನಾಂಕ: 30-01-2014

## ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಸರ್ಕಾರದ ಅನುದಾನವನ್ನು ರಾಜ್ಯ ಹುಜೂರು ಖಜಾನೆಯಿಂದ ಪೇಯೀಸ್ ರಸೀದಿ ಮೇಲೆ ಪಡೆದು ರಾಷ್ಟ್ರೀಯ ಬ್ಯಾಂಕುಗಳ ಮುಖಾಂತರ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ (ಜಿ.ಪಂ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರಿಗೆ ಸರ್ಕಾರವು ಅಧೀಕರಿಸಿದೆ.

2013-14ನೇ ಸಾಲಿಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಶಾಸನಬದ್ಧ ಅನುದಾನಕ್ಕಾಗಿ ಆಯವ್ಯಯ ಲೆಕ್ಕ ಶೀರ್ಷಿಕೆ 2515-00-198-1-07 (ಯೋಜನೆ) ಅಡಿ ಒಟ್ಟಾರೆ ರೂ. 59126.00 ಲಕ್ಷ (ಐವತ್ತೊಂಭತ್ತು ಸಾವಿರದ ಒಂದು ನೂರಾ ಇಪ್ಪತ್ತಾರು ಲಕ್ಷ ರೂಪಾಯಿಗಳು) ಗಳನ್ನು ಒದಗಿಸಲಾಗಿದೆ. ಈ ಅನುದಾನದಿಂದ ಪ್ರಸಕ್ತ ಆರ್ಥಿಕ ವರ್ಷದ ಮೊದಲನೇ ತ್ರೈಮಾಸಿಕ ಕಂತಿನ ಅನುದಾನವನ್ನು ಉಲ್ಲೇಖ (4) ರ ಆದೇಶದಲ್ಲಿ ಮತ್ತು ಮೊದಲನೇ ತ್ರೈಮಾಸಿಕ ಕಂತಿನ ಅನುದಾನದ ವ್ಯತ್ಯಾಸದ ಮೊತ್ತ ಮತ್ತು ಎರಡನೇ ತ್ರೈಮಾಸಿಕ ಕಂತಿನ ಅನುದಾನವನ್ನು ಉಲ್ಲೇಖ (7) ರ ಆದೇಶದಲ್ಲಿ ಬಿಡುಗಡೆ ಮಾಡಲಾಗಿದೆ. 2011 ರ ಜನಗಣತಿಯನ್ವಯ ಎಂಟು ಸಾವಿರಕ್ಕಿಂತ (8001 ಮತ್ತು ಮೇಲ್ಪಟ್ಟು) ಹೆಚ್ಚಿನ ಜನಸಂಖ್ಯೆ ಇರುವ 1418 ಗ್ರಾಮ ಪಂಚಾಯಿತಿಗಳಿಗೆ ಪ್ರತಿ ಗ್ರಾಮ ಪಂಚಾಯಿತಿಗೆ ವಾರ್ಷಿಕವಾಗಿ ತಲಾ ರೂ. 12.00 ಲಕ್ಷಗಳು ಹಾಗೂ ಎಂಟು ಸಾವಿರ ಮತ್ತು ಅದಕ್ಕಿಂತ ಕಡಿಮೆ ಜನಸಂಖ್ಯೆ ಇರುವ 4211 ಗ್ರಾಮ ಪಂಚಾಯಿತಿಗಳಿಗೆ ಪ್ರತಿ ಗ್ರಾಮ ಪಂಚಾಯಿತಿಗೆ ವಾರ್ಷಿಕವಾಗಿ ತಲಾ ರೂ. 10.00 ಲಕ್ಷಗಳನ್ನು ನೀಡಬೇಕಾಗಿರುತ್ತದೆ. ಆದ್ದರಿಂದ 1418 ಗ್ರಾಮ ಪಂಚಾಯಿತಿಗಳಿಗೆ ಮೂರನೇ ತ್ರೈಮಾಸಿಕ ಕಂತಿನ ಅನುದಾನದ ಮೊತ್ತ ತಲಾ ರೂ. 3.00 ಲಕ್ಷದಂತೆ ಒಟ್ಟು ರೂ. 4254.00 ಲಕ್ಷಗಳು (ನಾಲ್ಕು ಸಾವಿರದ ಎರಡು ನೂರಾ ಐವತ್ತನಾಲ್ಕು ಲಕ್ಷಗಳು ಮಾತ್ರ)

ಹಾಗೂ 4211 ಗ್ರಾಮ ಪಂಚಾಯಿತಿಗಳಿಗೆ ತಲಾ ರೂ. 2.50 ಲಕ್ಷದಂತೆ ಒಟ್ಟು ರೂ. 10527.50 ಲಕ್ಷಗಳ (ಹತ್ತು ಸಾವಿರದ ಐದು ನೂರಾ ಇಪ್ಪತ್ತೇಳು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆ ಮಾಡಲು ಪರಿಶೀಲಿಸಲಾಗಿದ್ದು, ಅದರಂತೆ ಆರ್ಥಿಕ ಇಲಾಖೆಯು ಮೇಲೆ ಓದಲಾದ ಕ್ರಮ ಸಂಖ್ಯೆ (8) ರಲ್ಲಿನ ಸಹಮತಿಯಂತೆ 5629 ಗ್ರಾಮ ಪಂಚಾಯಿತಿಗಳಿಗೆ ರೂ. 14781.50 ಲಕ್ಷಗಳು (ಹದಿನಾಲ್ಕು ಸಾವಿರದ ಏಳುನೂರಾ ಎಂಬತ್ತೊಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಸರ್ಕಾರದ ಉಲ್ಲೇಖ (9) ರ ಆದೇಶದಲ್ಲಿ ಬಿಡುಗಡೆ ಮಾಡಲಾಗಿದೆ. 2013–14 ನೇ ಸಾಲಿನ 4ನೇ ಕಂತಿನ ಶಾಸನಬದ್ಧ ಅನುದಾನವನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆ ಮೇಲೆ ಓದಲಾದ (10) ರಲ್ಲಿನ ಸಹಮತಿಯಂತೆ 5629 ಗ್ರಾಮ ಪಂಚಾಯತಿಗಳಿಗೆ ರೂ.14788.50 ಲಕ್ಷ (ಹದಿನಾಲ್ಕು ಸಾವಿರದ ಏಳು ನೂರಾ ಎಂಭತ್ತೆಂಟು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಬಿಡುಗಡೆ ಮಾಡಬೇಕಾಗಿದೆ.

ಸದರಿ ಅನುದಾನದ ಪೈಕಿ ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರದ ಆದೇಶದಂತೆ, ಗ್ರಾಮ ಪಂಚಾಯಿತಿ ಸಿಬ್ಬಂದಿ ವೇತನಕ್ಕಾಗಿ ಶೇಕಡಾ 40 ರಷ್ಟು ಅನುದಾನವನ್ನು ಮತ್ತು ಉಳಿದ ಶೇಕಡಾ 60 ರಷ್ಟನ್ನು ಗ್ರಾಮ ಪಂಚಾಯಿತಿಗಳ ಜನವರಿ 2014 ರಿಂದ ಮಾರ್ಚ್ 2014 ರ ಅವಧಿಯ ವಿದ್ಯುತ್ ಬಿಲ್ ಪಾವತಿಸಲು ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ.

**ಅದರಂತೆ ಈ ಕೆಳಕಂಡ ಆದೇಶ.**

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 23 ಗ್ರಾಪಂಅ 2013, ಬೆಂಗಳೂರು, ದಿನಾಂಕ: 14–02–2014.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2013–14ನೇ ಸಾಲಿನ ಶಾಸನಬದ್ಧ ಅನುದಾನದ ನಾಲ್ಕನೇ ತ್ರೈಮಾಸಿಕ ಕಂತಿನ ಮೊತ್ತ ರೂ. 14781.50 ಲಕ್ಷಗಳು (ಹದಿನಾಲ್ಕು ಸಾವಿರದ ಏಳುನೂರಾ ಎಂಬತ್ತೊಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು 2013–14 ನೇ ಸಾಲಿನ ಲೆಕ್ಕ ಶೀರ್ಷಿಕೆ 2515–00–198–1–07 (ಯೋಜನೆ) ಅಡಿಯಲ್ಲಿ 5629 ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

ಈ ಅನುದಾನದ ಮೊತ್ತವನ್ನು ಪೇಯೀಸ್ ರಸೀದಿಯ ಮೇಲೆ ಪಡೆದು ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು ನಗರ ನೀರು ಸರಬರಾಜು ಮಂಡಳಿ ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು ಇಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಉಳಿತಾಯ ಸಂಖ್ಯೆ 04462010088409 ಮುಖಾಂತರ ರಾಜ್ಯದಲ್ಲಿನ 2011 ರ ಜನಗಣತಿಯಂತೆ ಎಂಟು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ತಲಾ ರೂ. 3,00,000.00 (ಮೂರು ಲಕ್ಷ ರೂಪಾಯಿಗಳು ಮಾತ್ರ) ಮತ್ತು 2011 ರ ಜನಗಣತಿಯಂತೆ ಎಂಟು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ತಲಾ ರೂ. 2,50,000.00 (ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳಂತೆ ಅನುದಾನವನ್ನು ಈ ಕೆಳಕಂಡ ಮಾದರಿಯಲ್ಲಿ 5629 ಗ್ರಾಮ ಪಂಚಾಯಿತಿಗಳಿಗೆ ಅನುಬಂಧ–1 ರಲ್ಲಿರುವಂತೆ ಜಿಲ್ಲಾವಾರು ಬಿಡುಗಡೆ ಮಾಡಿದೆ ಮತ್ತು ಗ್ರಾಮ ಪಂಚಾಯಿತಿವಾರು ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು ಅನುಬಂಧ–2 ರಲ್ಲಿ ನೀಡಿದೆ.

1. ಎಂಟು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಪ್ರತಿ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡಿರುವ ರೂ. 3,00,000.00 (ಮೂರು ಲಕ್ಷ ರೂಪಾಯಿಗಳು ಮಾತ್ರ) ಅನುದಾನದ ಪೈಕಿ ಶೇಕಡಾ 60 ರಷ್ಟು ಅಂದರೆ ರೂ. 1,80,000.00 (ಒಂದು ಲಕ್ಷದ ಎಂಭತ್ತು ಸಾವಿರ ರೂಪಾಯಿಗಳು ಮಾತ್ರ) ನ್ನು ಮತ್ತು ಎಂಟು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರತಿ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡಿರುವ ರೂ. 2,50,000.00 (ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಅನುದಾನದ ಪೈಕಿ ಶೇಕಡಾ 60 ರಷ್ಟು ಅಂದರೆ ರೂ. 1,50,000.00 (ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ನ್ನು ಜನವರಿ 2014 ರಿಂದ ಮಾರ್ಚ್ 2014

ರ ಅವಧಿಯ ವಿದ್ಯುತ್ ಬಿಲ್ ಪಾವತಿಸುವ ಸಲುವಾಗಿ ಮೇಲ್ಕಂಡ ಸಿಂಡಿಕೇಟ್ ಬ್ಯಾಂಕಿನಿಂದ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಯ ನಂಬರ್‌ಗಳಿಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಆದೇಶಿಸಿದೆ.

2. ಎಂಟು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿಗಳು ಮತ್ತು ಎಂಟು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿಗಳು ಶೇಕಡಾ 40 ರಷ್ಟು ಅನುದಾನವನ್ನು ಅಂದರೆ ಕ್ರಮವಾಗಿ ರೂ. 1,20,000.00 (ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಮತ್ತು ರೂ. 1,00,000.00 (ಒಂದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಮಾತ್ರ ಸಿಬ್ಬಂದಿ ವೇತನಕ್ಕಾಗಿ ಮೇಲ್ಕಂಡ ಸಿಂಡಿಕೇಟ್ ಬ್ಯಾಂಕ್‌ನಿಂದ ನೇರವಾಗಿ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಯ ನಂಬರ್‌ಗಳಿಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಆದೇಶಿಸಿದೆ.

ಮೇಲ್ಕಂಡ ಉದ್ದೇಶಗಳಿಗಲ್ಲದೇ ಈ ಅನುದಾನವನ್ನು ಜಿಲ್ಲಾ ಪಂಚಾಯಿತಿ/ಗ್ರಾಮ ಪಂಚಾಯಿತಿಗಳು ಬೇರೆ ಯಾವುದೇ ಉದ್ದೇಶಕ್ಕೆ ವಿನಿಯೋಗಿಸತಕ್ಕದ್ದಲ್ಲ ಹಾಗೂ ಜಿಲ್ಲಾ ಪಂಚಾಯಿತಿಗಳು ವಿದ್ಯುತ್ ಬಿಲ್ ಪಾವತಿಸಲು ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು ದಿನಾಂಕ: 01–03–2014 ರೊಳಗಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**ಹಲವಾರು ಜಿಲ್ಲಾ ಪಂಚಾಯಿತಿಗಳು ಗ್ರಾಮ ಪಂಚಾಯಿತಿಗಳಿಗೆ ನೀಡಬೇಕಾದ ಶೇಕಡಾ 40ರಷ್ಟು ಅನುದಾನವನ್ನು ಕಳೆದ ವರ್ಷ ಬಿಡುಗಡೆ ಮಾಡುವಲ್ಲಿ 15 ದಿನಗಳಿಂದ 3–4 ತಿಂಗಳುಗಳವರೆಗೆ ವಿಳಂಬ ಮಾಡುತ್ತಿರುವುದು ಮತ್ತು ಈ ಅನುದಾನವನ್ನು ಚೆಕ್ ಅಥವಾ ಡಿ.ಡಿ. ಮುಖಾಂತರ ನೀಡುತ್ತಿರುವುದು ಹಾಗೂ ಕೆಲವು ಜಿಲ್ಲೆಗಳಲ್ಲಿ ಈ ಅನುದಾನದ ಚೆಕ್/ಡಿ.ಡಿ.ಗಳನ್ನು ತಾಲ್ಲೂಕು ಪಂಚಾಯಿತಿ ವಶಕ್ಕೆ ನೀಡಿ ನಂತರ ತಾಲ್ಲೂಕು ಪಂಚಾಯಿತಿಗಳಿಂದ ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಈ ಅನುದಾನದ ಮೊತ್ತವು ಸಿಂಡಿಕೇಟ್ ಬ್ಯಾಂಕ್ ಮುಖಾಂತರ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಗೆ ಆನ್–ಲೈನ್ ಮುಖಾಂತರ ಜಮೆಯಾದ ದಿನಾಂಕದಿಂದ 2 (ಎರಡು) ದಿನಗಳೊಳಗೆ ಸಂಬಂಧಪಟ್ಟ ಎಲ್ಲಾ ಗ್ರಾಮ ಪಂಚಾಯಿತಿಯ ಖಾತೆಗೆ ಆನ್–ಲೈನ್ ಮುಖಾಂತರ ಜಮಾ ಆಗಿರಕ್ಕದ್ದು. ಯಾವುದೇ ಕಾರಣಕ್ಕೂ ಚೆಕ್ ಅಥವಾ ಡಿ.ಡಿ. ನೀಡತಕ್ಕದ್ದಲ್ಲ. ಅನುದಾನ ಬಿಡುಗಡೆ ಆದೇಶ ಮತ್ತು ಅನುದಾನವನ್ನು ಗ್ರಾಮ ಪಂಚಾಯಿತಿಗಳಿಗೆ ಆನ್–ಲೈನ್ ಮುಖಾಂತರ ವರ್ಗಾಯಿಸಿರುವ ದಿನಾಂಕದ ಮಾಹಿತಿಯನ್ನು ಮತ್ತು ಸದರಿ ಗ್ರಾಮ ಪಂಚಾಯಿತಿ ಖಾತೆಗಳಲ್ಲಿ ಜಮಾ ಆಗಿರುವ ದಿನಾಂಕವನ್ನು ಜಿಲ್ಲಾ ಪಂಚಾಯಿತಿ ವೆಬ್ ಸೈಟ್‌ನಲ್ಲಿ ಅಪ್ ಲೋಡ್ ಮಾಡತಕ್ಕದ್ದು. ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಪ್ರತಿ ತಿಂಗಳ 5ನೇ ದಿನಾಂಕದೊಳಗೆ ವೇತನ ಪಾವತಿಸಲು ಕ್ರಮ ವಹಿಸಿ ವೇತನ ಪಾವತಿಸಿದ ವಿವರಗಳ ಮಾಹಿತಿಯನ್ನು ಪ್ರತಿ ತಿಂಗಳ 6ನೇ ದಿನಾಂಕದಂದು ಗ್ರಾಮ ಪಂಚಾಯಿತಿಗಳು ಪಂಚತಂತ್ರ ತಂತ್ರಾಂಶದಲ್ಲಿ ತಪ್ಪದೆ ಅಪ್ ಲೋಡ್ ಮಾಡತಕ್ಕದ್ದು. ಇದರಲ್ಲಿ ಯಾವುದೇ ಲೋಪವಾದಲ್ಲಿ ಸಂಬಂಧಪಟ್ಟವರಿಂದ ವಿಳಂಬದ ಅವಧಿಗೆ ಬಡ್ಡಿ ವಸೂಲಿ ಮಾಡಲು ಕ್ರಮ ವಹಿಸಲಾಗುವುದು.**

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 233 ವೆಚ್ಚ–06/2013, ದಿನಾಂಕ: 30–01–2014 ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಎಲ್.ಸಿ. ಬಸವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
(ದೂರವಾಣಿ ಸಂಖ್ಯೆ: 080–22032295)

# ¨¼UÁ« f¯AiÄ° AiÄ±¹ UÁªÄ ¸¨U¼Ä



¨¼UÁ« f¯ Cxt vÁ®ÆQ£ PÆPl£Æg UÁªÄ ¥AZÁAiÄvï£° UÁªÄ ¸¨U¼Ä AiÄ±¹AiiÁV £q¢zÄ, ««z AiÆÃd£U¼r ¥¯Á£Ä¨«U¼ DAiÄ ªÄvÄ C©ª¦¢ AiÆÃd£U¼ §U ZZð.



# KARNATAKA VIKAS : April, May, June 2014

A Monthly Magazine for Rural Development and Panchayat Raj Department, Government of Karnataka

Regd No. KA/ BGGPO/2531/2012-14, Licence to Post "without Prepayment" WPP-32

RNI No. : 28103/1974 Total No. of Pages 52, Posted at Bangalore GPO on 9th, 10th, 11th of Every Month






Published & Owned by :
**Director ( Panchayat Raj)**
Rural Development and
Panchayat Raj Department

Name of the Editor
**Y. Mahankalappa**

Place & Publications
**Karnataka Vikas**
No. 309, 3rd Floor, Gate No.1,
M.S. Building, Dr. Ambekar Veedhi,
Bangalore - 560 001.

Printed by
The Director,
**Government Press**
Bangalore, Karnataka.

Price : ` 10.00
¨ÉÉ : ` 10.00